ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 30 ಶನಿವಾರ 2023

ಸಂಪುಟ: 44 | ಸಂಚಿಕೆ: 253 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


ಹಾಸನ, ಮಂಡ್ಯ, ತುಮಕೂರು, ಕೋಲಾರ
ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ ಸ್ಪರ್ಧೆ

● ಉಳಿದ 24ರಲ್ಲಿ ಮೈತ್ರಿ ಪಕ್ಷ ಬಿಜೆಪಿ ಅಭ್ಯರ್ಥಿಗಳು ಕಣಕ್ಕೆ ● ಪ್ರಧಾನಿ ಮೋದಿ ಭೇಟಿ ನಂತರ ಕುಮಾರಸ್ವಾಮಿ ನಿರ್ಣಯ ● ಈ ನಾಲ್ಕು ಕ್ಷೇತ್ರಗಳ ಮುಖಂಡರೊಂದಿಗೆ ಸಮಾಲೋಚನೆ ಪ್ರಾರಂಭ

ಬೆಂಗಳೂರು, ಡಿ.29(ಕೆಎಂಶಿ)– ಹಾಸನ, ಮಂಡ್ಯ, ತುಮಕೂರು ಹಾಗೂ ಕೋಲಾರ ಲೋಕಸಭಾ ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧಿಸಲಿರುವ ಜೆಡಿಎಸ್ ಉಳಿದ 24 ಕ್ಷೇತ್ರಗಳಲ್ಲಿ ಮಿತ್ರ ಪಕ್ಷ ಬಿಜೆಪಿಯನ್ನು ಬೆಂಬಲಿಸಲಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲಿ ಬಿಜೆಪಿ–ಜೆಡಿಎಸ್ ಜಂಟಿಯಾಗಿ ಚುನಾವಣೆ ಎದುರಿಸಲಿವೆ. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ, ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಕಳೆದ ವಾರ ನವದೆಹಲಿಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ರಕ್ಷಣಾ ಸಚಿವ ರಾಜನಾಥ್‌ಸಿಂಗ್ ಅವರನ್ನು ಭೇಟಿ ಮಾಡಿದ ನಂತರ ಸೀಟು ಹೊಂದಾಣಿಕೆ ಅಂತಿಮಗೊಳಿಸಲಾಗಿದ್ದು, ಬಹಿರಂಗ ಪಡಿಸಲಾಗಿಲ್ಲ.

ದೆಹಲಿಯಿಂದ ಹಿಂತಿರುಗುತ್ತಿದ್ದಂತೆ ಕುಮಾರಸ್ವಾಮಿ ತಮ್ಮ ಪಾಲಿಗೆ ಬಂದಿರುವ ಕ್ಷೇತ್ರಗಳನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಆ ಕ್ಷೇತ್ರಗಳಲ್ಲಿ ಚುನಾವಣಾ ಪ್ರಕ್ರಿಯೆ ಆರಂಭಿಸಿದ್ದಾರೆ. ಪ್ರತಿನಿತ್ಯ ಈ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಶಾಸಕರು, ಮುಖಂಡರು, ಪಕ್ಷದ ಪ್ರಮುಖ ಕಾರ್ಯಕರ್ತರೊಂದಿಗೆ ನಿರಂತರ




ಚರ್ಚೆಯಲ್ಲಿದ್ದಾರೆ. ಈ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಯಾರಾಗಬೇಕು ಎಂಬುದಕ್ಕೆ ಬಿಜೆಪಿ ಜೊತೆ ಕೈಜೋಡಿಸಿ ಪ್ರತ್ಯೇಕ ಸಮೀಕ್ಷೆಯನ್ನು ಆರಂಭಿಸಿದ್ದಾರೆ.


ಬಿಜೆಪಿ ಈಗಾಗಲೇ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲೂ ಪ್ರತ್ಯೇಕ ಸಮೀಕ್ಷೆಗಳನ್ನು ನಡೆಸಿ ವರದಿ ಪಡೆದಿದ್ದರೂ ಮತ್ತೆ ಸರ್ವೇ ಕಾರ್ಯ ನಡೆಸುತ್ತಿದೆ.

ಜೆಡಿಎಸ್ ಕೈಗೊಂಡಿರುವ ಸಮೀಕ್ಷಾ ವರದಿ ಜನವರಿ ಮಧ್ಯಭಾಗದ ವೇಳೆಗೆ ಕೈಸೇರಲಿದ್ದು, ಇದನ್ನು ಆಧರಿಸಿ ಅಭ್ಯರ್ಥಿಗಳ ಆಯ್ಕೆ ನಡೆಯಲಿದೆ. ಇದಕ್ಕೂ ಮುನ್ನ ಕುಮಾರಸ್ವಾಮಿ, ಸ್ವತಃ ತಮ್ಮ ಬಿಡದಿ ತೋಟದಲ್ಲಿ ಕುಳಿತು ಕಾರ್ಯಕರ್ತರಿಂದ, ಮುಖಂಡರಿಂದ ಅಭಿಪ್ರಾಯ ಸಂಗ್ರಹಿಸುತ್ತಿದ್ದಾರೆ. ಈ ನಾಲ್ಕು ಲೋಕಸಭಾ ಕ್ಷೇತ್ರಗಳಲ್ಲಿ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಲ್ಲಿ ಏನಾದರೂ ಭಿನ್ನಾಭಿಪ್ರಾಯವಿದ್ದರೆ, ಅದನ್ನು ಬಗೆಹರಿಸುವಲ್ಲಿ ನಿರತರಾಗಿದ್ದಾರೆ. ದೆಹಲಿಯಿಂದ ಬಂದ ನಂತರ ಸಮಯ ವ್ಯರ್ಥ ಮಾಡದೆ, ಪೂರ್ಣ ಪ್ರಮಾಣದಲ್ಲಿ ತಮ್ಮನ್ನು ಚುನಾವಣಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದು, ತಮ್ಮ ಕುಟುಂಬದ ಯಾರೂ ಹಸ್ತಕ್ಷೇಪ ಮಾಡದಂತೆ ಎಚ್ಚರ ವಹಿಸಿದ್ದಾರೆ. ತುಮಕೂರು ಹಾಗೂ ಕೋಲಾರ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪಕ್ಷದ ಕಾರ್ಯಕರ್ತರ ಜೊತೆಗೆ ಬಿಜೆಪಿ ಮುಖಂಡರ ಜೊತೆಯೂ ಸಂಪರ್ಕದಲ್ಲಿದ್ದು ಸಂಘಟನೆ ಮತ್ತು ಚುನಾವಣೆ ಸಂಬಂಧ ಸಹಕಾರ ಪಡೆದುಕೊಳ್ಳುತ್ತಿದ್ದಾರೆ. ಈ ಕ್ಷೇತ್ರಗಳಲ್ಲಿ ಕಾರ್ಯಕರ್ತರನ್ನು ಒಗ್ಗೂಡಿಸುವ ಕಾರ್ಯವನ್ನು ಜನವರಿ ಮಧ್ಯಭಾಗದೊಳಗೆ ಪೂರ್ಣಗೊಳಿಸಿ ಸಂಕ್ರಾಂತಿ ನಂತರ ಚುನಾವಣಾ ಪ್ರಚಾರವನ್ನು ಆರಂಭಿಸಲು ತೀರ್ಮಾನಿಸಿದ್ದಾರೆ.

ತಾವು ಪ್ರಚಾರ ಕೈಗೊಳ್ಳುವ ಸಂದರ್ಭದಲ್ಲಿ ಬಿಜೆಪಿ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಜೊತೆಗೆ ಅವರನ್ನೂ ಈ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಲಿದ್ದಾರಂತೆ. ಜೆಡಿಎಸ್ ಬಯಸಿದಲ್ಲಿ ಬೆಂಗಳೂರು ಗ್ರಾಮಾಂತರ ಸೇರಿದಂತೆ ಹೈದರಾಬಾದ್ ಕರ್ನಾಟಕದಲ್ಲಿ ಒಂದು ಕ್ಷೇತ್ರವನ್ನು ಬಿಟ್ಟುಕೊಡಲು ಬಿಜೆಪಿ ವರಿಷ್ಠರೇ ಆಸಕ್ತಿ ತೋರಿದ್ದರು, ಆದರೆ, ಕುಮಾರಸ್ವಾಮಿ ನಾಲ್ಕು ಕ್ಷೇತ್ರಗಳಿಗೆ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಡಾ.ಎಸ್.ಎಲ್.ಭೈರಪ್ಪನವರ 'ವಂಶವೃಕ್ಷ' ಕಾದಂಬರಿ ಅನಧಿಕೃತವಾಗಿ ತೆಲುಗಿನಲ್ಲಿ ಪ್ರಕಟ; ಕಾಪಿರೈಟ್ ಉಲ್ಲಂಘಿಸಿದ ಪ್ರಕಾಶಕಿ 5.05 ಲಕ್ಷ ಪರಿಹಾರ ನೀಡುವಂತೆ ಕೋರ್ಟ್ ತೀರ್ಪು





ಮೈಸೂರು, ಡಿ.29–ಹೆಸರಾಂತ ಕಾದಂಬರಿಕಾರರಾದ ಎಸ್.ಎಲ್. ಭೈರಪ್ಪನವರ 'ವಂಶವೃಕ್ಷ' ಕೃತಿಯನ್ನು ಅವರ ಅನುಮತಿಯಿಲ್ಲದೆ ಅನಧಿಕೃತವಾಗಿ ತೆಲುಗು ಭಾಷೆಗೆ ಅನುವಾದ ಮಾಡಿ ಪ್ರಕಟಿಸುವ ಮೂಲಕ ಕಾಪಿ ರೈಟ್ ಕಾಯ್ದೆ ಉಲ್ಲಂಘಿಸಿದ್ದ ಹೈದರಾಬಾದ್‌ನ 'ಪ್ರಿಯದರ್ಶಿನಿ ಪ್ರಚುರಣಾಲು' ಪ್ರಕಾಶನದ ವತ್ಸಲಾ ಅವರು 5.05 ಲಕ್ಷ ರೂ. ಪರಿಹಾರವನ್ನು ಎಸ್.ಎಲ್.ಭೈರಪ್ಪನವರಿಗೆ ನೀಡಬೇಕೆಂದು ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ತೀರ್ಪು ನೀಡಿದೆ.

ವಿವರ: ಎಸ್.ಎಲ್. ಭೈರಪ್ಪ ಅವರು ಬರೆದು 1960ರಲ್ಲಿ ಪ್ರಕಟವಾದ ವಂಶವೃಕ್ಷ ಕಾದಂಬರಿಯು ಕನ್ನಡ ಸಾಹಿತ್ಯ ಲೋಕದಲ್ಲಿ ಹೊಸ ಆಯಾಮವನ್ನೇ ಸೃಷ್ಟಿಸಿತ್ತು. ಈ ಕಾದಂಬರಿಯನ್ನು ಸ್ನಾತಕೋತ್ತರ ಪದವಿಯ ಪಠ್ಯವಾಗಿಯೂ ನಿಗದಿಪಡಿಸಲಾಗಿತ್ತು. ಅಲ್ಲದೇ ಈ ಕಾದಂಬರಿಯನ್ನು ಆಧರಿಸಿ ಕನ್ನಡ ಚಲನಚಿತ್ರವೂ ನಿರ್ಮಾಣವಾಗಿದ್ದು, ರಾಜ್ಯದಲ್ಲಿ ಯಶಸ್ವಿ ಪ್ರದರ್ಶನ ಕಂಡಿತ್ತು.

ಎಸ್.ಎಲ್.ಭೈರಪ್ಪನವರು ತಮ್ಮ ವಂಶವೃಕ್ಷ ಕಾದಂಬರಿಯನ್ನು ತೆಲುಗು ಭಾಷೆಗೆ ಅನುವಾದಿಸುವ ಹಕ್ಕನ್ನು ಸನಗರಂ ನಾಗಭೂಷಣಂ ಎಂಬುವರಿಗೆ ನೀಡಿದ್ದರು. ಅವರು ಈ ಕಾದಂಬರಿಯನ್ನು 'ವಂಶವೃಕ್ಷಂ' ಎಂಬ ಹೆಸರಿನಲ್ಲಿ ತೆಲುಗು ಭಾಷೆಗೆ ಅನುವಾದಿಸಿದ್ದರು. ಕೆಲ ವರ್ಷಗಳ ಹಿಂದೆ ಸನಗರಂ ನಾಗಭೂಷಣಂ ಅವರು ನಿಧನರಾದರು. ಆದರೆ ಹೈದರಾಬಾದ್‌ನ ● 10ನೇ ಪುಟಕ್ಕೆ

ರೆಬೆಲ್ ಶಾಸಕರಿಗೆ ವಿಶೇಷ ಹುದ್ದೆ ಸೃಷ್ಟಿಸಿದ ಸಿದ್ದರಾಮಯ್ಯ
ಬಸವರಾಜ್ ರಾಯರೆಡ್ಡಿ, ಬಿ.ಆರ್.ಪಾಟೀಲ್, ದೇಶಪಾಂಡೆಗೆ ಸಂಪುಟ ದರ್ಜೆ ಸ್ಥಾನಮಾನ

ಬೆಂಗಳೂರು, ಡಿ.29– ನಿಗಮ ಮಂಡಳಿ ನೇಮಕ ಇನ್ನೂ ಕಗ್ಗಂಟಾಗಿ ಉಳಿದಿದೆ. ಇದರ ಬೆನ್ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವ ಸ್ಥಾನ ಸಿಗದಿದ್ದಕ್ಕೆ ಬೇಸರಗೊಂಡು ರೆಬೆಲ್ ಆಗಿರುವ ಬಸವರಾಜ್ ರಾಯರೆಡ್ಡಿ ಬಿ.ಆರ್.ಪಾಟೀಲ್ ಹಾಗೂ ಆರ್.ವಿ. ದೇಶಪಾಂಡೆಗೆ ವಿಶೇಷ ಹುದ್ದೆಗೆ ನೇಮಕ ಮಾಡಲಾಗಿದೆ. ಈ ಮೂವರಿಗೂ ಸಂಪುಟ ದರ್ಜೆ ಸ್ಥಾನಮಾನ ನೀಡಲಾಗಿದೆ.

ಕೊಪ್ಪಳ ಜಿಲ್ಲೆಯ ಉಲಬುರ್ಗಾ ಕ್ಷೇತ್ರದ ಶಾಸಕ ಬಸವರಾಜ್ ರಾಯರೆಡ್ಡಿ ಅವರನ್ನು ಸಿಎಂ ಆರ್ಥಿಕ ಸಲಹೆಗಾರರನ್ನಾಗಿ ನೇಮಕ ಮಾಡಿದರೆ, ಕಲಬುರಗಿ ಜಿಲ್ಲೆ ಆಳಂದ ಕ್ಷೇತ್ರದ ಶಾಸಕ ಬಿ.ಆರ್ ಪಾಟೀಲ್ ಅವರನ್ನು ಸಿಎಂ ಸಲಹೆಗಾರರನ್ನಾಗಿ ಮಾಡಲಾಗಿದೆ.



ಬಸವರಾಜ್ ರಾಯರೆಡ್ಡಿ | ಬಿ.ಆರ್.ಪಾಟೀಲ್ | ಆರ್.ವಿ.ದೇಶಪಾಂಡೆ

ಇನ್ನು ಉತ್ತರ ಕನ್ನಡ ಜಿಲ್ಲೆ ಹಳಿಯಾಳ ಕ್ಷೇತ್ರದ ಶಾಸಕ ಆರ್.ವಿ ದೇಶಪಾಂಡೆ ಅವರನ್ನು ಆಡಳಿತ ಸುಧಾರಣಾ ಆಯೋಗ ಅಧ್ಯಕ್ಷ ರಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಈ ಮೂವರಿಗೂ ರಾಜ್ಯ ಸರ್ಕಾರ ಸಂಪುಟ ದರ್ಜೆ ಸ್ಥಾನಮಾನ ನೀಡಿದೆ. ಈ ಮೂವರು ಶಾಸಕರಿಗೆ ನಿಗಮ ಮಂಡಳಿ ನೀಡಲು ಹೈಕಮಾಂಡ್ ಹಾಗೂ ಸಿದ್ದರಾಮಯ್ಯ ಇನ್ನಿಲ್ಲದ ಕಸರತ್ತು ನಡೆಸಿದ್ದರು. ಆದರೆ, ಇವರು ನಿರಾಕರಿಸಿದ್ದು, ಖುದ್ದು ಎಐಸಿಸಿ ಕಾರ್ಯದರ್ಶಿ ವೇಣುಗೋಪಾಲ್, ● 10ನೇ ಪುಟಕ್ಕೆ

ಅತಿಥಿ ಉಪನ್ಯಾಸಕರ ಮಾಸಿಕ ವೇತನದಲ್ಲಿ 5 ಸಾವಿರ ಹೆಚ್ಚಳ

● ಸರ್ಕಾರಿ ಪದವಿ ಕಾಲೇಜು 7800 ಉಪನ್ಯಾಸಕ ನೇಮಕ ● ಸದ್ಯಕ್ಕೆ ಇವರ ಖಾಯಂ ಮಾಡಲು ಸಾಧ್ಯವಿಲ್ಲ ● ಜೇಷ್ಠತೆ ಆಧರಿಸಿ ಗೌರವಧನ ಹೆಚ್ಚಳ; 60 ವರ್ಷ ಮೇಲ್ಪಟ್ಟವರಿಗೆ 5 ಲಕ್ಷ ಪರಿಹಾರ ಧನದ ಜೊತೆಗೆ ಆರೋಗ್ಯ ವಿಮೆ ● ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಮಾಹಿತಿ

ಬೆಂಗಳೂರು, ಡಿ.29(ಕೆಎಂಶಿ)– ಸರ್ಕಾರಿ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 7,800 ಉಪನ್ಯಾಸಕ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ತಿಳಿಸಿರುವ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಅತಿಥಿ ಉಪನ್ಯಾಸಕರ ಮಾಸಿಕ ವೇತನದಲ್ಲಿ 5,000 ರೂ. ಹೆಚ್ಚಳ ಮಾಡಲು ತೀರ್ಮಾನಿಸಲಾಗಿದೆ ಎಂದಿದ್ದಾರೆ.

ಮುಷ್ಕರ ನಿರತ ಅತಿಥಿ ಉಪನ್ಯಾಸಕ ಸಂಘಟನೆಗಳ ಜೊತೆ ಇಂದಿಲ್ಲಿ ಚರ್ಚೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಚಿವರು, ಅತಿಥಿ ಉಪನ್ಯಾಸಕರನ್ನು ಸದ್ಯಕ್ಕೆ ಖಾಯಂ ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮುಂದಿನ ನೇಮಕಾತಿ ಸಂದರ್ಭದಲ್ಲಿ ಐದರಿಂದ 10 ವರ್ಷಗಳ ಕಾಲ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುವವರಿಗೆ ವರ್ಷಕ್ಕೆ ಒಂದು ಅಂಕದಂತೆ ಐದು ಗರಿಷ್ಠ ಅಂಕಗಳನ್ನು ನೀಡಲು ತೀರ್ಮಾನಿಸಲಾಗಿದೆ. ಇದರಿಂದ 300 ಅಂಕಗಳ ಪರೀಕ್ಷೆಯಲ್ಲಿ 15 ಕೃಪಾಂಕಗಳು ಇವರಿಗೆ ಲಭ್ಯವಾಗಲಿವೆ, ಹಾಲಿ 1,800 ಉಪನ್ಯಾಸಕರ ನೇಮಕಾತಿ ಚಾಲನೆಯಲಿದ್ದು ಮತ್ತೆ 6,000 ಉಪನ್ಯಾಸಕರ ನೇಮಕಾತಿಗೆ ಹಣಕಾಸು ಇಲಾಖೆಯ ಅನುಮತಿ ಕೋರಲಾಗಿದೆ ಎಂದರು. ಅತಿಥಿ ಉಪನ್ಯಾಸಕರಿಗೆ ಮಾಸಿಕ 5,000 ರೂ. ವೇತನ ಹೆಚ್ಚಳದೊಂದಿಗೆ ಒಂದು ದಿನ ವೇತನ ಸಹಿತ ರಜೆ ನೀಡಲಾಗುವುದು ಎಂದರು. ಇವರನ್ನು ಗೌರವದಿಂದ ನಡೆಸಿಕೊಳ್ಳುವಂತೆ



ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ ಆದೇಶಿಸಲಾಗಿದೆ, ಜೊತೆಗೆ ವರ್ಕ್ ಲೋಡ್ ಬಗ್ಗೆಯೂ ಮಾಹಿತಿ ನೀಡಿದ್ದೇವೆ.

ಅರವತ್ತು ವರ್ಷ ಪೂರೈಸಿದ ಅತಿಥಿ ಉಪನ್ಯಾಸಕರು ಕೆಲಸ ಬಿಡುವಾಗ 5 ಲಕ್ಷ ರೂ. ನೀಡಲು ನಿರ್ಧರಿಸಿದ್ದು, ಇವರಿಗೆ ಆರೋಗ್ಯ ವಿಮೆ ● 10ನೇ ಪುಟಕ್ಕೆ

ಚಾಮುಂಡಿಬೆಟ್ಟದಲ್ಲಿ ರೋಪ್ ವೇ ನಿರ್ಮಾಣಕ್ಕೆ ಸಂಸದ ಪ್ರತಾಪ್ ಸಿಂಹ ತೀವ್ರ ವಿರೋಧ



ಪತ್ರಿಕಾಗೋಷ್ಠಿಯಲ್ಲಿ ಪ್ರತಾಪ್ ಸಿಂಹರೊಂದಿಗೆ ಶಾಸಕ ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಅನಿಲ್‌ಥಾಮಸ್ ಇದ್ದಾರೆ.

ಮೈಸೂರು,ಡಿ.29(ಬಿಎಲ್‌ಯು)–ಚಾಮುಂಡಿ ಬೆಟ್ಟದಲ್ಲಿ ರೋಪ್ ವೇ ನಿರ್ಮಾಣ ಮಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಸ್ತಾಪಕ್ಕೆ ಸಂಸದ ಪ್ರತಾಪ್‌ಸಿಂಹ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಈ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಜಿ.ಟಿ.ದೇವೇಗೌಡರ ಅಧ್ಯಕ್ಷತೆಯ ಸಭೆಯಲ್ಲಿ ರೋಪ್ ವೇ ನಿರ್ಮಾಣ ಮಾಡಬಾರದೆಂಬ ತೀರ್ಮಾನ ಕೈಗೊಳ್ಳಲಾಗಿತ್ತು ಎಂದು ತಿಳಿಸಿದರು.

ಚಾಮುಂಡಿಬೆಟ್ಟ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಯ ಭಕ್ತಿ ಪ್ರಧಾನ ಸ್ಥಳ. ಶ್ರದ್ಧಾ ಕೇಂದ್ರ. ಪ್ರವಾಸಿಗರಿಗೆ ಇದು ರಮಣೀಯ ದೃಶ್ಯ ನೋಡುವ ಸ್ಥಳವಲ್ಲ. ಹೀಗಿರುವಾಗ ಭಕ್ತಿ ಕೇಂದ್ರದಲ್ಲಿ ರೋಪ್ ವೇ ಮಾಡಬಾರದು. ಇದಕ್ಕೆ ನನ್ನ ತೀವ್ರ ವಿರೋಧವಿದೆ ಎಂದು ಪ್ರತಾಪ್ ಸಿಂಹ ಹೇಳಿದರು.

ಬೆಂಗಳೂರಿನ ನಂದಿಬೆಟ್ಟದಲ್ಲಿ ಬೇಕಿದ್ದರೆ ರೋಪ್ ವೇ ನಿರ್ಮಾಣ ಮಾಡಲಿ. ಅದು ರಮಣೀಯ ಸ್ಥಳವಾದ ಕಾರಣ ರೋಪ್ ವೇ ಅಗತ್ಯವಿದೆ. ಅದು ಬಿಟ್ಟು ಶ್ರದ್ಧಾ ಭಕ್ತಿ ಕೇಂದ್ರದಲ್ಲಿ ರೋಪ್ ವೇ ಮಾಡುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು.

ಶ್ರೀರಾಮನ ಜನ್ಮ ಸ್ಥಳ ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಜ.24 ರಂದು ರಾಮಮಂದಿರ ಉದ್ಘಾಟನೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಎಲ್ಲಾ ದೇವಸ್ಥಾನಗಳಲ್ಲಿ ಅಂದು ವಿಶೇಷ ಪೂಜೆ, ಪುನಸ್ಕಾರ, ಭಜನೆ ನಡೆಸುವಂತೆ ಪ್ರತಾಪ್ ಸಿಂಹ ಮೈಸೂರು ಹಾಗೂ ಕೊಡಗು ಜನರಲ್ಲಿ ಮನವಿ ಮಾಡಿದರು. ಈ ಸಂಬಂಧ ಬಿಜೆಪಿ ಕಾರ್ಯಕರ್ತರು ಎಲ್ಲಾ ದೇವಸ್ಥಾನಗಳಿಗೆ ಭೇಟಿ ನೀಡಿ ಮನವಿ ಮಾಡಲಿದ್ದಾರೆ.

> **"ಮೈಸೂರಿನಿಂದ ಕೊಚ್ಚಿ, ಗೋವಾ ಸೇರಿದಂತೆ ಇತರೆಡೆಗೆ ಪ್ರಯಾಣ ಮಾಡಲು ಬೇಡಿಕೆ ಇದ್ದರೂ ಎಟಿಆರ್ ವಿಮಾನಗಳ ಲಭ್ಯತೆ ಇಲ್ಲ. ಅಲೈಯನ್ಸ್ ಏರ್ ಸೇರಿದಂತೆ ಕೆಲವು ವಿಮಾನ ಯಾನ ಸಂಸ್ಥೆಗಳ ಎಟಿಆರ್ ವಿಮಾನಗಳು ಮೈಸೂರಿನಿಂದ ಹಾರಾಟ ನಡೆಸುತ್ತಿದ್ದವು. ಆದರೆ ಎಟಿಆರ್ ವಿಮಾನಗಳು ರಿಪೇರಿಗೆ ಬಂದಿರುವುದರಿಂದ ಹಾರಾಟ ಸ್ಥಗಿತವಾಗಿದೆ. ಆದರೂ ಸ್ಟಾರ್ ಏರ್ ವಿಮಾನ ಸಂಸ್ಥೆಯ ಎಟಿಆರ್ ವಿಮಾನಗಳ ಹಾರಾಟ ನಡೆಸಲು ಮಾತುಕತೆ ನಡೆಸಲಾಗುತ್ತಿದೆ. ಇಂಡಿಗೋ ಸೇರಿದಂತೆ ಹಲವು ವಿಮಾನ ಯಾನ ಸಂಸ್ಥೆಗಳ ದೊಡ್ಡ ವಿಮಾನಗಳು ಹಾರಾಟ ನಡೆಸಲು ಸಿದ್ಧವಿದೆ. ಆದರೆ ಇವುಗಳಿಗೆ ಅವಶ್ಯವಿರುವ ರನ್ ವೇ ಇಲ್ಲದ ಕಾರಣ ಅದು ಸಾಧ್ಯವಾಗಿಲ್ಲ. ಮೈಸೂರು ವಿಮಾನ ನಿಲ್ದಾಣ ಮೇಲ್ದರ್ಜೆಗೇರಿಸಿದರೆ 2.75 ಕಿ.ಮೀ. ರನ್ ವೇ ನಿರ್ಮಾಣವಾಗಲಿದ್ದು, ಆಗ ಅಂತರಾಷ್ಟ್ರೀಯ ಮಟ್ಟದಲ್ಲೂ ವಿಮಾನಗಳು ಹಾರಾಟ ನಡೆಸಲಿವೆ. ಅಲ್ಲಿಯವರೆಗೆ ಮೈಸೂರಿನಿಂದ ವಿವಿಧೆಡೆಗೆ ಪ್ರಯಾಣಿಸುವ ಪ್ರಯಾಣಿಕರಿಗೆ ತೊಂದರೆ ಇದ್ದೇ ಇದೆ.** – ಪ್ರತಾಪ್ ಸಿಂಹ ಸಂಸದ

ಸೆಮಿ ಕಂಡಕ್ಟರ್ ಘಟಕ ತೆಲಂಗಾಣ ಪಾಲು
ಭೂಮಿ ನೀಡದ ಕಾಂಗ್ರೆಸ್ ಸರ್ಕಾರದ ನಡೆಗೆ ಆಕ್ರೋಶ

ಮೈಸೂರು, ಡಿ.2(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರ ಭೂಮಿ ನೀಡದೇ ಇದ್ದಿದ್ದಕ್ಕಾಗಿ ಮೈಸೂರಿನಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿದ್ದ ಸೆಮಿ ಕಂಡಕ್ಟರ್ ಘಟಕ ತೆಲಂಗಾಣದ ಪಾಲಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ಆರೋಪಿಸಿದರು. ಮೈಸೂರಿನ ಕೋಚನಹಳ್ಳಿಯಲ್ಲಿ ಸೆಮಿ ಕಂಡಕ್ಟರ್ ಪಾರ್ಕ್ ಮಾಡಲು ನಮ್ಮ ಬಿಜೆಪಿ ಸರ್ಕಾರ ಭೂಮಿ ಮೀಸಲಿಟ್ಟಿತ್ತು. ಇದಕ್ಕಾಗಿ ಗಾಲ್ಫ್‌ಗೆ ನೀಡಿದ್ದ ಜಾಗವನ್ನು ವಾಪಸು ಪಡೆಯಲಾಗಿತ್ತು. ಸೆಮಿ ಕಂಡಕ್ಟರ್ ಪಾರ್ಕ್ ಸ್ಥಾಪನೆಗಾಗಿ ಡಿಪಿಆರ್ ಕೂಡ ಸಿದ್ಧಪಡಿಸಲಾಗಿತ್ತು. ಇದನ್ನು ಮನಗಂಡು ಕೇನ್ಸ್ ಕಂಪನಿಯವರು ಇಲ್ಲಿ ಸೆಮಿಕಂಡಕ್ಟರ್ ಘಟಕ ಸ್ಥಾಪನೆ ಮಾಡಲು ಮುಂದಾಗಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಜೊತೆ ಒಪ್ಪಂದ ಕೂಡ ಮಾಡಿಕೊಂಡಿತ್ತು ಎಂದು ವಿವರಿಸಿದರು.

ಕೇನ್ಸ್ ಕಂಪನಿ ಜೊತೆ ಒಪ್ಪಂದ ಮಾಡಿಕೊಳ್ಳುವಾಗ ಸಿದ್ದರಾಮಯ್ಯ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಫೋಟೋಗೆ ಫೋಸ್ ಕೂಡ ನೀಡಿದರು. ಆದರೆ ಕೇನ್ಸ್ ಕಂಪನಿಗೆ ಭೂಮಿ ನೀಡಲಿಲ್ಲ ಇದರಿಂದ ಅವರು ಮೈಸೂರು ಬಿಟ್ಟು ತೆಲಂಗಾಣಕ್ಕೆ ● 10ನೇ ಪುಟಕ್ಕೆ

ಸದ್ಯವೇ ಮೈಸೂರು ವಿಮಾನ ನಿಲ್ದಾಣ ಮೇಲ್ದರ್ಜೆಗೇರಿಸುವ ಕಾಮಗಾರಿ ಆರಂಭ

● 2.75 ಕಿ.ಮೀ. ರನ್‌ವೇ ನಿರ್ಮಾಣ * ಬೆಂಗಳೂರು–ಊಟಿ ಹೆದ್ದಾರಿ ಸ್ಥಳಾಂತರಕ್ಕೆ ನಿರ್ಧಾರ ● 40 ವರ್ಷದಿಂದ ಯಾವ ಸಂಸದನೂ ನನ್ನಷ್ಟು ಅಭಿವೃದ್ಧಿ ಮಾಡಿಲ್ಲ



ಮೈಸೂರು, ಡಿ.29(ಬಿಎಲ್‌ಯು)–ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಶೀಘ್ರವೇ ಆರಂಭಿಸಲಾಗುವುದು ಎಂದು ಸಂಸದ ಪ್ರತಾಪ್‌ಸಿಂಹ ತಿಳಿಸಿದರು.

ವಿಮಾನ ನಿಲ್ದಾಣ ಮೇಲ್ದರ್ಜೆಗೇರಿಸುವ 319 ಕೋಟಿ ರೂಪಾಯಿ ಯೋಜನೆ ರೂಪಿಸಲಾಗಿದೆ. 240 ಎಕರೆಯ ಭೂ ಸ್ವಾಧೀನಕ್ಕಾಗಿ ಈಗಾಗಲೇ 175 ಕೋಟಿ ರೂಪಾಯಿ ನೀಡಿದ್ದು, ಇದರಲ್ಲಿ 85 ಎಕರೆಗೆ 154 ಕೋಟಿ ರೂಪಾಯಿಗಳನ್ನು ರೈತರಿಗೆ ಪರಿಹಾರ ನೀಡಲಾಗಿದೆ. ಸರ್ಕಾರಿ ಭೂಮಿ 44 ಎಕರೆ ಹೊರತುಪಡಿಸಿ ಇನ್ನುಳಿದ 137 ಎಕರೆ ಭೂಸ್ವಾಧೀನಕ್ಕಾಗಿ ಪ್ರಕ್ರಿಯೆಗಳು ನಡೆಯುತ್ತಿದೆ. ಕೆಲವೇ ದಿನಗಳಲ್ಲಿ ಭೂಮಿ ಪೂಜೆ ನೆರವೇರಿಸಲು ಯುದ್ಧೋಪಾದಿಯಲ್ಲಿ ತಯಾರಿಗಳು ನಡೆಯುತ್ತಿದೆ ಎಂದು ಪ್ರತಾಪ್ ಸಿಂಹ ಅಂಕಿ ಅಂಶಗಳ ವಿವರ ನೀಡಿದರು. ಮೇಲ್ದರ್ಜೆಗೇರಿಸುವ ವಿಮಾನ ನಿಲ್ದಾಣದಲ್ಲಿ ರನ್ ವೇ 2.75 ಕಿಲೋಮೀಟರ್ ಇರಲಿದೆ. ಈ ಮೊದಲು ಅಂಡರ್ ಪಾಸ್ ಮೇಲೆ ರನ್ ವೇ ನಿರ್ಮಾಣ ಮಾಡುವ ಯೋಜನೆ ಇತ್ತು. ಆದರೆ ಭದ್ರತೆಯ ದೃಷ್ಟಿಯಿಂದ ಈ ಯೋಜನೆ ಕೈ ಬಿಡಲಾಗಿದೆ. ಇದರಿಂದ ಹೆದ್ದಾರಿಯ ಮಾರ್ಗ ಬದಲಾವಣೆಗೆ ತೀರ್ಮಾನ ಮಾಡಲಾಗಿದೆ ಎಂದು ಹೇಳಿದರು.

ಮಾರ್ಗ ಬದಲಾವಣೆಗಾಗಿ ವಿಮಾನ ನಿಲ್ದಾಣ ಪ್ರಾಧಿಕಾರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಈಗಾಗಲೇ 534 ಕೋಟಿ ರೂಪಾಯಿ ನೀಡಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಉಳಿದ ಹಣವನ್ನು ತಾನು ಭರಿಸಿ ಹೆದ್ದಾರಿ ● 10ನೇ ಪುಟಕ್ಕೆ

ಇಂದು 'ದಲಿತರ ನಡೆ ಬೌದ್ಧ ಧರ್ಮದ ಕಡೆ' ವಿಚಾರ ಸಂಕಿರಣ



ಮೈಸೂರು, ಡಿ.29(ಜಿಎ)–ಡಾ. ಬಿ.ಆರ್.ಅಂಬೇಡ್ಕರ್ ಅವರ 67ನೇ ಪರಿನಿಬ್ಬಾಣ ದಿನದ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಬುದ್ಧವಾದ) ಮೈಸೂರು ಜಿಲ್ಲಾ ಶಾಖೆ ವತಿಯಿಂದ ಡಿ.30 ರಂದು ಬೆಳಿಗ್ಗೆ 10.30ಕ್ಕೆ 'ದಲಿತರ ನಡೆ ಬೌದ್ಧ ಧರ್ಮದ ಕಡೆ' ವಿಷಯ ಕುರಿತು ವಿಚಾರ ಸಂಕಿರಣವನ್ನು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಸಮಿತಿಯ ರಾಜ್ಯ ಸಂಚಾಲಕ ನಿಂಗರಾಜ್ ಮಲ್ಲಾಡಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಮಾಜಿ ಮೇಯರ್ ಪುರುಷೋತ್ತಮ್ ಉದ್ಘಾಟಿಸಲಿದ್ದು, ಕರ್ನಾಟಕ ಬುದ್ಧ ಧರ್ಮ ಸಮಿತಿಯ ಕಾರ್ಯದರ್ಶಿ ಆರ್.ಮಹದೇವಪ್ಪ ವಿಷಯ ಮಂಡನೆ ಮಾಡಲಿದ್ದಾರೆ. ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ದಸಂಸ ಬಣ ರಹಿತ ಜಿಲ್ಲಾ ಸಂಚಾಲಕರಾದ ಉಮಾ ಮಹದೇವ್, ಎಚ್.ಡಿ.ಕೋಟೆ ಜೀವಿಕ ಸಂಸ್ಥೆಯ ಜೀವಿಕ ಬಸವರಾಜು, ಹಿರಿಯ ದಲಿತ ಮುಖಂಡ ತಟ್ಟೆಕೆರೆ ನಾಗರಾಜು ಸೇರಿದಂತೆ ಇತರ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಅಂದಿನ ಸಮಾರಂಭದಲ್ಲಿ ಸಮಾಜ ಸೇವಕ ಡಾ.ಎಸ್.ಎ.ನರಸಿಂಹೇಗೌಡ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಜೆ.ಚಿಕ್ಕಜವರಪ್ಪ, ಮಾಜಿ ಪುರಸಭಾ ಅಧ್ಯಕ್ಷ ಬಿ.ಚಲುವರಾಜು ಅವರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

"ಮೈಸೂರಿನ ದಿವಾಸ್ಸ್ ರಸ್ತೆಯ ಅಂಬೇಡ್ಕರ್ ಭವನ ಕಾಮಗಾರಿ ಪೂರ್ಣಗೊಳಿಸಲು 19 ಕೋಟಿ ರೂ. ಅಗತ್ಯವಿದೆ. ಆದರೆ, ಸರ್ಕಾರ ಗ್ಯಾರೆಂಟಿಗಳಿಗೆ ಅನುದಾನದ ಹಣ ಬೇಕಿರುವುದರಿಂದ ಒಂದು ವರ್ಷ ಯಾವುದೇ ಕಾಮಗಾರಿಗೆ ಅನುದಾನವಿಲ್ಲ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದ್ದರಿಂದ ಭವನದ ಕಾಮಗಾರಿ ಪೂರ್ಣಗೊಳ್ಳುತ್ತಿಲ್ಲ.
–ನಿಂಗರಾಜ್ ಮಲ್ಲಾಡಿ, ರಾಜ್ಯ ಸಂಚಾಲಕ

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಕೆ.ನಂಜಪ್ಪ ಬಸವನಗುಡಿ, ಸಂಚಾಲಕ ಎಚ್.ಬಿ.ದಿವಾಕರ್, ಮೈಸೂರು ನಗರ ಸಂಚಾಲಕ ಕೃಷ್ಣ ಅಶೋಕಪುರಂ ಉಪಸ್ಥಿತರಿದ್ದರು.

ಕನ್ನಡಿಗನೇ ಸಾರ್ವಭೌಮ, ಉಳಿದವರು ಅತಿಥಿಗಳು ಎಂದು ಕಾನೂನು ಜಾರಿ ಮಾಡಿ



ಮೈಸೂರು, ಡಿ.29(ಜಿಎ)–ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಸರ್ಕಾರಿ, ಅರೆ ಸರ್ಕಾರಿ, ಕಾರ್ಖಾನೆ, ಯಾವುದೇ ಖಾಸಗಿ ಕಂಪನಿ ಉದ್ಯೋಗದಲ್ಲಿ ಮೊದಲ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದ ಕರುನಾಡ ರಕ್ಷಣಾ ವೇದಿಕೆಯ ರಾಜ್ಯ ಕಾರ್ಯದರ್ಶಿ ಎಚ್.ಎಂ.ಸತೀಶ್, ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ, ಮಿಕ್ಕ ಎಲ್ಲರೂ ಅತಿಥಿಗಳು ಎಂದು ಕಾನೂನು ಮಾಡಬೇಕು ಎಂದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಘೋಷಿಸಿರುವಂತೆ 2024 ರ ಫೆ.24ರೊಳಗೆ ರಾಜ್ಯದ ಎಲ್ಲೆಡೆಯೂ ಶೇ.60ರಷ್ಟು ಕನ್ನಡ ಬಳಕೆ ಅನುಷ್ಠಾನಗೊಳಿಸಲು ಮುಂದಾಗಬೇಕು. ನಿರ್ಲಕ್ಷ್ಯ ಮಾಡುವವರ ವಿರುದ್ಧ ಕಾನೂನಾತ್ಮಕವಾಗಿ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕನ್ನಡಪರ ಹೋರಾಟ ಮಾಡುವ ಸಂಘಟನೆಗಳಿಗೆ ಹಾಗೂ ಸಂಘಟಕರಿಗೆ ಕಾನೂನು ರೀತಿಯಲ್ಲಿ ಸೂಕ್ತ ಭದ್ರತೆ ಹಾಗೂ ರಕ್ಷಣೆಯನ್ನು ಒದಗಿಸಬೇಕು. ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ ಪ್ಲಾಸ್ಟಿಕ್ ಮುಕ್ತ ಮಾಡುವುದರ ಮೂಲಕ ಪರಿಸರ ವಿಷಯುಕ್ತ ಆಗುವುದನ್ನು ತಡೆಗಟ್ಟಿ ಎಲ್ಲಾ ಜೀವ ರಾಶಿಗಳನ್ನು ರಕ್ಷಿಸಲು ಮುಂದಾಗಬೇಕು. ಪ್ರತಿಯೊಬ್ಬ ನಾಗರೀಕನೂ ಕೂಡ ಸಂಚಾರಿ ನಿಯಮಗಳನ್ನು ಪಾಲಿಸುವುದರ ಮೂಲಕ ಅಮೂಲ್ಯ ಜೀವಗಳನ್ನು ಕಾಪಾಡಿ ಅಪಘಾತಗಳು ಸಂಭವಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ಮನವಿ ಮಾಡಿದರು.

ಎಲ್ಲಾ ಸರ್ಕಾರಿ ಕಚೇರಿ, ಖಾಸಗಿ ಕಂಪನಿ, ಕಾರ್ಖಾನೆ, ಎಲ್ಲಾ ಅಂಗಡಿಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸಿ ಉಳಿಸುವುದು, ಪ್ಲಾಸ್ಟಿಕ್ ಬಳಕೆಯ ಸಂಪೂರ್ಣ ನಿಷೇಧಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವ ಅಭಿಯಾನವನ್ನು ವೇದಿಕೆಯು ಹಮ್ಮಿಕೊಂಡಿದ್ದು, ಇದಕ್ಕೆ ಪ್ರತಿಯೊಬ್ಬರೂ ಬೆಂಬಲ ನೀಡಬೇಕು ಎಂದು ಕರೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆಯ ರಾಜ್ಯಾಧ್ಯಕ್ಷ ಬಸವರಾಜು, ರಾಜ್ಯ ಯುವ ಘಟಕದ ಅಧ್ಯಕ್ಷ ಎಸ್.ಸಂಜಯ್, ಜಿಲ್ಲಾಧ್ಯಕ್ಷ ಕೆ.ವೇಣು ಗೋಪಾಲ್, ನಗರಾಧ್ಯಕ್ಷ ಹರ್ಷಿತ್‌ಗೌಡ, ನಗರ ಉಪಾಧ್ಯಕ್ಷ ಎನ್.ಮಹೇಶ್, ಚೇತನ್‌ರಾಜ್ ಉಪಸ್ಥಿತರಿದ್ದರು.

ಮೈಸೂರಲ್ಲಿ ವೈಭವದ ದತ್ತ ಜಯಂತಿ ಆಚರಣೆ




ಮೈಸೂರು,ಡಿ.28–ಹುಣ್ಣಿಮೆ ದಿನವಾದ ಮಂಗಳವಾರ ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಹೊಯ್ಸಳ ಕರ್ನಾಟಕ ಸಂಘದ ಆವರಣದಲ್ಲಿ ದತ್ತ ಜಯಂತಿಯನ್ನು ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ ವತಿಯಿಂದ ಅತ್ಯಂತ ವೈಭವದಿಂದ ಆಚರಿಸಲಾಯಿತು. ದತ್ತ ಸ್ವರೂಪಿ ಶ್ರೀ ವೆಂಕಟಾಚಲ ಅವಧೂತರ ಆಶೀರ್ವಾದದೊಂದಿಗೆ ಏರ್ಪಡಿಸಲಾಗಿದ್ದ ಕಾರ್ಯಕ್ರಮವನ್ನು ದತ್ತಾತ್ರೇಯ ಮತ್ತು ಅವಧೂತರ ಚಿತ್ರಪಟಗಳಿಗೆ ಅರ್ಜುನ ಅವಧೂತರು ಪುಷ್ಪಾರ್ಚನೆ ಮಾಡಿ ಆರತಿ ಬೆಳಗುವ ಮೂಲಕ ಉದ್ಘಾಟಿದರು.

ಈ ವೇಳೆ ವೇದ–ಘೋಷಗಳು, ದತ್ತ ನಾಮ ಸ್ಮರಣೆ ಮೊಳಗಿತು.

ಹೊಸ ವರುಷದ ಹೊಸ ಹೆಜ್ಜೆ ಕಾರ್ಯಕ್ರಮ

ಮೈಸೂರು, ಡಿ. 29– ಮೈಸೂರಿನ ಕಲಾ ಸೌರಭ ಗಾನ ವೃಂದದ ವತಿಯಿಂದ ವಾರ್ಷಿಕೋತ್ಸವದ ಅಂಗವಾಗಿ ಜ. 1 ರಂದು ಸಂಜೆ 6 ಗಂಟೆಗೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಹೊಸ ವರುಷದ ಹೊಸ ಹೆಜ್ಜೆ, ಕನ್ನಡ ಚಲನಚಿತ್ರಗೀತೆಗಳ ಗಾಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿ ಹೊರತಂದಿರುವ 2024ನೇ ಸಾಲಿನ ಕ್ಯಾಲೆಂಡರ್ ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಬಿಡುಗಡೆ ಮಾಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ವಿಜಯಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಮೂರ್ತಿ, ಜಿಲ್ಲಾ ಕಾನೂನು ಘಟಕದ ಅಧ್ಯಕ್ಷ ತಿಮ್ಮಯ್ಯ, ಜಿಲ್ಲಾ ಕಾನೂನು ಘಟಕದ ಉಪಾಧ್ಯಕ್ಷ ಪಾಳ್ಯ ಸುರೇಶ್, ಪ್ರಧಾನ ಕಾರ್ಯದರ್ಶಿ ಕಾಂತರಾಜು, ಚರಣ್ ರಾಜ್, ಅಭಿಷೇಕ್, ಬಸವರಾಜು, ಗಿರೀಶ್, ಮನವಾಳೆ, ತನುಜ, ಸುರೇಶ್ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಇಂದು ಗಿರಿಜನ ಉತ್ಸವ

ಮೈಸೂರು,ಡಿ.29– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಿ.30 ರಂದು ಬೆಳಗ್ಗೆ 10.30ಕ್ಕೆ ನಗರದ ಕರ್ನಾಟಕ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಗಿರಿಜನ ಉಪಯೋಜನೆಯಡಿ ಗಿರಿಜನ ಉತ್ಸವವನ್ನು ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಉಪಸ್ಥಿತಿಯಲ್ಲಿ, ಕಾರ್ಯಕ್ರಮವನ್ನು ಸಮಾಜ ಕಲ್ಯಾಣ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ಉದ್ಘಾಟಿಸಲಿದ್ದು, ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರಾದ ಕೆ. ವೆಂಕಟೇಶ್ ಉಪಸ್ಥಿತಿಯಲ್ಲಿ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಕೆ.ಹರೀಶ್‌ಗೌಡ ವಹಿಸುವರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸುವರು.

ಸಮಾರಂಭದಲ್ಲಿ ಶಾಸಕರಾದ ತನ್ವೀರ್ ಸೇಠ್, ಅನಿಲ್ ಕುಮಾರ್ ಸಿ, ಜಿ.ಟಿ. ದೇವೇಗೌಡ, ರವಿಶಂಕರ್ ಡಿ, ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ. ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಹೆಚ್ ವಿಶ್ವನಾಥ್, ಡಾ. ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ ಹಾಗೂ ಸಿ.ಎನ್. ಮಂಜೇಗೌಡ ಭಾಗವಹಿಸುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೇಂದ್ರದ ಯೋಜನೆಗಳ ಅರಿವಿಗೆ 'ವಿಕಸಿತ ಭಾರತ ಸಂಕಲ್ಪ ಯಾತ್ರೆ'



ಮೈಸೂರು,ಡಿ.29(ಎಂಟಿವೈ)–ಮೈಸೂರಿನ ಕೆ.ಜಿ.ಕೊಪ್ಪಲಿನ ಚಂದ್ರಮೌಳೇಶ್ವರ ದೇವಾಲಯದ ಮುಂಭಾಗ ಆಯೋಜಿಸಿದ್ದ 'ವಿಕಸಿತ ಭಾರತ ಸಂಕಲ್ಪ ಯಾತ್ರೆ' ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.


ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ಪಂಜಾಬ್ ನ್ಯಾಷನಲ್ ಬ್ಯಾಂಕ್ ಸರಸ್ವತಿಪುರಂ ಶಾಖೆ ವತಿಯಿಂದ ಆಯೋಜಿಸಿದ್ದ ವಿಕಸಿತ ಭಾರತ ಸಂಕಲ್ಪ ಯಾತ್ರೆಗೆ ಮಾಜಿ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೈಗೊಂಡಿರುವ ಅಭಿವೃದ್ಧಿ ಯೋಜನೆ ಹಾಗೂ ಜನೋಪಯೋಗಿ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಎಲ್ಲೆಡೆ ವಿಕಸಿತ ಭಾರತ ಸಂಕಲ್ಪ ಯಾತ್ರೆ ನಡೆಸಲಾಗುತ್ತಿದೆ. ಅಲ್ಲದೆ, ವಿವಿಧ ಯೋಜನೆಗಳ ಮಾಹಿತಿ ನೀಡುವುದರೊಂದಿಗೆ ಸಾಲ ಸೌಲಭ್ಯ, ವಿಮಾ ಸೌಲಭ್ಯಗಳ ಬಗ್ಗೆಯೂ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮಹತ್ತರವಾದ ಯೋಜನೆಗಳಾದ ಪ್ರಧಾನಮಂತ್ರಿ ಜನ್‌ಧನ್ ಯೋಜನೆ (ಪಿಎಂಜೆಡಿವೈ), ಪ್ರಧಾನಮಂತ್ರಿ ಜೀವನ್ ಬೀಮಾ ಯೋಜನೆ(ಪಿಎಂಜೆಜೆಬಿವೈ), ಪ್ರಧಾನಮಂತ್ರಿ ಸುರಕ್ಷಾ ಬೀಮಾ ಯೋಜನೆ(ಪಿಎಂಎಸ್‌ಬಿವೈ), ಅಟಲ್ ಪೆನ್ಷನ್ ಯೋಜನೆ, ಸ್ವನಿಧಿ ಯೋಜನೆ, ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಸ್ಟ್ಯಾಂಡ್ ಅಫ್ ಇಂಡಿಯಾ ಹಾಗೂ ಮುದ್ರಾ ಯೋಜನೆಗಳ ಬಗ್ಗೆ ಹೆಚ್ಚು ಪ್ರಚಾರ ನಡೆಸುವ ನಿಟ್ಟಿನಲ್ಲಿ ವಿಕಸಿತ ಭಾರತ ಸಂಕಲ್ಪ ಯಾತ್ರೆ ಸಹಕಾರಿಯಾಗಿದೆ ಎಂದು ತಿಳಿಸಿದರು.

ದೇಶದ ಅಭಿವೃದ್ಧಿಗೆ ಪ್ರಧಾನಿ ಮೋದಿ ಶ್ರಮಿಸುತ್ತಿದ್ದಾರೆ. ಅವರು ದೂರದೃಷ್ಟಿಕೋನದಲ್ಲಿ ಜಾರಿಗೊಳಿಸಿರುವ ವಿವಿಧ ವಿಮಾ ಯೋಜನೆಗಳು ಕೋಟ್ಯಾಂತರ ಕುಟುಂಬಗಳಿಗೆ ನೆರವಾಗಿದೆ. ಕಡಿಮೆ ಮೊತ್ತದಲ್ಲಿ ಈ ವಿಮಾ ಸೌಲಭ್ಯ ಪಡೆದುಕೊಳ್ಳಬಹುದಾಗಿದೆ. ವಿವಿಧ ಬ್ಯಾಂಕ್‌ಗಳಲ್ಲಿ ಖಾತೆ ತೆರೆಯುವ ಗ್ರಾಹಕರಿಗೆ ಕೇಂದ್ರ ಸರ್ಕಾರ ವಿಮಾ ಸೌಲಭ್ಯ ದೊರೆಯಲಿದೆ. ಅಲ್ಲದೆ, ವಿವಿಧ ಯೋಜನೆಗಳ ಮೂಲಕ ಅರ್ಹರಿಗೆ ದೊರೆಯಬಹುದಾದ ಆರ್ಥಿಕ ನೆರವನ್ನು ನೀಡಲಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ಸರಸ್ವತಿಪುರಂ ಶಾಖೆಯ ಹಿರಿಯ ವ್ಯವಸ್ಥಾಪಕಿ ಸೌಮ್ಯ ಸುರೇಶ್, ಕಿರಿಯ ವ್ಯವಸ್ಥಾಪಕ ಚಿಕ್ಕಸ್ವಾಮಿ, ಪಾಲಿಕೆ ಮಾಜಿ ಸದಸ್ಯ ಸುಬ್ಬಯ್ಯ, ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ದೇವರಾಜ್, ಪ್ರಧಾನ ಕಾರ್ಯದರ್ಶಿ ಈ.ರಮೇಶ್, ಶಿವಕುಮಾರ್, ಗೋಪಾಲ್, ಡಾ.ಮೃದುಲ, ಅರುಣ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾಫೆಡ್ ಮೂಲಕ ರಾಜ್ಯದಲ್ಲಿ 1.5 ಲಕ್ಷ ಮೆಟ್ರಿಕ್ ಟನ್ ಕೊಬ್ಬರಿ ಖರೀದಿ; ಪ್ರಧಾನಿ ಮೋದಿಗೆ ಕುಮಾರಸ್ವಾಮಿ ಮನವಿ

ಬೆಂಗಳೂರು, ಡಿ.29(ಕೆಎಂಶಿ)–



ಕೇಂದ್ರ ಸರಕಾರ ಕೊಬ್ಬರಿಗೆ ಬೆಂಬಲ ಬೆಲೆ ನೀಡಿರುವುದು ಸ್ವಾಗತಾರ್ಹ ಕ್ರಮವಾಗಿದ್ದು, ರಾಜ್ಯದಲ್ಲಿ ನಾಫೆಡ್ ಮೂಲಕ 1.5 ಲಕ್ಷ ಮೆಟ್ರಿಕ್ ಟನ್ ಕೊಬ್ಬರಿ ಖರೀದಿಸಬೇಕು ಎಂದು ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ಮೋದಿ ಅವರಲ್ಲಿ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದ್ದಾರೆ.

ತಮ್ಮ 'ಎಕ್ಸ್' ಜಾಲತಾಣದಲ್ಲಿ ಟ್ವೀಟ್ ಮಾಡಿರುವ ಅವರು, ಕೊಬ್ಬರಿ ಬೆಲೆ ಕುಸಿತದಿಂದ ಸಂಕಷ್ಟಕ್ಕೆ ಸಿಲುಕಿರುವ ತೆಂಗು ಬೆಳೆಗಾರರ ನೆರವಿಗೆ ಧಾವಿಸಿದ ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ಮೋದಿ ಅವರಿಗೆ ರಾಜ್ಯದ ಸಮಸ್ತ ರೈತರ ಪರವಾಗಿ ಕೃತಜ್ಞತೆಗಳು. ಮಿಲ್ಲಿಂಗ್ ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ 300 ರೂ. ಹಾಗೂ ಉಂಡೆ ಕೊಬ್ಬರಿಗೆ 250 ರೂ. ಏರಿಕೆ ಮಾಡಿರುವ ಕೇಂದ್ರದ ನಿರ್ಧಾರ ಸ್ವಾಗತಾರ್ಹ ಎಂದಿದ್ದಾರೆ. ಈ ತಿಂಗಳ 21ರಂದು ದೆಹಲಿಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ನೇತೃತ್ವದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ತೆಂಗು ಬೆಳೆಗಾರರಿಗೆ ಪರಿಹಾರ ನೀಡುವಂತೆ ಮನವಿ ಸಲ್ಲಿಸಲಾಗಿತ್ತು. ಪ್ರಧಾನಿ ಅವರು ಮನವಿಗೆ ಅತ್ಯಂತ ಸಕಾರಾತ್ಮಕವಾಗಿ ಸ್ಪಂದಿಸಿದ್ದರು.

ಮಧ್ಯವರ್ತಿಗಳ ಹಾವಳಿ ತಪ್ಪಿಸಿ ನೇರವಾಗಿ ನಾಫೆಡ್ ಮೂಲಕ ರಾಜ್ಯದಲ್ಲಿ ಕನಿಷ್ಠ 1.5 ಲಕ್ಷ ಮೆಟ್ರಿಕ್ ಟನ್ ಕೊಬ್ಬರಿ ಖರೀದಿಸಬೇಕು ಎಂದು ಮನವಿ ಮಾಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.12.2023 ಶನಿವಾರ, ಮಳೆ ನಕ್ಷತ್ರ: ಪೂಷಾ 29.12.2023 ರಿಂದ 15.01.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಮೈಸೂರು ಅರಮನೆ ಮಂಡಳಿ:** ಅರಮನೆ ಫಲಪುಷ್ಪ ಪ್ರದರ್ಶನ, ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಶ್ರೀ ರಾಮಕೃಷ್ಣ ವಿದ್ಯಾಕೇಂದ್ರ, ರಾಮಕೃಷ್ಣನಗರ:** ದತ್ತಿ ಕಾರ್ಯಕ್ರಮ, ವಚನ ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ–ಸಂವಾದ ಗೋಷ್ಠಿ, ಉದ್ಘಾಟನೆ: ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಉಪಸ್ಥಿತರು: ಸಾಹಿತಿ ಪ್ರೊ. ಚಂದ್ರಶೇಖರಯ್ಯ, ಡಾ.ಕವಿತಾ ರೈ, ಡಾ.ಆರ್.ಗುರುಸ್ವಾಮಿ, ಡಾ.ಎಚ್.ಮುದ್ದುಮಲ್ಲೇಶ್, ಅಧ್ಯಕ್ಷತೆ: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಸ್ಥಳ: ಶಾರದಾ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.

■ **ಹಾರ್ಡ್ವಿಕ್ ಪ್ರೌಢಶಾಲೆ, ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ವಿಶ್ವಮಾನವ ದಿನಾಚರಣೆ, ಅಧ್ಯಕ್ಷತೆ : ಮುಖ್ಯ ಶಿಕ್ಷಕ ಗುರುಭಕ್ತಯ್ಯ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಡಾ. ಬಿ.ಸಿ. ವಿಜಯಕುಮಾರ್, ಕಲಾವಿದೆ ಡಾ. ಜಮುನಾರಾಣಿ ಮಿರ್ಲೆ, ಕವಯಿತ್ರಿ ಶ್ರೀಮತಿ ರೋಹಿಣಿ ಶೇಖರ್, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ.ಸಂಗಪ್ಪ, ಸ್ಥಳ: ಹಾರ್ಡ್ವಿಕ್ ಪ್ರೌಢಶಾಲೆ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಬಾಲಿಕಾ ಪ್ರೌಢಶಾಲೆ :** ವಿದ್ಯಾರ್ಥಿ ಸಂಘದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮುಖ್ಯೋಪಾಧ್ಯಾಯ ಮಹದೇವಪ್ಪ, ಸಮಾರೋಪ ಭಾಷಣ : ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್. ರಾಜು, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಪೂರ್ಣಿಮಾ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಬೆಳಗ್ಗೆ 10ಕ್ಕೆ.

■ **ಆರ್ಟ್ ಆಫ್ ಲಿವಿಂಗ್ :** ನಾಡಿ ಪರೀಕ್ಷೆ ಕಾರ್ಯಕ್ರಮ, ಸ್ಥಳ: ಆರ್ಟ್ ಆಫ್ ಲಿವಿಂಗ್, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ವನಿತಾ ಸದನ:** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಸುನಂದಾ ಅಕಾಡೆಮಿ ಕಾರ್ಯದರ್ಶಿ ವಿಶ್ವಾಸ್ ಆರ್ಯ, ಅತಿಥಿಗಳು : ಡಾ. ಸುಜಾತ ಭಾಸ್ಕರ್, ಅಧ್ಯಕ್ಷತೆ : ಶ್ರೀಮತಿ ಸುಶೀಲಾಬಾಯಿ ಶ್ರೀ ನಾಗೇಶರಾವ್ ಎಜುಕೇಷನಲ್ ಅಂಡ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಬಿ.ಆರ್. ರವಿ, ಸ್ಥಳ: ವನಿತಾ ಸದನದ ಆವರಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜು:** ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭ ಹಾಗೂ ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಡಾ. ಜೆ. ಶಶಿಧರ ಪ್ರಸಾದ್, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಂ. ಮರಿಸ್ವಾಮಿ, ಉಪಸ್ಥಿತರು : ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಕಾರ್ಯದರ್ಶಿ ಶಿವಸುಂದರ ಸತ್ಯೇಂದ್ರ, ಧರ್ಮದರ್ಶಿ ಜಿ. ರಮೇಶ, ಸ್ಥಳ: ಶ್ರೀ ಕುವೆಂಪು ರಂಗಮಂದಿರ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ.

■ **ಕುಂಬಾರಕೊಪ್ಪಲು ಅಭ್ಯುದಯ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ.ಟಿ. ಚೆಲುವೇಗೌಡ, ಸ್ಥಳ: ಶ್ರೀ ಮಹದೇಶ್ವರ ಸಮುದಾಯ ಭವನ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಮಹಿಳಾ ವಸತಿ ನಿಲಯಗಳ ಸಮುಚ್ಚಯ :** ಬೆಳಗ್ಗೆ 10.30ಕ್ಕೆ ವಿದ್ಯಾರ್ಥಿನಿಲಯಗಳ ವಾರ್ಷಿಕೋತ್ಸವ ಪ್ರಯುಕ್ತ ಅಂತರ ವಸತಿನಿಲಯಗಳ ಚರ್ಚಾ ಸ್ಪರ್ಧೆ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಜೆಎಸ್‌ಎಸ್ ಪದವಿಪೂರ್ವ ಕಾಲೇಜು ಪ್ರಿನ್ಸಿಪಾಲ್ ಶ್ರೀಮತಿ ಎಂ.ಪಿ.ರಾಜೇಶ್ವರಿ, ಮುಖ್ಯ ಅತಿಥಿಗಳು: ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಎಸ್.ಮಲ್ಲೇಶ್, ಅಧ್ಯಕ್ಷತೆ: ಮುಖ್ಯ ನಿಲಯ ಪಾಲಕರಾದ ಮಮತಾ ಸುರೇಶ್, ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ನುಡಿ: ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಬಹುಮಾನ ವಿತರಣೆ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಲ್ಯಾಣ ಇಲಾಖೆ ಅಧೀಕ್ಷಕ ಡಾ.ಕೆ.ಕೃಷ್ಣಕುಮಾರಿ, ಅಧ್ಯಕ್ಷತೆ: ಮುಖ್ಯ ನಿಲಯ ಪಾಲಕರಾದ ಮಮತಾ ಸುರೇಶ್, ಸ್ಥಳ:ವಸತಿ ನಿಲಯಗಳ ಸಮುಚ್ಚಯ, ಸರಸ್ವತಿಪುರಂ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ, ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ರೋಟರಿ ಕ್ಲಬ್ ಆಫ್ ಮೈಸೂರು ಸ್ಟಾರ್ಸ್ :** ಫ್ಯಾಷನ್ ಶೋ–2023, ಉದ್ಘಾಟನೆ: ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ರೋಟರಿ ಕ್ಲಬ್ ಆಫ್ ಮೈಸೂರು ಸ್ಟಾರ್ಸ್ ಅಧ್ಯಕ್ಷ ಸಂತೋಷ್ ಎಸ್. ಗೌಡ, ಪುಸ್ತಕ ಬಿಡುಗಡೆ : ಜಿಲ್ಲಾ ಗವರ್ನರ್ ರೋ. ಹೆಚ್.ಆರ್. ಕೇಶವ್, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 11ಕ್ಕೆ.

■ **ವಿಷ್ಣು ಒಕ್ಕೂಟ ಅಭಿಮಾನಿಗಳ ಸಂಘ :** ಡಾ. ವಿಷ್ಣುವರ್ಧನ್ ಅವರ 14ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಅನ್ನಸಂತರ್ಪಣೆ, ವಿಷ್ಣುಗ್ರೂಪ್ ವಾದ್ಯಗೋಷ್ಠಿ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕರಾದ ಟಿ.ಎಸ್. ಶ್ರೀವತ್ಸ, ಜಿ.ಟಿ. ದೇವೇಗೌಡ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಮೇಯರ್ ಶಿವಕುಮಾರ್, ಸ್ಥಳ: ವಿಷ್ಣುವರ್ಧನ್ ಉದ್ಯಾನವನ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ರಂಗಭೂಮಿ ವೃತ್ತಿ ಕಲಾವಿದರ ಸಂಘ :** ಮಧ್ಯಾಹ್ನ 2 ರಿಂದ ಸಂಘದ ವತಿಯಿಂದ ಪೌರಾಣಿಕ ರಂಗ ಗೀತೆಗಳು, ಮ. 3 ರಿಂದ ರತ್ನ ಮಾಂಗಲ್ಯ ಸಾಮಾಜಿಕ ನಾಟಕ ಪ್ರದರ್ಶನ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಶಾಸಕ ಜಿ.ಡಿ. ಹರೀಶ್‌ಗೌಡ, ಮಾಜಿ ಮೇಯರ್ ಶಿವಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಸುದರ್ಶನ್, ಸ್ಥಳ: ರಂಗಚಾರ್ಲು ಭವನ.

■ **ಪ್ರಾಚ್ಯವಿದ್ಯಾ ಸಂಶೋಧನಾಲಯ, ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ :** ಶ್ರೀ ವಿಶ್ವೇಶ್ವತೀರ್ಥ ಸಂಶೋಧನಾ ಪ್ರತಿಷ್ಠಾನದ ಗೌರವ ನಿರ್ದೇಶಕ ಡಾ. ಆನಂದತೀರ್ಥ ವಿ. ನಾಗಸಂಪಿಗೆ ಅವರಿಂದ ಪುರಾಣಗಳಲ್ಲಿ ಪ್ರಕೃತಿಯ ಮಹತ್ವ ಕುರಿತು ವಿಶೇಷ ಉಪನ್ಯಾಸ, ಸ್ಥಳ: ಸೆಮಿನಾರ್ ಹಾಲ್, ವಿಜ್ಞಾನ ಭವನ, ಮಾನಸಗಂಗೋತ್ರಿ, ಮಧ್ಯಾಹ್ನ 3ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿಎಫ್‌ಟಿಆರ್‌ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, ಪ್ರಸ್ತುತಿ–ಕೇಶವ ಪ್ರಕಾಶ್ ಎಂ.ಎನ್., 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ನಂದಿಸದಿರಿ ನಂದಾದೀಪ –ಪ್ರಾಯೋಜಿತ ಕಾರ್ಯಕ್ರಮ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ, 10.00 ಡಾ.ಎಸ್. ರಾಮನಾಥನ್– ಹಾಡುಗಾರಿಕೆ.

ಮಧ್ಯಾಹ್ನ: 12.30ದೇವರನಾಮ, 12.45 ಜನಪದ ಸಂಗೀತ–ಕೆಂಚಮ್ಮ ಮತ್ತು ಸಂಗಡಿಗರು, 1.30 ಪ್ರಗತಿಪಥ –Solar Charaka Mission ಕುರಿತು ಎಸ್.ವಿ. ದೇವರಾಜು ಅವರಿಂದ ಮಾಹಿತಿ, 1.20 ಭಾವಗೀತೆ–ವಸುದೇವ್, 3.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಬಹುಮುಖ ಪ್ರತಿಭೆ ವಿನ್ಮಯಿ ಪರಿಚಯ, ಪ್ರಸ್ತುತಿ– ಎಂ.ಎಸ್. ಭಾರತಿ, 4.00 ನಾಟಕ 'ಚದುರಂಗ', ರಚನೆ–ವಸುಮತಿ ಉಡುಪ, ನಿರ್ದೇಶನ– ಪ್ರಭುಸ್ವಾಮಿ ಮಳಿಮಠ, 6.50 ಕೃಷಿರಂಗ– ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರ್ ಉಮೇಶ್, ಪರಾಗ–ಬೇಸಾಯದ ಬದುಕು ಸರಾಗ– ಬಾನುಲಿ ಸರಣಿ, 8.15 ಯುವವಾಣಿ– ಮೈಸೂರಿನ ಹಳೇ ಕೆಸರೆಯ ಬೆಥಾನಿಯಾ ಸಹೋದರರ ಸಭೆಯ ಸದಸ್ಯರಿಂದ ಹೊಸವರ್ಷದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ 'ಹೊಸ ವರ್ಷ', 9.30 'ಶಿಕ್ಷಣ ಸಂಸ್ಥೆಯನ್ನು ನಡೆಸುವು ದೆಂದರೆ' ಮೈಸೂರಿನ ಸುನಂದಾ ಅಕಾಡೆಮಿಯ ಕಾರ್ಯದರ್ಶಿ ವಿಶ್ವಾಸ ಕೆ. ಆರ್ಯ ಅವರೊಡನೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪೂರ್ಬಯನ್ ಚಟರ್ಜಿ–ಸಿತಾರ್ ವಾದನ

■ **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ :** ವಾರ್ಷಿಕೋತ್ಸವ, ಉದ್ಘಾಟನೆ: ಹಿರಿಯ ಪತ್ರಕರ್ತ ದಿನೇಶ ಅಮೀನ್‌ಮಟ್ಟು, ಮುಖ್ಯ ಅತಿಥಿಗಳು: ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ಅಧ್ಯಕ್ಷತೆ : ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ಕಲಾಮಂದಿರ, ಮಧ್ಯಾಹ್ನ 3ಕ್ಕೆ.

■ **ಸ್ನೇಹ ಚಿಂತನ ಟ್ರಸ್ಟ್ :** ಜನಮನ ಆಚಾರ್ಯ ಶ್ರೀ ಚಾಣಕ್ಯ ಪ್ರಶಸ್ತಿ ಪ್ರದಾನ, ಕನ್ನಡ ಗೀತೆಗಳ ಗಾಯನ, ಸಾನ್ನಿಧ್ಯ: ಪ್ರೊ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಸಂಸ್ಕೃತ ವಿದ್ವಾಂಸ ಡಾ.ಕೆ.ಲೀಲಾಪ್ರಕಾಶ್, ಪ್ರಶಸ್ತಿ ಪ್ರದಾನ: ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು:ಅಭಿರುಚಿ ಬಳಗದ ಅಧ್ಯಕ್ಷ ಎನ್.ವಿ.ರಮೇಶ್, ಟ್ರಸ್ಟ್ ಗೌರವ ಕಾರ್ಯದರ್ಶಿ ಮ.ನ. ಲತಾ ಮೋಹನ್, ಸ್ಥಳ:ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.

■ **ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್ :** ವಿವೇಕ ಕುಟುಂಬಕಂ–3, ಶಾಲಾ ವಾರ್ಷಿಕೋತ್ಸವ, ಸಾನ್ನಿಧ್ಯ : ಶ್ರೀ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ ಕರೆಸ್ಪಾಂಡೆಂಟ್ ಸ್ವಾಮಿ ಮಹಾಮೇದಾನಂದಜಿ ಮಹಾರಾಜ್, ಮುಖ್ಯ ಅತಿಥಿಗಳು : ಇಸ್ರೋ ವಿಜ್ಞಾನಿ ಶ್ರೀಮತಿ ಎಂ.ವಿ. ರೂಪಾ, ಸ್ಥಳ: ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್ ಆವರಣ, ಜಯನಗರ, ಸಂಜೆ 4.30ಕ್ಕೆ.

■ **ಸುರುಚಿ ರಂಗಮನೆ:** ಮಕ್ಕಳಿಗೆ "ಕಥೆ ಕೇಳೋಣ ಬನ್ನಿ" ಕಾರ್ಯಕ್ರಮ, ಕಥೆ ಹೇಳುವವರು: ಜ್ಯೋತಿಷಿ ಡಾ.ಜಿ.ವೆಂಕಟೇಶ್, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ರಿಂದ.

■ **ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗ :** 5ನೇ ವರ್ಷದ ವಾರ್ಷಿಕೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೃತಿ ಲೋಕಾರ್ಪಣೆ : ಜಾನಪದ ವಿದ್ವಾಂಸ ಡಾ. ಗೊ.ರು. ಚನ್ನಬಸಪ್ಪ, ಕೃತಿ ಕುರಿತು ಮಾತನಾಡುವವರು : ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ನಿರ್ದೇಶಕರಾದ ಡಾ. ಕೆ.ಆರ್. ದಾಕ್ಷಾಯಿಣಿ, ಮುಖ್ಯ ಅತಿಥಿಗಳು : ಬಡಗನಾಡು ಹೇಮರೆಡ್ಡಿ ಜನಾಂಗ ಸಂಘದ ಅಧ್ಯಕ್ಷ ಹೆಚ್.ಸಿ. ರೇವಣಸಿದ್ದಪ್ಪ, ಅಧ್ಯಕ್ಷತೆ : ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಬಳಗದ ಅಧ್ಯಕ್ಷ ಡಾ. ಜಿ.ಎಂ. ವಾಮದೇವ, ಸ್ಥಳ: ಶ್ರೀ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5ಕ್ಕೆ.

■ **ಸುಧರ್ಮಾ ಸಂಸ್ಕೃತ ಪತ್ರಿಕೆ:** ಸುಧರ್ಮಾ ಸಂಸ್ಕೃತ ದಿನದರ್ಶಿಕೆ ಬಿಡುಗಡೆ ಸಮಾರಂಭ, ಲೋಕಾರ್ಪಣೆ: ಶ್ರೀ ಮನ್ಮಹಾರಾಜ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಸಂಸ್ಕೃತ ಪತ್ರಿಕೆ ಗೌರವ ಸಂಪಾದಕರಾದ ವಿದ್ವಾನ್ ಡಾ. ಎಚ್.ವಿ. ನಾಗರಾಜರಾವ್, ಉಪಸ್ಥಿತರು : ಎನ್.ಆರ್. ಗ್ರೂಪ್ಸ್ ಅಧ್ಯಕ್ಷ ಎನ್.ಆರ್. ಗುರು, ಸುಧರ್ಮಾ ಪತ್ರಿಕೆ ಗೌರವ ಸಂಪಾದಕರಾದ ವಿದ್ವಾನ್ ಡಾ. ಟಿ.ವಿ. ಸತ್ಯನಾರಾಯಣ, ವಿದ್ವಾನ್ ಡಾ. ವಿ.ಡಿ. ಹೆಗಡೆ, ಸನ್ಮಾನ : ವಿದ್ವಾನ್ ಡಾ. ದೀಪಕ ಭಟ್ಟ, ವಿದ್ವಾನ್ ಡಾ. ಗಣಪತಿ ಆರ್. ಭಟ್, ಸ್ಥಳ: ನಟರಾಜ ಮಂದಿರ, ಶಂಕರ ಮಠದ ರಸ್ತೆ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ತಿರುಪ್ಪಾವೈ ಪ್ರವಚನ, ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರ, ಸಂಜೆ 6.15ರಿಂದ 7.30 ರವರೆಗೆ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಸಂಕಷ್ಟಹರ ಚತುರ್ಥಿ ವ್ರತದ ಸಾಮೂಹಿಕ ಉದ್ಯಾಪನೆ ಅಂಗವಾಗಿ ಪಂಚ ಸಹಸ್ರಮೋದಕ ಹೋಮ ಮತ್ತು ಅಷ್ಟೋತ್ತರ ಶತ ಕಳಸ ಕುಂಭಾಭಿಷೇಕ ಮಹೋತ್ಸವ, ಶ್ರೀ 101 ಗಣಪತಿ ಪಂಚಾಮೃತ ಅಭಿಷೇಕ, ಪುಣ್ಯಾಹವಾಹನ, ಮಹಾಗಣಪತಿ ಮಂಡಲಾರಾಧನೆ, ಪೂರ್ಣಾಹುತಿ, ಕುಂಭಾಭಿಷೇಕ, ಮಹಾಮಂಗಳಾರತಿ, ಅಷ್ಟಾವಧಾನ ಸೇವೆ, ತೀರ್ಥಪ್ರಸಾದ ವಿನಿಯೋಗ, ರಾತ್ರಿ 7.30ಕ್ಕೆ ಸಂಕಷ್ಟ ಚತುರ್ಥಿ ವ್ರತದ ಅಂಗವಾಗಿ 21 ಗಣಪತಿ ವಿಗ್ರಹ ದಾನ, ವ್ರತ ಕಥಾಪಠಣ, ರಾತ್ರಿ 8.30ಕ್ಕೆ ಮಹಾಮಂಗಳಾರತಿ, ಉಪಸ್ಥಿತರು : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ದೇವಸ್ಥಾನ, ತ್ಯಾಗರಾಜ ವೃತ್ತ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಡಾ. ಬಿ.ಆರ್. ಅಂಬೇಡ್ಕರ್ ಕೇಂದ್ರದ ಅತಿಥಿ ಉಪನ್ಯಾಸಕರಾದ ಡಾ. ಡಿ. ಪದ್ಮಶ್ರೀ ಅವರಿಂದ ಭಾರತದ ಸಂವಿಧಾನ ಆಶಯ ಮತ್ತು ಸಮಾನತೆಯ ಸಮಾಜ ಕುರಿತು ಉಪನ್ಯಾಸ, ಅಧ್ಯಕ್ಷತೆ : ಹಿಂದುಳಿದ ವರ್ಗಗಳ ಮಹಿಳಾ ವಿದ್ಯಾರ್ಥಿ ನಿಲಯದ ನಿಲಯ ಪಾಲಕರಾದ ಶ್ರೀಮತಿ ತೇಜಸ್ವಿನಿ, ಸ್ಥಳ: ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯ ಆವರಣ, ಮಾನಸಗಂಗೋತ್ರಿ, ಸಂಜೆ 6ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್ :** ಶಾಸ್ತ್ರೀಯ ಸಂಗೀತ ಗಾಯನ ಕಛೇರಿ, ವಿದ್ವಾನ್ ಮಾಲಿನಿ ರಾಮಸುಬ್ರಮಣ್ಯ ಅವರಿಂದ ಗಾಯನ, ವಿದುಷಿ ಡಾ. ವೀಣಾ ಸುರೇಶ್ –ಪಿಟೀಲು, ವಿದ್ವಾನ್ ವಿಕ್ರಮ್ ಭಾರದ್ವಾಜ್–ಮೃದಂಗ, ಸ್ಥಳ: ರಾಮಮಂದಿರ, ಜಯನಗರ, ಸಂಜೆ 6ರಿಂದ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಕಾಕನಕೋಟೆ ನಾಟಕ ಪ್ರದರ್ಶನ, ನಿರ್ದೇಶನ : ಎಸ್. ರಾಮನಾಥ, ರಚನೆ : ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸ್ಥಳ: ವನರಂಗ ಬಯಲು ರಂಗಮಂದಿರ, ರಂಗಾಯಣ, ಸಂಜೆ 6.30ಕ್ಕೆ.

ಕುವೆಂಪುರವರದು ವೈಚಾರಿಕ, ವೈಜ್ಞಾನಿಕ ಚಿಂತನೆ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ ಅಭಿಮತ



ಮೈಸೂರು, ಡಿ.29(ಎಂಕೆ)– ಆಧುನಿಕ ಕನ್ನಡ ಸಾಹಿತ್ಯದ ಪಿತಾಮಹರಾದ ಕುವೆಂಪು ಅವರು, ತಮ್ಮ ವೈಚಾರಿಕತೆ ಹಾಗೂ ವೈಜ್ಞಾನಿಕ ಹಾದಿಯ ಮೂಲಕ ಮನುಜ ಮತ–ವಿಶ್ವಪಥ ಮಹತ್ವದ ಸಂದೇಶ ನೀಡಿದ ಮಹಾನ್ ವ್ಯಕ್ತಿ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದ್ದಾರೆ.

ರಾಷ್ಟ್ರಕವಿ ಕುವೆಂಪು ಅವರು, ಕೆಳವರ್ಗದ ಜನರು ಪ್ರಜ್ಞಾವಂತರಾಗಿ ಮೌಢ್ಯತೆ ಹಾಗೂ ಕಂದಾಚಾರಗಳ ವಿರುದ್ಧ ನಿರಂತರವಾಗಿ ಹೋರಾಟ ನಡೆಸಬೇಕೆಂದು ಬಯಸಿದ್ದರು. ಮಹಿಳಾ ಹಕ್ಕುಗಳ ಪ್ರಬಲ ಪ್ರತಿಪಾದಕರಾಗಿದ್ದ ಅವರು, ತಮ್ಮೆಲ್ಲಾ ಕೃತಿಗಳಲ್ಲಿ ಸಮಾನ ಹಕ್ಕುಗಳ ಜೊತೆಗೆ ನಿಸರ್ಗದ ಮಹತ್ವವನ್ನೂ ಪ್ರತಿಪಾದಿಸಿದ್ದಾರೆ. ಯುವ ಸಮುದಾಯದಲ್ಲಿ ಅತ್ಯಂತ ನಂಬಿಕೆ ಇಟ್ಟುಕೊಂಡಿದ್ದ ಕುವೆಂಪು, ಸಾಹಿತ್ಯದ ಮೂಲಕ ವಿಚಾರ ಕ್ರಾಂತಿಗೆ ಆಹ್ವಾನ ನೀಡಿದ ದಾರ್ಶನಿಕರು.

'ರಾಮಾಯಣ ದರ್ಶನಂ' ಕೃತಿ ಬರೆದು, ಶೂದ್ರ ವರ್ಗಗಳು ಯಾವುದಕ್ಕೂ ಕಡಿಮೆ ಇಲ್ಲ ಎನ್ನುವುದನ್ನು ತೋರಿಸಿ, ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಅವರು, ಕನ್ನಡ ಸಾಹಿತ್ಯಕ್ಕೆ ವೈಚಾರಿಕ ಸ್ಪರ್ಶವನ್ನು ನೀಡಿದವರು. ಜಗದ ಕವಿ, ಯುಗದ ಕವಿ ಎಂದೇ ಹೆಸರಾದ ಕುವೆಂಪು ಅವರ ಜನ್ಮದಿನದ ಪ್ರಯುಕ್ತ ಮೊದಲಿಗೆ ತಮ್ಮೆಲ್ಲರಿಗೂ ವಿಶ್ವ ಮಾನವ ದಿನಾಚರಣೆಯ ಶುಭಾಶಯಗಳನ್ನು ತಿಳಿಸುತ್ತಾ, ಕುವೆಂಪು ಅವರ ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವವನ್ನು ನಮ್ಮ ವ್ಯಕ್ತಿತ್ವದಲ್ಲಿ ರೂಪಿಸಿಕೊಂಡು ಸಮಾಜವನ್ನು ಮೌಢ್ಯ ರಹಿತವಾಗಿ ಮತ್ತು ಸಮಾನತೆಯ ನೆಲೆಯಲ್ಲಿ ಆರೋಗ್ಯಕರವಾಗಿ ಕಟ್ಟೋಣ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಉದಯರವಿಯಲ್ಲಿ ಕುವೆಂಪು ಜಯಂತಿ



ಮೈಸೂರು, ಡಿ.29(ಎಸ್‌ಬಿಡಿ)– ನಮ್ಮೂರು ಮೈಸೂರು ಸಮಾಜ ಸೇವಾ ಟ್ರಸ್ಟ್ ಸ್ನೇಹ ಬಳಗದ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ ಜಯಂತಿಯನ್ನು ಮೈಸೂರಿನ ಉದಯ ರವಿ ನಿಲಯದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಈ ವೇಳೆ ಕುವೆಂಪು ಅವರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಶಾಸಕ ಕೆ.ಹರೀಶ್‌ಗೌಡರು ಮಾತನಾಡಿ, ಕುವೆಂಪುರವರು ವಿಶ್ವ ಮಾನವ ಸಂದೇಶವನ್ನು ಸಾರಿದ ವಿಶ್ವಕವಿ. ಯುವ ಪೀಳಿಗೆಗೆ ಸಾಹಿತ್ಯದ ಮೂಲಕ ಸನ್ಮಾರ್ಗ ತೋರಿದ ಮಹಾನ್ ಚೇತನ ಎಂದು ಬಣ್ಣಿಸಿದರಲ್ಲದೆ, ಎಂಟು ವರ್ಷದ ಬಾಲಕನಾಗಿದ್ದಾಗ ತಮ್ಮ ತಂದೆಯವರೊಂದಿಗೆ ಬಂದು ಈ ಪರಿಸರದಲ್ಲಿ ಆಟವಾಡಿದ್ದ ದಿನಗಳನ್ನು ನೆನಪಿಸಿಕೊಂಡರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಮುಖ್ಯಮಂತ್ರಿಗಳು ಕುವೆಂಪು ಅವರನ್ನು ಭೇಟಿಯಾಗಲು ಬರುತ್ತಾರೆಂದು ಅವರ ನಿವಾಸದ ಅಕ್ಕಪಕ್ಕದ ರಸ್ತೆಗಳನ್ನು ಸ್ವಚ್ಛಗೊಳಿಸಲಾಗುತ್ತಿತ್ತು. ಇದನ್ನು ಗಮನಿಸಿದ ಕುವೆಂಪು ಅವರು, ನೀವುಗಳು ಮುಖ್ಯಮಂತ್ರಿ ಬಂದಾಗ ಮಾತ್ರ ಸ್ವಚ್ಛಗೊಳಿಸುವುದಾ? ಎಂದು ನಗೆ ಚಟಾಕಿ ಹಾರಿಸಿದ್ದರೆಂದು ಸ್ಮರಿಸಿಕೊಂಡರು.

ಈ ವೇಳೆ ಟ್ರಸ್ಟ್‌ನ ಅಧ್ಯಕ್ಷ ಎ.ರವಿ, ಉಪಾಧ್ಯಕ್ಷ ಗುರುರಾಜ್, ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಯೋಗೇಶ್, ರವಿ, ಸಿದ್ದಪ್ಪ ಚೆಲುವರಾಯಸ್ವಾಮಿ, ಮಾಯಾ, ಕೇಬಲ್ ಮಂಜು, ನಗರಪಾಲಿಕೆ ಮಾಜಿ ಸದಸ್ಯ ಭರತೇಶ್ ಮತ್ತಿತರರು ಉಪಸ್ಥಿತರಿದ್ದರು.

ಕೇಳುಗರಿಗೆ ಮುದ ನೀಡಿದ ಶಾಸ್ತ್ರೀಯ ಗಿಟಾರ್ ವಾದನ



ಮೈಸೂರು, ಡಿ.29(ಎಂಕೆ)– ಸುಂದರ ಸಂಜೆಯಲಿ ಗಿಟಾರ್ ನಾದಕ್ಕೆ ಮನಸೋತ ಮೈಸೂರಿಗರು...! ಮೈಸೂರಿನ ಕುವೆಂಪುನಗರದಲ್ಲಿರುವ ಗಾನಭಾರತಿ ವೀಣೆ ಶೇಷಣ್ಣ ಭವನದಲ್ಲಿ ಬಿ.ವಿ.ಶ್ರೀನಿವಾಸ ರಾಘವನ್ ಮತ್ತು ಶ್ರೀಮತಿ ಲಲಿತಾ ರಾಘವನ್ ಸಂಸ್ಮರಣಾರ್ಥ ಆಯೋಜಿಸಿದ್ದ ಕರ್ನಾಟಕ ಶಾಸ್ತ್ರೀಯ ಗಿಟಾರ್ ವಾದನ ಕೇಳುಗರ ಮನಸ್ಸಿಗೆ ಮುದ ನೀಡಿತು.

ವಿದ್ವಾನ್ ರಂಜನ್ ವಾಸುದೇವನ್ ಅವರ ಗಿಟಾರ್ ನಾದ ನೆರೆದಿದ್ದವರನ್ನು ಮಂತ್ರ ಮುಗ್ದರನ್ನಾಗಿಸಿತು. 'ವರ್ಣ', 'ಶ್ರೀ ಮಹಾಗಣಪತಿ' ಸೇರಿದಂತೆ ಹಲವು ಕೃತಿಗಳಲ್ಲಿನ ರಾಗಗಳನ್ನು ಸುಮಧುರ ನುಡಿಸಿ ರಂಜಿಸಿದರು. ವಯೋಲಿನ್ ವಾದನದಲ್ಲಿ ವಿದ್ವಾನ್ ಕೇಶವ್ ಮೋಹನ್‌ಕುಮಾರ್, ಮೃದಂಗದಲ್ಲಿ ವಿದ್ವಾನ್ ಎ.ರಾಧೇಶ್ ಹಾಗೂ ಕಂಜಿರಾ ವಾದನದಲ್ಲಿ ವಿದ್ವಾನ್ ಕಾರ್ತಿಕ್ ಉತ್ತಮ ಸಹಕಾರ ನೀಡಿದರು.

ಭಾರೀ ಬೆಲೆಯ ಭೂಮಿ ಕಬಳಿಸುವ ಯತ್ನಕ್ಕೆ ಬ್ರೇಕ್ ಹಾಕಲು ಶಾಸಕದ್ವಯರು ನಿರ್ಧಾರ

ದಾಖಲೆ ನೀಡಲು ಆಯುಕ್ತರಿಗೆ ಪತ್ರ

ಮೈಸೂರು, ಡಿ.29(ಎಂಕೆ)– ಮೈಸೂರಿನ ದಟ್ಟಗಳ್ಳಿ ವ್ಯಾಪ್ತಿಯ 27.34 ಎಕರೆ ಜಮೀನು ಅಕ್ರಮಕ್ಕೆ ಬ್ರೇಕ್ ಹಾಕಲು ಮುಂದಾಗಿರುವ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ರಮೇಶ್ ಬಂಡೀಸಿದ್ದೇಗೌಡ, ದೃಢೀಕೃತ ದಾಖಲೆಗಳನ್ನು ನೀಡುವಂತೆ ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಅಕ್ರಮವಾಗಿ ಕೋಟ್ಯಾಂತರ ರೂ. ಬೆಲೆ ಬಾಳುವ ಮುಡಾ ಆಸ್ತಿಯನ್ನು ಕಬಳಿಸಲು ಸಂಚು ರೂಪಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಪ್ರಾಧಿಕಾರದ ಬಳಿ ಇರುವ ಎಲ್ಲಾ ದಾಖಲೆಗಳನ್ನು ಧೃಢೀಕರಿಸಿ ನೀಡುವಂತೆ ಶಾಸಕದ್ವಯರು ಪತ್ರ ಬರೆದಿದ್ದಾರೆ.

ದಟ್ಟಗಳ್ಳಿ ವ್ಯಾಪ್ತಿಯ ಸರ್ವೆ ನಂ.27/1, 27/2, 27/4, 29/1a, 32, 38/1, 38/2 ಸೇರಿದಂತೆ ವಿವಿದ ಸರ್ವೆ ನಂಬರ್‌ಗಳ ಸುಮಾರು 27.34 ಎಕರೆ ಜಮೀನನ್ನು ಮೂರನೇ ವ್ಯಕ್ತಿಯೊಬ್ಬರು ಹೈಕೋರ್ಟ್‌ನಲ್ಲಿ ಆದೇಶ ಪಡೆದುಕೊಂಡು ಕಬಳಿಸಲು ಉದ್ದೇಶಿಸಿರುವ ಆರೋಪ ಕೇಳಿ ಬಂದ ಹಿನ್ನಲೆ ಜಿಲ್ಲಾಧಿಕಾರಿಗಳು ಮುಡಾ ಆಯುಕ್ತರಿಗೆ ಪತ್ರ ಬರೆದು ದಾಖಲೆಗಳ ಸಮೇತ ಹಾಜರಾಗುವಂತೆ ಸೂಚಿಸಿದ್ದರು. ಇದರ ಬೆನ್ನಲ್ಲೆ ಶಾಸಕರಿಬ್ಬರು ಒಂದೇ ಪತ್ರದಲ್ಲಿ ಸಹಿ ಹಾಕಿ ಮುಡಾ ಆಯುಕ್ತರಿಗೆ ಪತ್ರ ಬರೆದು ಸಂಪೂರ್ಣ ದಾಖಲೆಗಳನ್ನ ಒದಗಿಸುವಂತೆ ಮನವಿ ಮಾಡಿದ್ದಾರೆ.



ಮೈಸೂರು ವಿಜಯನಗರದಲ್ಲಿ ಕೊಡಗು ಗೌಡ ಸಮಾಜದ ವತಿಯಿಂದ ನೂತನವಾಗಿ ನಿರ್ಮಿಸಿರುವ 'ನೂತನ ಸಭಾಂಗಣ'ವನ್ನು ಇತ್ತೀಚೆಗೆ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರು ಉದ್ಘಾಟಿಸಿ, ಆಶೀರ್ವದಿಸಿದರು. ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮೈಸೂರು ಕೊಡಗು ಗೌಡ ಸಮಾಜ ಅಧ್ಯಕ್ಷರಾದ ತೋಟಂಬೈಲು ಈ.ಮನೋಹರ್, ಮಾಜಿ ಶಾಸಕ ಎಲ್.ನಾಗೇಂದ್ರ, ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ಕವೀಶ್ ಗೌಡ, ಮಡಿಕೇರಿ ಕೊಡಗು ಗೌಡ ಸಮಾಜದ ಅಧ್ಯಕ್ಷ ಸೂರ್ತಲೆ ಆರ್.ಸೋಮಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್, ಸಭಾಂಗಣ ವೇದಿಕೆಯ ದಾನಿ ತೇನನ ರಾಜೇಶ್, ಶ್ರೀ ಕೇಕಡ ನಂದ ಸೇರಿದಂತೆ ಕೊಡಗು ಗೌಡ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ರಾಷ್ಟ್ರಕವಿ ಕುವೆಂಪು ಅವರ ನಾಟಕ, ಕಾದಂಬರಿಗಳ ವಿಚಾರಧಾರೆ ಅಳವಡಿಕೆ ಅವಶ್ಯವಾದುದು

●ಮೈಸೂರು ಅಪರ ಪೊಲೀಸ್ ವರಿಷ್ಠಾಧಿಕಾರಿ ಡಾ. ನಂದಿನಿ ಅಭಿಮತ ●ಮಂತ್ರ ಮಾಂಗಲ್ಯ ಮಾನವ ಧರ್ಮಕ್ಕೆ ಅನನ್ಯ ಕೊಡುಗೆ

ಮೈಸೂರು, ಡಿ.29(ಎಂಟಿವೈ)– ಪ್ರತಿಯೊಬ್ಬರು ರಾಷ್ಟ್ರಕವಿ ಕುವೆಂಪು ಅವರ ನಾಟಕ ಹಾಗೂ ಕಾದಂಬರಿಗಳಲ್ಲಿರುವ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ(ಎಎಸ್‌ಪಿ) ಡಾ.ಬಿ.ಎನ್.ನಂದಿನಿ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜು ಆವರಣದಲ್ಲಿ ವಿಶ್ವ ಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಕುವೆಂಪು ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಎಲ್ಲರೂ ಕುವೆಂಪು ಅವರ ಬದುಕು ಹಾಗೂ ಸಾಹಿತ್ಯ ಮಾದರಿಯನ್ನು ಅನುಸರಿಸಬೇಕು. ಕುವೆಂಪು ಅವರ ಆಶೋತ್ತರ, ವಿಚಾರಧಾರೆಗಳು ಯುವ ಪೀಳಿಗೆಗೆ ತಿಳಿಯಬೇಕು. ಆಗ ಮಾತ್ರ ಸಮಾಜದಲ್ಲಿ ಬದಲಾವಣೆ ಹಾಗೂ ಸ್ವಾಸ್ಥ್ಯ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದರು.

ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿವೃತ್ತ ನಿರ್ದೇಶಕ ಪ್ರೊ.ಎಸ್. ಶಿವರಾಜಪ್ಪ ಮಾತನಾಡಿ, ಕುವೆಂಪು ಅವರು ವರ್ತಮಾನಕ್ಕೆ ಪ್ರಸ್ತುತ ಎನಿಸುವ ಜ್ಞಾನಕೋಶ, ಜ್ಞಾನನಿಧಿಯಾಗಿದ್ದರು. ಮೌಢ್ಯ, ಅಂಧಶ್ರದ್ಧೆ ವಿರುದ್ಧ ಹೋರಾಡಿದ ರಸಋಷಿ, ಮಹಾಜ್ಞಾನಿ ಕುವೆಂಪು, ಬಸವಣ್ಣನವರ ಪ್ರತಿರೂಪವಾಗಿದ್ದರು. ಮನುಜಮತ ವಿಶ್ವಪಥ ಸಂದೇಶವನ್ನು ಕುವೆಂಪು



> ಸಾಹಿತ್ಯ ಸಮಾಜದ ಪ್ರತಿಬಿಂಬ. ಕುವೆಂಪು ಅವರ ನಾಟಕ, ಕಾದಂಬರಿಗಳಲ್ಲಿರುವ ವಿಚಾರಧಾರೆಗಳನ್ನು ತಿಳಿಯಬೇಕು. ದುಂದುವೆಚ್ಚ ಮಾಡಿ ಮದುವೆಗಳನ್ನು ಮಾಡುವುದನ್ನು ತಪ್ಪಿಸಲು ಕುವೆಂಪು ಅವರು ಮಂತ್ರಮಾಂಗಲ್ಯ ಪರಿಕಲ್ಪನೆ ನೀಡಿದ್ದಾರೆ. ಪಂಪ 'ಮನುಷ್ಯಜಾತಿ ತಾನೊಂದೆ ವಲಂ' ಸಂದೇಶ ನೀಡಿದರೆ, ಕುವೆಂಪು ಅವರು ವಿಶ್ವಮಾನವ ಸಂದೇಶವನ್ನು ನೀಡಿದ್ದಾರೆ. ಪ್ರತಿಯೊಬ್ಬರು ಮನುಜಮತ, ವಿಶ್ವಪಥದಲ್ಲಿ ಸಾಗಬೇಕು ಎಂದರು.
> – ಡಾ.ಬಿ.ಎನ್.ನಂದಿನಿ, ಹೆಚ್ಚುವರಿ ಪೊಲೀಸ್, ವರಿಷ್ಠಾಧಿಕಾರಿ(ಎಎಸ್‌ಪಿ)

ಅವರು ನೀಡಿದ್ದಾರೆ. ಆ ಮಾರ್ಗದಲ್ಲಿ ನಾವೆಲ್ಲಾ ಸಾಗಬೇಕು ಎಂದು ಹೇಳಿದರು.

ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್‌ಗೌಡ ಮಾತನಾಡಿ, ಕುವೆಂಪು ಅವರು ಗೌರಿ ಶಂಕರ ಶಿಖರದಂತೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಉತ್ತುಂಗಕ್ಕೆ ಏರಿದ್ದಾರೆ. ಜಾತಿ– ಮತ–ಪಂಥದ ವಿರುದ್ಧವಾಗಿ ಜಾತ್ಯತೀತ ಪರಿಕಲ್ಪನೆಯನ್ನು ಪರಿಚಯಿಸಿದರು. ಮೈಸೂರು ವಿವಿಯ ಮಾನಸ ಗಂಗೋತ್ರಿ ಕ್ಯಾಂಪಸ್ ನಿರ್ಮಿಸಿ, ಬೋಧನಾಂಗ, ಸಂಶೋಧನಾಂಗದ ಜೊತೆಗೆ ಪ್ರಸಾರಾಂಗವನ್ನು ಆರಂಭಿಸಿ, ಕಡಿಮೆ ಬೆಲೆಯಲ್ಲಿ ಸಾಹಿತ್ಯ ಕೃತಿಗಳನ್ನು ಜನರಿಗೆ ತಲುಪಿಸಲು ಶ್ರಮಿಸಿದರು. ಅವರ ಜಲಗಾರ ನಾಟಕ ಅತ್ಯಂತ ಶ್ರೇಷ್ಠವಾದುದು. ಕುವೆಂಪು ಅವರ ಕೃತಿಗಳು ಇಂಗ್ಲಿಷ್‌ಗೆ ತರ್ಜುಮೆಯಾಗಿದ್ದರೆ ನೊಬೆಲ್ ಪ್ರಶಸ್ತಿ ದೊರೆಯುತ್ತಿತ್ತು ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಯುವರಾಜ ಕಾಲೇಜಿನ ಡಾ.ಚಂದ್ರಯ್ಯ, ಮಹಾರಾಜ ಕಾಲೇಜಿನ ಡಾ.ಗೋಪಾಲರಾಜ್, ಡಾ.ಎಂ.ಬಿ. ಸುರೇಶ್, ಡಾ.ಲೋಕೇಶ್, ಸಬ್ ಇನ್ಸ್‌ಪೆಕ್ಟರ್ ಲಮಾಣಿ ಸುಷ್ಮಾ, ಜಿಲ್ಲಾ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಹೆಚ್. ಪ್ರಕಾಶ್ ಅವರನ್ನು ಸನ್ಮಾನಿಸಲಾಯಿತು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ವಿಜಯನಗರ ಉಪ ವಿಭಾಗ ಎಸಿಪಿ ಜಿ.ಎಸ್. ಗಜೇಂದ್ರಪ್ರಸಾದ್, ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ, ಹಾಸನ ಸ್ನಾತಕೋತ್ತರ ಕೇಂದ್ರದ ಕನ್ನಡ ಪ್ರಾಧ್ಯಾಪಕ ಡಾ.ಶಂಕರ್, ಮಾನಸ ಗಂಗೋತ್ರಿ ಸಮಾಜ ಕಾರ್ಯ ವಿಭಾಗದ ಪ್ರಾಧ್ಯಾಪಕಿ ಡಾ.ಹೆಚ್.ಪಿ. ಜ್ಯೋತಿ, ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್. ಉಮೇಶ್, ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಅಧ್ಯಕ್ಷ ಆರ್. ವಾಸುದೇವ, ಉಪಾಧ್ಯಕ್ಷ ಭಾಸ್ಕರ್, ಪ್ರೊ. ಜಗದೀಶ್, ಕಾರ್ಯದರ್ಶಿ ವಿನೋದ್, ಸಹ ಕಾರ್ಯದರ್ಶಿ ಯೋಗೇಶ್, ಸಂಚಾಲಕ ವಿವೇಕ್, ಖಜಾಂಚಿ ಗಣೇಶ್, ನಿರ್ದೇಶಕರಾದ ಡಾ.ನವೀನ್‌ಕುಮಾರ್, ಮಧುಸೂದನ್, ಚಿದಾನಂದ, ಅಭಿಷೇಕ್, ರಿಷಿರಾಜ್, ಮಂಜುನಾಥ್, ಹರೀಶ್, ಉಮಾಶಂಕರ್, ಸುರೇಶ್, ಯೋಗೀಶ್, ಅತಿಕ್ ವುಲ್ಲಾಖಾನ್, ರವಿಕುಮಾರ್, ಶ್ರೇಯಸ್ ಉಪಸ್ಥಿತರಿದ್ದರು. ಸಂಜೆ ಕಾಲೇಜಿನ ಉಪನ್ಯಾಸಕ ಡಾ.ಆರ್. ನಿಂಗರಾಜು ಪ್ರಾರ್ಥಿಸಿದರೆ, ಡಾ.ಬಿ.ಎಸ್. ದಿನಮಣಿ ಸ್ವಾಗತಿಸಿದರು. ಮಹಾರಾಣಿ ವಿಜ್ಞಾನ ಕಾಲೇಜಿನ ಇಂಗ್ಲಿಷ್ ಸಹಾಯಕ ಪ್ರಾಧ್ಯಾಪಕ ಡಾ.ವಿ.ಆರ್. ರಮೇಶ್ ಬಾಬು ಕಾರ್ಯಕ್ರಮ ನಿರೂಪಿಸಿದರು.

ನಮ್ಮ ಸಂಕಲ್ಪ ವಿಕಸಿತ ಭಾರತ

ಫಲಾನುಭವಿಗಳಿಗೆ ವಿವಿಧ ಯೋಜನೆ ಚೆಕ್ ವಿತರಣೆ



ಮೈಸೂರು, ಡಿ.29(ಎಸ್‌ಬಿಡಿ)– ಮೈಸೂರಿನ ಅಗ್ರಹಾರದಲ್ಲಿ 'ನಮ್ಮ ಸಂಕಲ್ಪ ವಿಕಸಿತ ಭಾರತ' ಕಾರ್ಯಕ್ರಮ ನಡೆಯಿತು.

ಇಲ್ಲಿನ ರಾಜೇಂದ್ರ ಕಲಾಮಂದಿರದ ಆವರಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸುಮಾರು 300 ಮಂದಿ ಆಯುಷ್ಮಾನ್ ಭಾರತ್ ಕಾರ್ಡ್‌ಗೆ ನೋಂದಣಿ ಮಾಡಿಸಿದರು. ಐದು ಮಂದಿ ಬೀದಿಬದಿ ವ್ಯಾಪಾರಿಗಳಿಗೆ ಮುದ್ರಾ ಯೋಜನೆ ಸಾಲ ಸೌಲಭ್ಯದ ಚೆಕ್ ವಿತರಿಸಲಾಯಿತು. ಹಲವರು ಉಜ್ವಲ ಯೋಜನೆ ಸೇರಿದಂತೆ ಕೇಂದ್ರ ಸರ್ಕಾರದ ಹಲವು ಯೋಜನೆಗಳ ಸದುಪಯೋಗಪಡಿಸಿಕೊಂಡರು.

ಕಾರ್ಯಕ್ರಮದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್ ಮಾತನಾಡಿ, 'ನಮ್ಮ ಸಂಕಲ್ಪ ವಿಕಸಿತ ಭಾರತ' ಕಾರ್ಯಕ್ರಮದಲ್ಲಿ ಮಹಿಳೆಯರ ಸಬಲೀಕರಣವನ್ನು ಖಾತ್ರಿಪಡಿಸಲಾಗಿದೆ. ಪ್ರಧಾನ ಮಂತ್ರಿ ಉಜ್ವಲ ಯೋಜನೆ, ಮುದ್ರಾ ಯೋಜನೆ, ಸುಕನ್ಯ ಸಮೃದ್ಧಿ ಯೋಜನೆ, ನಿರ್ಲಕ್ಷಿತರ ಸಾಮಾಜಿಕ ಭದ್ರತೆಗಾಗಿ ಪ್ರಧಾನ ಮಂತ್ರಿ ಜನ್ ಧನ್ ಯೋಜನೆ, ಸುರಕ್ಷಾ ಭೀಮಾ ಯೋಜನೆ, ಜೀವನ್ ಜ್ಯೋತಿ ಭೀಮಾ ಯೋಜನೆ, ಸುರಕ್ಷಾ ಅಟಲ್ ಪಿಂಚಣಿ ಯೋಜನೆ, ಪ್ರಧಾನ ಮಂತ್ರಿ ಸ್ವಾನಿಧಿ ಯೋಜನೆ ಸೇರಿದಂತೆ ಹಲವು ಯೋಜನೆಗಳನ್ನು ಕೇಂದ್ರ ಸರ್ಕಾರ ನೀಡಿದೆ. ಅಲ್ಲದೆ ರೈತರ ಕಲ್ಯಾಣಕ್ಕಾಗಿ ಪಿಎಂ ಕಿಸಾನ್ ಮುಖಾಂತರ ರೈತರ ಖಾತೆಗಳಿಗೆ 6 ಸಾವಿರ ರೂ. ನೇರವಾಗಿ ಜನಧನ್ ಖಾತೆಗಳಿಗೆ ಜಮಾ ಮಾಡಲಾಗುತ್ತಿದೆ. ಸಾರ್ವಜನಿಕರು ಎಲ್ಲಾ ಯೋಜನೆಗಳ ಪ್ರಯೋಜನ ಪಡೆದುಕೊಳ್ಳಬೇಕೆಂದು ಮನವಿ ಮಾಡಿದರು.

ಅಕ್ಕಮ್ಮಣ್ಣಿ ಆಸ್ಪತ್ರೆ ವೈದ್ಯರಾದ ಡಾ.ಮಮತಾ ಮಾತನಾಡಿ, ಆಯುಷ್ಮಾನ್ ಭಾರತ್ ಜನ ಆರೋಗ್ಯ ಯೋಜನೆ, ಪ್ರಧಾನ ಮಂತ್ರಿ ಭಾರತೀಯ ಜನ ಔಷಧಿ ಕೇಂದ್ರಗಳ ಸೌಲಭ್ಯದ ಬಗ್ಗೆ ವಿವರಣೆ ನೀಡಿದರು.

ಕಾರ್ಯಕ್ರಮದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಅರುಣ್, ಅಗ್ರಹಾರ ಶಾಖೆಯ ಸೀನಿಯರ್ ಮ್ಯಾನೇಜರ್ ವಿ.ಶ್ರೀನಿವಾಸ್ ಮೂರ್ತಿ, ನೈರುತ್ಯ ರೈಲ್ವೆ ಸದಸ್ಯ ಶಿವರಾಜ್, ಅಗಸ್ತ್ಯ ಕೋ ಆಪರೇಟಿವ್ ಸೊಸೈಟಿ ನಿರ್ದೇಶಕ ಬಾಲಕೃಷ್ಣ, ಕೆ.ಆರ್ ಕೋಪರೇಟಿವ್ ಬ್ಯಾಂಕ್ ನಿರ್ದೇಶಕಿ ಸರ್ವಮಂಗಳ, ವಿಕಸಿತ ಭಾರತ ಸಂಚಾಲಕರಾದ ಸುಬ್ಬಯ್ಯ ಮತ್ತಿತರರು ಭಾಗವಹಿಸಿದ್ದರು.

ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ಕಡಿತ ಖಂಡಿಸಿ ಪ್ರತಿಭಟನೆ



ಮೈಸೂರು, ಡಿ.29(ಎಂಕೆ)– ನೊಂದಾಯಿಸಲ್ಪಟ್ಟ ಕಟ್ಟಡ ಕಾರ್ಮಿಕರ ಮಕ್ಕಳಿಗೆ ನೀಡುತ್ತಿದ್ದ ವಿದ್ಯಾರ್ಥಿವೇತನ ಕಡಿತಗೊಳಿಸಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ, ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘ ಮತ್ತು ಗಂಧದ ಗುಡಿ ಫೌಂಡೇಶನ್ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಬನ್ನೂರು ಮುಖ್ಯರಸ್ತೆಯಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಕಳೆದ ಅಕ್ಟೋಬರ್ ತಿಂಗಳಿಂದ ನೊಂದಾಯಿಸಲ್ಪಟ್ಟ ಕಟ್ಟಡ ಕಾರ್ಮಿಕರಿಗೆ ತೊಂದರೆಯಾಗುತ್ತಿದೆ. ಹಾಗೆಯೇ ನೊಂದಾಯಿಸಲ್ಪಟ್ಟ ಕಟ್ಟಡ ಕಾರ್ಮಿಕರ ಮಕ್ಕಳಿಗೆ ನೀಡುತ್ತಿದ್ದ ವಿದ್ಯಾರ್ಥಿವೇತನ ಕಡಿತಗೊಳಿಸಿರುವುದು ಸರಿಯಲ್ಲ. ಕೂಡಲೇ ಈ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಬೋಗಸ್ ಕಾರ್ಡ್‌ಗಳನ್ನು ರದ್ದುಗೊಳಿಸಬೇಕು. ನೊಂದಾಯಿಸಲ್ಪಟ್ಟ ಕಟ್ಟಡ ಕಾರ್ಮಿಕರ ಕಾರ್ಮಿಕರ ಮಕ್ಕಳಿಗೆ ನೀಡುತ್ತಿದ್ದ ವಿದ್ಯಾರ್ಥಿವೇತನ ಮೊದಲಿನಂತೆ ಮುಂದುವರೆಯಬೇಕು. ಆನ್‌ಲೈನ್ ಸಮಸ್ಯೆಗಳನ್ನು ಸರಿಪಡಿಸಬೇಕು. 60 ವರ್ಷ ಮೇಲ್ಪಟ್ಟ ಕಟ್ಟಡ ಕಾರ್ಮಿಕರು ಪಿಂಚಣಿ ಸೌಲಭ್ಯಕ್ಕೆ ಅರ್ಜಿ ಸಲ್ಲಿಸುವ ಅವಧಿಯನ್ನು ಒಂದು ವರ್ಷಕ್ಕೆ ವಿಸ್ತರಣೆ ಮಾಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಕರ್ನಾಟಕ ರಾಜ್ಯ ಶ್ರಮಿಕರ ರಕ್ಷಕ, ಕಟ್ಟಡ ಹಾಗೂ ಇತರೆ ನಿರ್ಮಾಣ ಕಾರ್ಮಿಕರ ಸಂಘದ ಅಧ್ಯಕ್ಷ ಹೆಚ್.ಜಿ.ಲೋಕೇಶ್, ಉಪಾಧ್ಯಕ್ಷ ಆರ್. ನಾಗರಾಜು, ಕಾರ್ಯದರ್ಶಿ ಆರ್. ಚಂದ್ರಶೇಖರ್, ಮಹಿಳಾ ಉದ್ಯಮಿ ಆರ್.ಯಶೋದ, ಗಂಧದ ಗುಡಿ ಫೌಂಡೇಶನ್‌ನ ರಾಜ್ಯಾಧ್ಯಕ್ಷ ಆರ್ಯನ್ ಗಂಧದ ಗುಡಿ, ಮನೋಹರ್, ಮೋಹನ್, ಚೇತನ್, ಮಹದೇವ್, ಮಹೇಶ್ ಭೋವಿ, ಲೋಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಮುಕ್ತ ಮಾರುಕಟ್ಟೆಯಲ್ಲೇ ಭರ್ಜರಿ ಬೆಲೆ

ಬೆಂಬಲ ಬೆಲೆಯಡಿ ಭತ್ತ ಮಾರಾಟಕ್ಕೆ ನೀರಸ ಪ್ರತಿಕ್ರಿಯೆ

●ಬೆರಳೆಣಿಕೆಯಷ್ಟು ರೈತರಿಂದ ನೋಂದಣಿ ●ಎಂಎಸ್‌ಪಿ ಯೋಜನೆ ಜಾರಿ ವಿಳಂಬವೂ ರೈತರ ಈ ನಿಲುವಿಗೆ ಕಾರಣ

ಮೈಸೂರು, ಡಿ.29(ಎಸ್‌ಬಿಡಿ)– ಭತ್ತಕ್ಕೆ ಮುಕ್ತ ಮಾರುಕಟ್ಟೆಯಲ್ಲಿ ಹೆಚ್ಚು ಬೆಲೆ ಇರುವುದರಿಂದ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರೈತರ ನೋಂದಣಿ ತೀರಾ ಕಡಿಮೆ ಇದೆ.

ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ) ಯೋಜನೆಯಡಿ ನೋಂದಣಿ ಹಾಗೂ ಖರೀದಿ ಪ್ರಕ್ರಿಯೆ ಆರಂಭವಾದಾಗಿನಿಂದ ಈವರೆಗೆ ಜಿಲ್ಲೆಯಲ್ಲಿ ಬೆರಳೆಣಿಕೆಯಷ್ಟು ರೈತರು ಮಾತ್ರ ನೋಂದಣಿ ಮಾಡಿಸಿದ್ದಾರೆ. ಭತ್ತವನ್ನು ಯಥೇಚ್ಛವಾಗಿ ಬೆಳೆಯುವ ಪ್ರದೇಶದಲ್ಲೂ ರೈತರು ನೋಂದಣಿಗೆ ನಿರಾಸಕ್ತಿ ತೋರಿದ್ದಾರೆ. ಚುಂಚನಕಟ್ಟೆ ಕೇಂದ್ರದಲ್ಲಿ 11 ರೈತರು, ತಿ.ನರಸೀಪುರದಲ್ಲಿ ನಾಲ್ವರು, ಕೆ.ಆರ್. ನಗರದಲ್ಲಿ ಮೂವರು, ನಂಜನಗೂಡು ಹಾಗೂ ಪಿರಿಯಾಪಟ್ಟಣದಲ್ಲಿ ತಲಾ ಒಬ್ಬರು ಸೇರಿದಂತೆ ನಿನ್ನೆ(ಡಿ.28)ವರೆಗೆ ಜಿಲ್ಲೆಯಾದ್ಯಂತ ಕೇವಲ 20 ರೈತರು ಎಂಎಸ್‌ಪಿ ದರದಲ್ಲಿ ಭತ್ತ ಮಾರಾಟಕ್ಕೆ ನೋಂದಣಿ ಮಾಡಿಸಿದ್ದಾರೆ. ಇವರಿಂದ 596 ಕ್ವಿಂಟಾಲ್ ಭತ್ತವನ್ನು ನಿರೀಕ್ಷಿಸಲಾಗಿದೆ. ಮೈಸೂರು, ನಂಜನಗೂಡು, ಬನ್ನೂರು, ಹುಣಸೂರು, ರತ್ನಪುರಿ, ಸಾಲಿಗ್ರಾಮ, ಹೆಚ್.ಡಿ.ಕೋಟೆ, ಬೆಟ್ಟದಪುರ ಹಾಗೂ ರಾವಂದೂರು ಕೇಂದ್ರಗಳಲ್ಲಿ ಒಬ್ಬರೂ ನೋಂದಣಿ ಮಾಡಿಸಿಲ್ಲ.

ಹೊರಗೆ ಹೆಚ್ಚು ಬೆಲೆ: ಎಂಎಸ್‌ಪಿ ಯೋಜನೆಯಡಿ ಕ್ವಿಂಟಾಲ್ ಸಾಮಾನ್ಯ ಭತ್ತಕ್ಕೆ 2,183ರೂ. ಹಾಗೂ ಗ್ರೇಡ್–ಎ ಭತ್ತಕ್ಕೆ 2,203 ರೂ. ನಿಗದಿಪಡಿಸಲಾಗಿದೆ. ಆದರೆ ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಾಲ್



ಭತ್ತಕ್ಕೆ 2,600ರಿಂದ 3 ಸಾವಿರ ರೂ. ಬೆಲೆ ಇದೆ. ಬರದ ಹಿನ್ನೆಲೆಯಲ್ಲಿ ಉತ್ಪಾದನೆ ಪ್ರಮಾಣವೂ ಕಡಿಮೆಯಾಗುವ ಸಾಧ್ಯತೆ ಇದೆ. ಅಲ್ಲದೆ ಅಕ್ಕಿಯ ಬೆಲೆ ಏರಿಕೆಯಾಗುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಭತ್ತಕ್ಕೆ ಹೆಚ್ಚಿನ ಬೇಡಿಕೆ ಸೃಷ್ಟಿಯಾಗಿ ಬೆಲೆಯೂ ಹೆಚ್ಚಾಗಬಹುದು. ಈ ಕಾರಣಗಳಿಂದ ರೈತರು ಮುಕ್ತ ಮಾರುಕಟ್ಟೆಯಲ್ಲೇ ಭತ್ತ ಮಾರಾಟ ಮಾಡುತ್ತಿದ್ದು, ಎಂಎಸ್‌ಪಿ ಯೋಜನೆ ಕೇಂದ್ರಗಳತ್ತ ಮುಖ ಮಾಡುತ್ತಿಲ್ಲ ಎಂದು ತಿಳಿದು ಬಂದಿದೆ.

ವಿಳಂಬವೂ ಕಾರಣ: ಎಂಎಸ್‌ಪಿ ಯೋಜನೆಯಡಿ ನೋಂದಣಿ ಮತ್ತು ಖರೀದಿ ಕೇಂದ್ರಗಳನ್ನು ತೆರೆಯುವಂತೆ ನವೆಂಬರ್‌ನಲ್ಲೇ ಒತ್ತಾಯವಿತ್ತು. ಆದರೆ ಡಿಸೆಂಬರ್ 1ರಿಂದ ಕೇಂದ್ರ ತೆರೆಯುವುದಾಗಿ ಜಿಲ್ಲಾಡಳಿತ ತಿಳಿಸಿತ್ತು. ಆದರೆ ಸರ್ವರ್ ಸಮಸ್ಯೆಯಿಂದಾಗಿ ಡಿ.18ಕ್ಕೆ ನೋಂದಣಿ ಆರಂಭವಾಯಿತು. ಹೀಗೆ ವಿಳಂಬವಾಗಿದ್ದು, ರೈತರ ನಿರಾಸಕ್ತಿಗೆ ಪ್ರಮುಖ ಕಾರಣ


> ಎಂಎಸ್‌ಪಿ ಯೋಜನೆಯಡಿ ಕ್ವಿಂಟಾಲ್ ಸಾಮಾನ್ಯ ಭತ್ತಕ್ಕೆ 2,183ರೂ. ಹಾಗೂ ಗ್ರೇಡ್–ಎ ಭತ್ತಕ್ಕೆ 2,203 ರೂ. ಮತ್ತು ರಾಗಿಗೆ 3,846 ರೂ. ನಿಗದಿಪಡಿಸಲಾಗಿದೆ. ಜಿಲ್ಲೆಯಲ್ಲಿ 15 ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಡಿ.28ರವರೆಗೆ ರಾಗಿ ಮಾರಾಟಕ್ಕೆ 10,583 ರೈತರು ಹಾಗೂ 20 ರೈತರು ಭತ್ತ ಮಾರಾಟಕ್ಕೆ ನೋಂದಣಿ ಮಾಡಿದ್ದಾರೆ. ಹಲವು ರೀತಿಯಲ್ಲಿ ಪ್ರಚಾರ ನಡೆಸಿ, ರೈತರಿಗೆ ಮಾಹಿತಿ ನೀಡಲಾಗಿದೆ.
> –ವಾಣಿಶ್ರೀ, ನೋಡಲ್ ಅಧಿಕಾರಿ

ಎನ್ನಲಾಗಿದೆ. ಸಮರ್ಪಕ ನೀರಿನ ಸೌಲಭ್ಯದಿಂದ ಬೆಳೆ ಬೇಗ ಕೈಗೆ ಬಂದಿರುವ ಭಾಗದಲ್ಲಿ ಸಹಜವಾಗಿ ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ್ದಾರೆ. ಖಾಸಗಿ ವ್ಯಾಪಾರಿಗಳಿಂದ ಸಾಲ ಮಾಡಿರುವ ರೈತರೂ ಅನಿವಾರ್ಯವಾಗಿ ಅವರಿಗೇ ಭತ್ತ ಮಾರಾಟ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬೆಲೆ ಮತ್ತಷ್ಟು ಹೆಚ್ಚಾಗುವ ನಿರೀಕ್ಷೆ ಇರುವುದರಿಂದ ಕೆಲವು ರೈತರು ಭತ್ತವನ್ನು ಸಂಗ್ರಹಿಸಿಟ್ಟುಕೊಂಡಿದ್ದಾರೆ. ಅಲ್ಲದೆ ಎಂಎಸ್‌ಪಿ ಕೇಂದ್ರ ಆರಂಭಿಸಿರುವ ಬಗ್ಗೆ ಪ್ರಚಾರದ ಕೊರತೆಯೂ ಇದೆ ಎಂದು ರೈತರು ತಿಳಿಸಿದ್ದಾರೆ.

ನಿರೀಕ್ಷಿತ ಸಂಗ್ರಹ ಕಷ್ಟಸಾಧ್ಯ: 2023–24ನೇ ಸಾಲಿನ ಮುಂಗಾರು ಋತುವಿನಲ್ಲಿ ಭತ್ತ ಹಾಗೂ ರಾಗಿ ಬಿತ್ತನೆ ಪ್ರಮಾಣದನ್ವಯ ಹೆಚ್.ಡಿ.ಕೋಟೆಯಲ್ಲಿ 13,300 ಮೆಟ್ರಿಕ್ ಟನ್, ಸರಗೂರಿನಲ್ಲಿ 17,125, ಹುಣಸೂರಿನಲ್ಲಿ 38,975, ಕೆ.ಆರ್.ನಗರದಲ್ಲಿ 49,590, ಸಾಲಿಗ್ರಾಮದಲ್ಲಿ 61,132, ಮೈಸೂರು ತಾಲೂಕಿನಲ್ಲಿ 3,385, ನಂಜನಗೂಡಲ್ಲಿ 58,325, ಪಿರಿಯಾಪಟ್ಟಣದಲ್ಲಿ 42 ಸಾವಿರ ಮೆ.ಟನ್, ತಿ.ನರಸೀಪುರದಲ್ಲಿ 80,940 ಮೆ.ಟನ್ ಸೇರಿ ಜಿಲ್ಲೆಯಲ್ಲಿ ಒಟ್ಟು 3,64,772 ಮೆ.ಟನ್ ಭತ್ತದ ಉತ್ಪಾದನೆ ನಿರೀಕ್ಷಿಸಲಾಗಿದೆ. ಆದರೆ ಬಹುತೇಕ ರೈತರು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿರುವ ಕಾರಣ ಎಂಎಸ್‌ಪಿ ಯೋಜನೆಯಡಿ ನಿರೀಕ್ಷಿತ ಪ್ರಮಾಣದ ಭತ್ತ ಸಂಗ್ರಹ ಕಷ್ಟಸಾಧ್ಯವಾಗಿದೆ. ಇದರಿಂದ ಅನ್ನಭಾಗ್ಯ ಯೋಜನೆ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎನ್ನಲಾಗಿದೆ.

ಎಂಎಸ್‌ಪಿ ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ ಭತ್ತ ಮತ್ತು ರಾಗಿ ಖರೀದಿ ಪ್ರಕ್ರಿಯೆ ಜವಾಬ್ದಾರಿಯನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಏಜೆನ್ಸಿಗೆ ವಹಿಸಲಾಗಿದ್ದು, ಭತ್ತದ ಆವಕ ಹೆಚ್ಚಿಸುವ ನಿಟ್ಟಿನಲ್ಲಿ ವ್ಯಾಪಕ ಪ್ರಚಾರದ ಮೂಲಕ ನೋಂದಣಿ ಮಾಡಿಸುವಂತೆ ರೈತರಿಗೆ ಅರಿವು ಮೂಡಿಸಲು ಕ್ರಮ ವಹಿಸಲಾಗಿದೆ.

ರಾಗಿಗೆ ಉತ್ತಮ ಎಂಎಸ್‌ಪಿ



ರಾಗಿಗೆ ಉತ್ತಮ ಎಂಎಸ್‌ಪಿ ನಿಗದಿಪಡಿಸಿರುವುದರಿಂದ ರೈತರ ನೋಂದಣಿಯೂ ಹೆಚ್ಚಾಗಿದೆ. ಕ್ವಿಂಟಾಲ್ ರಾಗಿಗೆ ಮುಕ್ತ ಮಾರುಕಟ್ಟೆಯಲ್ಲಿ 3,300ರಿಂದ 3,400 ರೂ. ಬೆಲೆ ಇದೆ. ಆದರೆ ಎಂಎಸ್‌ಪಿ ಯೋಜನೆಯಡಿ 3,846 ರೂ. ದರ ನಿಗದಿಪಡಿಸಲಾಗಿದೆ. ಪರಿಣಾಮ ರೈತರು ಎಂಎಸ್‌ಪಿ ಯೋಜನೆ ಕೇಂದ್ರಗಳಲ್ಲಿ ನೋಂದಣಿ ಮಾಡಿಸುತ್ತಿದ್ದಾರೆ. ಬೆಟ್ಟದಪುರದಲ್ಲಿ 3,517 ರೈತರು, ಪಿರಿಯಾಪಟ್ಟಣದಲ್ಲಿ 2070, ಹುಣಸೂರಿನಲ್ಲಿ 2049, ಸಾಲಿಗ್ರಾಮದಲ್ಲಿ 943, ಹೆಚ್.ಡಿ.ಕೋಟೆ ಹಾಗೂ ಸರಗೂರು ಕೇಂದ್ರಗಳಲ್ಲಿ 475, ರತ್ನಪುರಿಯಲ್ಲಿ 394, ಕೆ.ಆರ್.ನಗರದಲ್ಲಿ 357, ಚುಂಚನಕಟ್ಟೆಯಲ್ಲಿ 317, ರಾವಂದೂರಿನಲ್ಲಿ 239, ಬನ್ನೂರು ಕೇಂದ್ರದಲ್ಲಿ 136, ಬಂಡೀಪಾಳ್ಯ ಕೇಂದ್ರದಲ್ಲಿ 86 ಮಂದಿ ಸೇರಿ ಜಿಲ್ಲೆಯ ಒಟ್ಟು 10,583 ರೈತರು ರಾಗಿ ಮಾರಾಟಕ್ಕೆ ನೋಂದಣಿ ಮಾಡಿಸಿದ್ದಾರೆ. ನೋಂದಣಿ ಮಾಡಿಸಿರುವ ರೈತರಿಂದ ಒಟ್ಟು 2,66,864 ಕ್ವಿಂಟಾಲ್ ರಾಗಿ ನಿರೀಕ್ಷಿಸಲಾಗಿದೆ. ಬಿಳಿಗೆರೆ, ನಂಜಗೂಡು ಹಾಗೂ ತಿ.ನರಸೀಪುರದಲ್ಲಿ ಒಬ್ಬರೂ ನೋಂದಣಿ ಮಾಡಿಸಿಲ್ಲವಾದರೂ ಈ ವ್ಯಾಪ್ತಿಯ ರೈತರು, ತಮಗೆ ಅನುಕೂಲವಾದ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿರಬಹುದು ಎಂದು ಮೂಲಗಳು ತಿಳಿಸಿದೆ. ಉತ್ಪಾದನೆ ಪ್ರಮಾಣದ ಆಧಾರದಲ್ಲಿ ಈ ಸಾಲಿನಲ್ಲಿ 1,24,559 ಮೆ.ಟನ್ ರಾಗಿ ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ.

ನಕ್ಕರೆ ಅದೇ ಸ್ವರ್ಗ

ಪತ್ನಿ : "ರೀ ಟೆಲಿಫೋನ್ ಕಂಪನಿಯವರು ಹೊಸ ಡೈರೆಕ್ಟರಿ ತಂದಿದ್ದಾರೆ'

ಗಂಡ : "ಹಳೆಯದನ್ನೇ ನಾನಿನ್ನು ಪೂರ್ತಿ ಓದಿಲ್ಲ. ಅವರಿಗೆ ಮುಂದಿನ ವಾರ ಬರಲು ಹೇಳು"

ಮೈಸೂರು ಮಿತ್ರ

ಶನಿವಾರ, 30 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಾಯಕನೆಂದರೆ ದಾರಿಗೊತ್ತಿರುವವನು, ದಾರಿಯಲ್ಲಿ ಹೋಗುವವನು ಮತ್ತು ದಾರಿ ತೋರಿಸುವವನು –ಜಾನ್ ಮ್ಯಾಕ್ಸ್‌ವೆಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒಂದು ಹೂವಿನಿಂದ ಮಾಲೆಯಾಗದು / ಒಂದು ಕೈನಿಂದ ಚಪ್ಪಾಳೆಯಾಗದು

ನಿಮ್ಮ ಪತ್ರಗಳು

ಕನ್ನಡ ಉಳಿಸಿ ಬೆಳೆಸುವಲ್ಲಿ ಪಣತೊಟ್ಟು ನಿಂತ ಕರವೇ ಜೊತೆ ಕೈಜೋಡಿಸೋಣಾ?!

ಮಾನ್ಯರೆ,

ಬೆಂಗಳೂರಿನಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿತವಾಗಿ ಕೇಕೆ ಹಾಕುತ್ತಿದ್ದ ನಾಮಫಲಕಗಳನ್ನು ನಿಷೇಧ ಮಾಡುವ ಕಾರ್ಯಕ್ಕೆ ಕರ್ನಾಟಕ ರಕ್ಷಣ ವೇದಿಕೆ ಚಾಲನೆ ನೀಡಿದೆ. ಪ್ರತಿಯೊಬ್ಬ ಕನ್ನಡಿಗನಲ್ಲೂ ಈ ಕನ್ನಡದ ಕಿಚ್ಚು ಹೊತ್ತಿ ಉರಿಯಬೇಕು. ನಮ್ಮ ಸುತ್ತ ಮುತ್ತಲೂ ಕನ್ನಡದ ಕಂಪು ಹರಡುವಂತೆ ಮಾಡಬೇಕು. ಕರ್ನಾಟಕ ರಾಜ್ಯಾದ್ಯಾಂತ ಎಲ್ಲ ಗ್ರಾಮ ಹಾಗೂ ನಗರಗಳಲ್ಲಿ ಕನ್ನಡದ ನಾಮಫಲಕಗಳು ರಾರಾಜಿಸುವಂತೆ ನಾವು ಮಾಡುವಲ್ಲಿ ಸಕ್ರಿಯವಾಗಿ ಕರವೇ ಜೊತೆ ಪಾಲ್ಗೊಳ್ಳೋಣ.

ಕನ್ನಡವೆಂಬುದು ಕೇವಲ ನವೆಂಬರ್ ಮಾಸದಲ್ಲಿ ಹೂ, ಹಾರ ಹಾಕಿ ಬೀದಿ ಬೀದಿಗಳಲ್ಲಿ ಭುವನೇಶ್ವರಿ ಮೆರವಣಿಗೆ ಮಾಡಿ ಕನ್ನಡ ಹಾಡು ನೃತ್ಯಗಳಿಗೆ ಸೀಮಿತವಾಗಬಾರದು ಎನ್ನುವುದು ನನ್ನ ಆಶಯ. ನಾವೆಲ್ಲರೂ ಕನ್ನಡ ಕಟ್ಟುವ ಕಾರ್ಯಕ್ಕೆ ಕಂಕಣ ಬದ್ಧರಾಗಿ ಪಣತೊಟ್ಟು ನಿಂತರೆ ಈ ಕಾರ್ಯದಲ್ಲಿ ಜಯ ಕಟ್ಟಿಟ್ಟ ಬುತ್ತಿ. ಈ ಹೋರಾಟಕ್ಕೆ ಚಾಲನೆ ನೀಡಿದ ಕರವೇ ರಾಜ್ಯಾಧ್ಯಕ್ಷರಾದ ನಾರಾಯಣಗೌಡರು ಹಾಗೂ ಕಾರ್ಯಕರ್ತರಿಗೆ ಸಹಸ್ರ ಪ್ರಣಾಮಗಳನ್ನು ಎಲ್ಲಾ ಕನ್ನಡಿಗರು ಸಲ್ಲಿಸುತ್ತೇವೆ. ನೀವು ಇಟ್ಟ ಈ ದಿಟ್ಟ ಹೆಜ್ಜೆಯನ್ನು ಪ್ರತಿಯೊಬ್ಬ ಕನ್ನಡಿಗನು ಶ್ಲಾಘಿಸಲೇಬೇಕಲ್ಲವೇ..?

ನಿಮ್ಮ ಈ ಕನ್ನಡ ಪರ ಹೋರಾಟಗಳು ಸದಾ ಹೀಗೆ ಮುಂದುವರೆಯಲಿ. ನಮ್ಮ ರಾಜ್ಯದ ಎಲ್ಲ ಕನ್ನಡಿಗರು ನಿಮ್ಮ ಪರವಾಗಲಿ. ಇಂತಹ ಇನ್ನಷ್ಟು ನವೀನತೆಯ ಯೋಜನೆಗಳೊಂದಿಗೆ ಕನ್ನಡವನ್ನು ಉಳಿಸಿ ಬೆಳೆಸುವ ಕಾರ್ಯಕ್ಕೆ ಮುಂದಾಗಿ ಎಂಬುದು ಕನ್ನಡಿಗರ ಹರಕೆ. ಕರ್ನಾಟಕದಲ್ಲಿ ಹಲವು ಕಡೆ ಕನ್ನಡ ಮಾತನಾಡಿದರೆ ಮುಖ ತಿರುಗಿಸುವ ಜನರಿದ್ದಾರೆ ಹಾಗೂ ಕನ್ನಡ ಮಾತನಾಡಿದರೆ ಅಗೌರವ ತೋರುವ ಹಾಗೂ ಅಪಹಾಸ್ಯ ಮಾಡುವಂತ ಹೀನ ಜನರು ಕರ್ನಾಟಕದಲ್ಲಿ ಕ್ರಿಮಿಗಳಂತಿದ್ದಾರೆ. ಇಂತಹ ಯೋಜನೆ ಯಶಸ್ವಿಯಾಗಿ ಮಾಡುವುದರಿಂದ ಅಂತವರ ಮುಖಕ್ಕೆ ಮಸಿ ಬಳಿದಂತಾಗುತ್ತದೆ ಅಲ್ಲವೇ. ಎಲ್ಲ ಕನ್ನಡಿಗರು ಕರವೇ ಜೊತೆ ನಮ್ಮ ಕರ ಜೋಡಿಸೋಣಾ?! ಜೈ ಕರ್ನಾಟಕ ಮಾತೆ ಜೈ ಭುವನೇಶ್ವರಿ.

–ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು.

ದೈನಂದಿನ ಬದುಕಲ್ಲಿ ಪ್ಲಾಸ್ಟಿಕ್ ಬಳಕೆ ಕಡಿಮೆಯಾಗಲಿ

ಮಾನ್ಯರೆ,

ಕಳೆದ ವಾರ ಸಂತೆ ಪೇಟೆಯಲ್ಲಿ ದಿನಸಿ ಸಾಮಗ್ರಿ ತರಲು ಅಂಗಡಿಗೆ ಹೋದ ಸಂದರ್ಭದಲ್ಲಿ ಒಂದು ಘಟನೆಗೆ ಸಾಕ್ಷಿಯಾದೆ.ಸಭ್ಯ ನಿವೃತ್ತ ವ್ಯಕ್ತಿಯೊಬ್ಬರು ದಿನಸಿ ಅಂಗಡಿಗೆ ಬಂದಿದ್ದರು. ಕಳೆದ ಬಾರಿ ಅಂಗಡಿಯಿಂದ ಸಾಮಗ್ರಿಗಳನ್ನು ಪಡೆದುಕೊಂಡಿದ್ದ ಪ್ಲಾಸ್ಟಿಕ್ ಕವರ್‌ಗಳನ್ನು ಮತ್ತೆ ಈ ತಿಂಗಳು ತಂದು ಅವುಗಳಲ್ಲಿ ಹೊಸ ದಿನಸಿಗಳನ್ನು (ಅಕ್ಕಿ, ಬೇಳೆ, ರವೆ)ಇತ್ಯಾದಿ ತೆಗೆದುಕೊಂಡರು.

ಇದು ನೋಡಲು ಅವಲಕ್ಷಣವಾದರೂ ಪ್ರಜ್ಞಾವಂತ ನಡೆ ಎನ್ನಿಸಿತು. ಅವರ ಮೂಲ ಆಶಯ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ ಮರುಬಳಕೆ ಮಾಡತಕ್ಕದ್ದು. ಅವರ ಕಾರ್ಯ ಸಮಾಜಕ್ಕೆ ಮಾದರಿ. ಒಂದು ಚಿಕ್ಕ ಬದಲಾವಣೆ – ದೊಡ್ಡ ಸುಧಾರಣೆಗೆ ನಾಂದಿಯಾಗಬಹುದು. ಪ್ಲಾಸ್ಟಿಕ್ ಬದುಕಿನ ಅವಿಭಾಜ್ಯ ಅಂಗವಾಗಿದೆ, ಆದರೆ ಇತಿಮಿತಿಯಲ್ಲಿ ಬಳಸಿ ಮರುಬಳಕೆ ಮಾಡಿದರೆ ಮುಂದಿನ ಪೀಳಿಗೆಗೆ ಮತ್ತು ಪ್ರಕೃತಿಗೆ ಸಹಾಯವಾಗುತ್ತದೆ.

–ಕೊಟ್ರೇಶ್ ಹೀರೆಮಠ್, ಜೆಎಸ್‌ಎಸ್ ಲೇಔಟ್, ಮೈಸೂರು

ಪ್ರತಾಪ್ ಸಿಂಹರದ್ದು ಒಂದು ಕಲ್ಲು ಎರಡು ಹಕ್ಕಿ

ಮಾನ್ಯರೆ,

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಪ್ರತಾಪ್ ಸಿಂಹ ಅವರು ಸಂಸತ್ ಭವನದ ಮೇಲಿನ ದಾಳಿಯ ನಂತರ ಹಲವು ದಿನಗಳ ಕಾಲ ಮರೆಯಾಗಿದ್ದು, ಮೊನ್ನೆಯಷ್ಟೆ ಮಾಧ್ಯಮದ ಮುಂದೆ ಬಂದು ನಾನು ಮತ್ತು ನನ್ನ ತಮ್ಮ ಇಬ್ಬರು ತಪ್ಪು ಮಾಡಿಲ್ಲ ಎಂದು ಸಮರ್ಥಿಸಿಕೊಳ್ಳುತ್ತಿದ್ದ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮತ್ತು ಕಾಂಗ್ರೆಸ್ ಪಕ್ಷವನ್ನು ಟೀಕಿಸುವಾಗ ನಾನು ಯಾವುದೇ ಜಾತಿ ಮತ್ತು ಧರ್ಮವನ್ನು ಟೀಕಿಸಿಲ್ಲ. ಅಭಿವೃದ್ಧಿ ರಾಜಕಾರಣ ಮಾತ್ರ ಮಾಡಿದ್ದೇನೆ ಎನ್ನುತ್ತ ನಾನು ಸೋಮಾರಿ ಸಿದ್ದನಲ್ಲ ಎಂದು ಹೇಳಿದ್ದಾರೆ. ಇದು ಎಲ್ಲಾ ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಮಾತು ಎರಡು ಅರ್ಥ ಕಲ್ಪಿಸುತ್ತದೆ. ಯಾವುದೇ ವ್ಯಕ್ತಿ ಏನು ಕೆಲಸ ಮಾಡದೆ ಇದ್ದಾಗ ಸೋಮಾರಿ ಸಿದ್ದನಂತೆ ಕುಳಿತಿದ್ದೀಯ ಎಂದು ಸಂಭೋದಿಸುವುದು ಉಂಟು. ಇಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರಿನಲ್ಲಿ ಸಿದ್ದ ಎಂಬ ಪದವಿದ್ದು ಸೋಮಾರಿ ಸಿದ್ದ ಎಂಬುವ ಮಾತು ಸಿದ್ದರಾಮಯ್ಯ ಸೋಮಾರಿ ಎಂಬುದನ್ನು ಸೂಚಿಸುತ್ತದೆ. ಇಲ್ಲಿ ಪ್ರತಾಪ್ ಸಿಂಹ ಅವರು ಪತ್ರಿಕಾ ಅಂಕಣಕಾರರಾಗಿ, ಸಂಸದರಾಗಿ ನಾನೇನು ಸೋಮಾರಿಯಲ್ಲ ಎಂದು ಹೇಳಬಹುದಿತ್ತು ಸಿದ್ದ ಪದ ಬಳಕೆಯ ಒಳ ಮರ್ಮ ಅವರೆ ಹೇಳಬೇಕು. ಅಲ್ಲದೆ ಬೇರೆ ಧರ್ಮೀಯರ ಆಚರಣೆಗೆ ವಿರುದ್ಧವಾಗಿ ನಡೆದುಕೊಂಡಿರುವುದು ಸುಳ್ಳಲ್ಲ. ಒಟ್ಟಾರೆ ಪ್ರತಾಪ್ ಸಿಂಹ ಅವರು ಸಂಕಷ್ಟಕ್ಕೆ ಸಿಲುಕಿರುವುದಂತು ಸುಳ್ಳಲ್ಲ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಹಲವು ಸಮುದಾಯಗಳು ಇವರ ವಿರುದ್ದ ನಿಂತರು ಅಚ್ಚರಿಯಿಲ್ಲ.

–ದಡದಹಳ್ಳಿ ರಮೇಶ್, ಚಂದಕವಾಡಿ, ಚಾಮರಾಜನಗರ ಜಿಲ್ಲೆ.

ಹನಿ ಹಲವು

ಮಾನ್ಯರೆ,

1. **ಶಿಕ್ಷೆ** : ಜೀವಾವಧಿ ಶಿಕ್ಷೆ ದೊಡ್ಡದೊ ಮರಣದಂಡನೆ ದೊಡ್ಡದೊ? (ಸಕ್ರಮ). ಜೀವಾವಧಿ ಶಿಕ್ಷೆ ದೊಡ್ಡದು ಎಂದು ನನ್ನ ವೈಯಕ್ತಿಕ ಅಭಿಪ್ರಾಯ. ಅನೇಕರು ಸಾಯುವುದಕ್ಕೆ ಅಂಜುವುದಿಲ್ಲ ಎಂದಿದ್ದರೂ ಸಾವು ತಪ್ಪದು! ಅಪಘಾತಗಳಲ್ಲಿ ದಾರುಣವಾಗಿ ಸಾಯುವುದಿಲ್ಲವೆ?
2. **ಉತ್ಪಾದನೆ** : ಇದೊಂದು ವಿಸ್ಮಯ : ನಶ್ವರ ನರ ಶಾಶ್ವತ ಪ್ಲಾಸ್ಟಿಕ್ ಉತ್ಪಾದಿಸುವುದು!
3. **ಸೌಂದರ್ಯ** : ಗಿಡ್ಡ ಕೂದಲಿನ ಸುಂದರಿಯೊಬ್ಬರು ಮಿಸ್ ಫ್ರಾನ್ಸ್ ಆಗಿ ಆಯ್ಕೆಯಾದಳಂತೆ ! ಮುಂದಿನ ಸರದಿ ಬೋಳುತಲೆ ತರಳೆ (ಲೆ) ಯದೆ?
4. **ಕಳಂಕ** : ಪರಿಸರವನ್ನು ಸ್ವಚ್ಛವಾಗಿಸುವುದು ಅಸಾಧ್ಯವಲ್ಲ. ಆದರೆ ಮನುಷ್ಯನೆ ಒಂದು ದೊಡ್ಡ ಅಸ್ವಚ್ಛ (ಸ್ಥ) ತೆ!
5. ದೇವರು ಸರ್ವಾಂತರ್ಯಾಮಿ, ದಿಟ. ಆದರೆ ಅವನು ಕೆಲವೊಮ್ಮೆ ಕೆಲವೆಡೆ ರಜೆ ಹಾಕುತ್ತಾನೆಂಬುದೇ ಸಮಸ್ಯೆ!
6. ಈಗ ವಿಕಾಸವೊ ವಿನಾಶವೊ? "ವಿಕಾಸವಾಗುವುದರೊಳಗೆ ವಿನಾಶವೆ ತಲುಪುವುದು" (ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರ).
7. **ವಿಫಲ** : ಬರಿದೇ ಬರೆದೇನು ಪ್ರಯೋಜನ, ಇಲ್ಲದಿರೆ ಓದುವ ಜನ?
8. ಒಂದು ಹೊಸ ನಾಣ್ಣುಡಿ : "ದೂರದ ಹೆಣ್ಣು ನುಣ್ಣಗೆ!"

–ಸಿಪಿಕೆ, ಮೈಸೂರು.

ಶ್ರೀಮದ್ಭಗವದ್ಗೀತೆ ಜನ್ಮದಿನ; ಪವಿತ್ರ ಗೀತಾ ಜಯಂತಿ



ಹಿಂದೂ ಧರ್ಮದ ಅತ್ಯಂತ ಪವಿತ್ರ ಗ್ರಂಥ ಶ್ರೀಮದ್ಭಗವದ್ಗೀತೆ ಉಗಮವಾದ ದಿನವನ್ನು 'ಗೀತಾ ಜಯಂತಿ' ಎಂದು ಪರಿಗಣಿಸಲಾಗುತ್ತದೆ. ದ್ವಾಪರ ಯುಗದಲ್ಲಿ ಕುರುಕ್ಷೇತ್ರ ಯುದ್ಧಭೂಮಿಯಲ್ಲಿ ಪರಮ ಪುರುಷನಾದ ಶ್ರೀಕೃಷ್ಣನು ತನ್ನ ಆತ್ಮೀಯ ಸ್ನೇಹಿತ ಅರ್ಜುನನಿಗೆ ವಿವರಿಸಿದ ಸಾರವೇ 'ಶ್ರೀಮದ್ಭಗವದ್ಗೀತೆ'. ಭಗವದ್ಗೀತೆಯು ಕೃಷ್ಣ ದ್ವೈಪಾಯನ ಋಷಿ ವೇದವ್ಯಾಸರಿಂದ ರಚಿತಗೊಂಡಿದೆ.

ಗೀತಾ ಜಯಂತಿ ಹಿಂದೂಗಳಿಗೆ ಬಹಳ ಮುಖ್ಯ ಹಾಗೂ ವಿಶೇಷ ದಿನವಾಗಿದೆ. ಪವಿತ್ರ ಗ್ರಂಥ ಗೀತೆಯು ಸುಮಾರು 5000 ವರ್ಷಗಳನ್ನು ಪೂರೈಸಿದ್ದು, ಗೀತಾ ಜಯಂತಿಯನ್ನು ಮಾರ್ಗಶೀರ ಮಾಸದ ಶುಕ್ಲ ಪಕ್ಷದ ಏಕಾದಶಿ ತಿಥಿಯಂದು (11ನೇ ದಿನ) ಆಚರಿಸಲಾಗುತ್ತದೆ.

ಗೀತಾ ಜಯಂತಿಯ ಮೂಲ: 18 ದಿನಗಳ ಕುರುಕ್ಷೇತ್ರ ಯುದ್ಧದ ಮೊದಲ ದಿನದಂದು ಭಗವಾನ್ ಕೃಷ್ಣನು ತನ್ನ ತಾತ್ವಿಕ ಬೋಧನೆಗಳನ್ನು ನೀಡಿದನು. ಅರ್ಜುನ ತನ್ನ ಸೋದರ ಸಂಬಂಧಿಗಳಾದ ಕೌರವರ ವಿರುದ್ಧ ಯುದ್ಧದಲ್ಲಿ ಹೋರಾಡಲು ನಿರಾಕರಿಸಿದಾಗ, ಶ್ರೀಕೃಷ್ಣನು ಅವನಿಗೆ ಜೀವನದ ಸತ್ಯ, ಕರ್ಮ ಮತ್ತು ಧರ್ಮದ ತತ್ವಶಾಸ್ತ್ರವನ್ನು ವಿವರಿಸಿದನು. ಆ ಮೂಲಕ ಪ್ರಪಂಚದ ಶ್ರೇಷ್ಠ ಗ್ರಂಥಗಳಲ್ಲಿ ಒಂದಾದ ಗೀತೆಗೆ ಉಗಮಕ್ಕೆ ನಾಂದಿಯಾದನು.

ಕುರುಕ್ಷೇತ್ರ: ಮಹಾಭಾರತದ ಕುರುಕ್ಷೇತ್ರ ಯುದ್ಧ ನಡೆದ ಸ್ಥಳ ಈಗ ಭಾರತದ ಹರಿಯಾಣ ರಾಜ್ಯದ 'ಕುರುಕ್ಷೇತ್ರ' ಎಂದು ಕರೆಯಲಾಗುತ್ತದೆ. ಕುರುಕ್ಷೇತ್ರವು ಹಿಂದೂಗಳ ಪವಿತ್ರ ಮತ್ತು ಪ್ರಮುಖ ಧಾರ್ಮಿಕ ಸ್ಥಳವಾಗಿದೆ. ಗೀತೆಯ ಜನ್ಮ ಸ್ಥಳವಾದ ಈ ಕುರುಕ್ಷೇತ್ರವು ಪ್ರಸಿದ್ಧ ಋಷಿ ಮನು ಮನುಸ್ಮೃತಿ, ಋಗ್ ಮತ್ತು ಸಾಮವೇದಗಳನ್ನು ರಚಿಸಿದ ಸ್ಥಳವೂ ಆಗಿದೆ.

ಶ್ರೀಮದ್ಭಗವದ್ಗೀತೆ ಗ್ರಂಥ ರಚನೆ: ಭಗವದ್ಗೀತೆಯು 18 ಅಧ್ಯಾಯಗಳು ಮತ್ತು 700 ಶ್ಲೋಕಗಳನ್ನು ಹೊಂದಿದೆ. ಈ ಎಲ್ಲಾ ಶ್ಲೋಕಗಳು ದೇವಲಿಪಿ ಸಂಸ್ಕೃತ ಭಾಷೆಯಲ್ಲಿ ರಚನೆಯಾಗಿದೆ. ಭಗವದ್ಗೀತೆಯು ಅದರ ತಾತ್ವಿಕ, ಲೌಕಿಕ, ಪ್ರಾಯೋಗಿಕ, ರಾಜಕೀಯ, ಮಾನಸಿಕ ಮತ್ತು ಆಧ್ಯಾತ್ಮಿಕ ಮೌಲ್ಯಕ್ಕಾಗಿ ಅತ್ಯಂತ ಪ್ರಮುಖ ಮತ್ತು ಪ್ರಭಾವಶಾಲಿ ಹಿಂದೂ ಗ್ರಂಥವೆಂದು ಪರಿಗಣಿಸಲಾಗಿದೆ. ಈ ಎಲ್ಲಾ ಶ್ಲೋಕಗಳಲ್ಲಿ, ಕರ್ಮ, ಧರ್ಮ, ಜನನ, ಸಾವು, ಸತ್ಯ ಮತ್ತು ಅಸತ್ಯ ಸೇರಿದಂತೆ ಜೀವನಕ್ಕೆ ಸಂಬಂಧಿಸಿದ ಎಲ್ಲಾ ಪ್ರಮುಖ ಪ್ರಶ್ನೆಗಳಿಗೆ ಉತ್ತರವಿದೆ.

ಭಗವದ್ಗೀತೆಯನ್ನು ನರನಾದ ಅರ್ಜುನ, ನಾರಾಯಣನಾದ ಕೃಷ್ಣನ ನಡುವಿನ ಸಂಭಾಷಣೆಯಾಗಿ ನೋಡಬಹುದಾಗಿದೆ. ಗ್ರಂಥದ ವಿಷಯಗಳನ್ನು ಉಪನಿಷತ್ತುಗಳಿಂದ ಪಡೆಯಲಾಗಿದೆ. ಜ್ಞಾನ (ಜ್ಞಾನ), ಕರ್ಮ (ಕ್ರಿಯೆ) ಮತ್ತು ಭಕ್ತಿ (ಭಕ್ತಿ) ಮತ್ತು ಅವು ಆತ್ಮದ ಮೋಕ್ಷಕ್ಕೆ (ಅಂತಿಮ ವಿಮೋಚನೆ) ಹೇಗೆ ಕಾರಣವಾಗುತ್ತವೆ ಎಂಬುದನ್ನು ಇದು ಚರ್ಚಿಸುತ್ತದೆ. ಕುರುಕ್ಷೇತ್ರ ಯುದ್ಧ ಪ್ರಾರಂಭವಾಗುವ ಮೊದಲು ಈ ಸಂಭಾಷಣೆ ನಡೆಯುತ್ತದೆ. ಯುದ್ಧ ನಿಲ್ಲಿಸಲು ಹಲವಾರು ಪ್ರಯತ್ನಗಳು ವಿಫಲವಾದ ನಂತರ, ಯುದ್ಧವು ಅನಿವಾರ್ಯವಾಗಿ, ಯುದ್ಧ ಸನ್ನದ್ಧ, ಸೈನ್ಯಗಳು ರಣರಂಗದಲ್ಲಿ ಮುಖಾಮುಖಿಯಾದವು. ಯುದ್ಧವು ಪ್ರಾರಂಭವಾಗುತ್ತಿದ್ದಂತೆಯೇ, ಅರ್ಜುನನು ರಥವನ್ನು ಯುದ್ಧಭೂಮಿಯ ಮಧ್ಯಕ್ಕೆ ಓಡಿಸಲು ಕೃಷ್ಣನನ್ನು ಕೇಳಿದನು. ಎದುರಾಳಿ ಪಕ್ಷವು ತನ್ನ ಸಂಬಂಧಿಕರು, ಗುರುಗಳು ಮತ್ತು ಸ್ನೇಹಿತರನ್ನು ಒಳಗೊಂಡಿರುವುದನ್ನು ಗಮನಿಸಿದ ಅರ್ಜುನನಿಗೆ, ಅವರೊಂದಿಗೆ ಹೇಗೆ ಹೋರಾಡಲಿ ಎಂಬ ಸಂದಿಗ್ಧ ಸ್ಥಿತಿ ಎದುರಾಯಿತು. ಈ ಸಂದರ್ಭದಲ್ಲಿ ಕೃಷ್ಣಾರ್ಜುನರ ನಡುವೆ ನಡೆದ ಸಂಭಾಷಣೆ, ಅರ್ಜುನನಿಗೆ ಕೃಷ್ಣನ ಸಲಹೆ, ಸಂದೇಶಗಳು ಮತ್ತು ಬೋಧನೆಗಳೇ ಈ 'ಭಗವದ್ಗೀತೆ'.

ಜಗತ್ತಿನ ಎಲ್ಲಾ ಧರ್ಮಗಳ ವಿಭಿನ್ನ ಸಿದ್ಧಾಂತಗಳಿಗೆ ಸ್ಫೂರ್ತಿಯಾದ ಭಗವದ್ಗೀತೆಯಿಂದ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತಗಳು ಸೃಷ್ಟಿಯಾಗಿದ್ದು, ಅನೇಕ ವಾದಗಳಿಗೆ ಮೂಲ ಸೆಲೆಯಾಗಿದೆ. ಮೂಲಾರ್ಥದಲ್ಲಿ ಭಗವದ್ಗೀತೆಯು ಉದ್ಗೀತೆಯಾಗಿದ್ದು, ಉದ್ಗಾರಗಳ ಸಂಘರ್ಷವಾಗಿದೆ. ಉದ್ಗೀತೆ ಉದ್ಗಾರಗಳು ಅಂದರೆ ವಿಚಾರಗಳನ್ನು ಅಭ್ಯಾಸ ಮಾಡಿ, ಅವು ಪಕ್ವವಾದಾಗ ಸ್ವರಚನೆಯಿಲ್ಲದೆ ಮೂಡುವ ಪದಗಳು. ಗೀತೆಯು ರಚನೆ ಅಲ್ಲ, ಗೀತೆಯು ಉದ್ಗಾರವಾಗಿದೆ. ಭಗವಾನ್ ಕೃಷ್ಣನು ಯುದ್ಧದ ಸಂದರ್ಭದಲ್ಲಿ ನೀಡಿದ ಜೀವನದ ಸತ್ಯಗಳ ಸಂದೇಶ ಅಂತಿಮವಾಗಿ ಗೀತೆಯಾಗಿದೆ. ಹಾಗಾಗಿ ಗೀತೆಯು ಜಗತ್ತಿನ ಎಲ್ಲಾ ಗ್ರಂಥಗಳ ಹಾಗೆ ಸಾಮಾನ್ಯವಾದ ಗ್ರಂಥವಲ್ಲ ಅತ್ಯಂತ ಕ್ಲಿಷ್ಟವಾದ, ಸಂಕೀರ್ಣವಾದ ಮಹಾ ಪವಿತ್ರ ಗ್ರಂಥವಾಗಿದೆ.

18 ಅಧ್ಯಾಯಗಳು

- ಅರ್ಜುನನ ನಿರಾಶೆಯ ಯೋಗ (ಅರ್ಜುನ-ವಿಷಾದ-ಯೋಗ)
- ವಿಶ್ಲೇಷಣೆಯ ಯೋಗ (ಸಾಂಖ್ಯ ಯೋಗ)
- ಕ್ರಿಯೆಯ ಯೋಗ (ಕರ್ಮ–ಯೋಗ)
- ಜ್ಞಾನದ ಯೋಗ (ಜ್ಞಾನ–ಯೋಗ)
- ತ್ಯಾಗದ ಯೋಗ (ಸಂನ್ಯಾಸ–ಯೋಗ)
- ಧ್ಯಾನದ ಯೋಗ (ಧ್ಯಾನ–ಯೋಗ)
- ಬುದ್ಧಿವಂತಿಕೆಯ ಯೋಗ (ವಿಜ್ಞಾನ–ಯೋಗ)
- ವಿಮೋಚನೆಯ ಆತ್ಮದ ಯೋಗ (ತಾರಕ–ಬ್ರಹ್ಮ–ಯೋಗ)
- ಗುಪ್ತ ಜ್ಞಾನದ ಯೋಗ (ರಾಜ–ವಿದ್ಯಾ–ಗುಹ್ಯ–ಯೋಗ)
- ಶ್ರೇಷ್ಠತೆಯ ಯೋಗ (ವಿಭೂತಿ–ಯೋಗ)
- ವಿಶ್ವರೂಪವನ್ನು ನೋಡುವ ಯೋಗ (ವಿಶ್ವ-ರೂಪ-ದರ್ಶನ-ಯೋಗ)
- ಭಕ್ತಿಯ ಯೋಗ (ಭಕ್ತಿ–ಯೋಗ)
- ಆತ್ಮದಿಂದ ವಸ್ತುವನ್ನು ಪ್ರತ್ಯೇಕಿಸುವ ಯೋಗ (ಪ್ರಕೃತಿ–ಪುರುಷ–ವಿವೇಕ–ಯೋಗ)
- ತ್ರಿವಿಧ ವಿಧಾನಗಳ ಯೋಗ (ಗುಣತ್ರಯ ವಿಭಾಗ ಯೋಗ)
- ಅಂತಿಮ ವ್ಯಕ್ತಿಯ ಯೋಗ (ಪುರುಷೋತ್ತಮ–ಯೋಗ)
- ದೈವಿಕ ಮತ್ತು ಭಕ್ತಿಹೀನ ಆಸ್ತಿಗಳನ್ನು ಪ್ರತ್ಯೇಕಿಸುವ ಯೋಗ (ದೈವಾಸುರ–ಸಂಪದ್–ವಿಭಾಗ–ಯೋಗ)
- ಮೂರು ಪಟ್ಟು ನಂಬಿಕೆಯನ್ನು ಪ್ರತ್ಯೇಕಿಸುವ ಯೋಗ (ಶ್ರದ್ಧಾ–ತ್ರಯ–ವಿಭಾಗ–ಯೋಗ)
- ವಿಮೋಚನೆಯ ಯೋಗ (ಮೋಕ್ಷ–ಯೋಗ)

ಭಗವದ್ಗೀತೆಯ ಮಹತ್ವ: ಜಗದ್ದೋದ್ಧಾರಕ ಭಗವಾನ್ ಶ್ರೀಕೃಷ್ಣನು ಹೇಳಿದ ಮಾತುಗಳನ್ನು ನೇರವಾಗಿ ಒಳಗೊಂಡಿರುವ ಏಕೈಕ ಗ್ರಂಥ ಶ್ರೀಮದ್ಭಗವದ್ಗೀತೆ. ಗೀತೆಯು ಜಗತ್ತಿನಲ್ಲಿ ಬಹಳ ವಿಶಿಷ್ಟವಾದ ಸ್ಥಾನವನ್ನು ಹೊಂದಿದೆ. ಜಗತ್ತಿನಲ್ಲಿ ನೀವು ಅನೇಕ ಧಾರ್ಮಿಕ ಮತ್ತು ತಾತ್ವಿಕ ಪುಸ್ತಕಗಳನ್ನು ಕಾಣಬಹುದು ಆದರೆ ಭಗವದ್ಗೀತೆಯನ್ನು ಹೊರತುಪಡಿಸಿ ದೇವರು ಹೇಳಿದ ನೇರ, ನಿಜವಾದ ಪದಗಳನ್ನು ಹೊಂದಿದ ಯಾವುದೇ ಪುಸ್ತಕವಿಲ್ಲ. ವೈದಿಕ ಸಾಹಿತ್ಯದಲ್ಲಿ ವೇದಗಳ ಇತರ ವಿಭಾಗಗಳು ದೇವರ ಉಲ್ಲೇಖಗಳನ್ನು ಹೊಂದಿರಬಹುದು, ಅವು ದೇವರೊಂದಿಗೆ ನೇರ ಸಂಭಾಷಣೆಗಿಂತ ಹೆಚ್ಚಾಗಿ ದೇವರನ್ನು ವಿವರಿಸುತ್ತವೆ. ಆದರೆ ಕೃಷ್ಣನು ತನ್ನ ಸ್ನೇಹಿತ ಅರ್ಜುನನೊಂದಿಗೆ ಹಂಚಿಕೊಳ್ಳುವ ಕಾಲಾತೀತ ಜ್ಞಾನದ ಶಾಶ್ವತ ಮೌಲ್ಯವನ್ನು ಭಗವದ್ಗೀತೆ ಸಾಬೀತುಪಡಿಸುತ್ತದೆ.

ಭಗವದ್ಗೀತೆ ಅಧ್ಯಯನ: ಗೀತಾ ಅಧ್ಯಯನವನ್ನು ಗೀತಾಧ್ಯಾನದಿಂದ ಆರಂಭಿಸಿ ಎಲ್ಲಾ ಗೀತಾ ಅಧ್ಯಾಯಗಳ ಆರಂಭದಲ್ಲಿ ಅಥವಾ ಕೊನೆಯಲ್ಲಿ ಗೀತಾ ಆರತಿಯನ್ನು ಮಾಡುವ ಮೂಲಕ ಕೊನೆಗೊಳಿಸಬೇಕು.

ಭಗವದ್ಗೀತೆಯು ಅತ್ಯಂತ ಶ್ರೇಷ್ಠ ಗ್ರಂಥವಾಗಿದ್ದು, ಅದನ್ನು ಇಂದಿಗೂ ಲಕ್ಷಾಂತರ ಜನರು ಅಧ್ಯಯನ ಮಾಡುತ್ತಾರೆ. ಅದೇ ರೀತಿ ಗೀತೆಯನ್ನು ಅರಿತ ಅಧ್ಯಯನ ಧರ್ಮ ಹಾಗೂ ಕೃಷ್ಣನ ನಡೆಯನ್ನು ಆಳವಾಗಿ ತಿಳಿಯಲು ಸಹಕಾರಿಯಾಗುತ್ತದೆ. ಅಂದರೆ ಗೀತೆಯ ಅಧ್ಯಯನವು ಕ್ಲಿಷ್ಟಕರವಾಗಿದ್ದು ಯಾವುದನ್ನೂ ಅರಿಯಬೇಕೆಂಬುದನ್ನು ಮೊದಲು ನಿರ್ಧರಿಸಿ ಅಧ್ಯಯನಕ್ಕಿಳಿದಾಗ ಭಗವದ್ಗೀತೆಯ ಮೂಲಾರ್ಥ ತಿಳಿಯಲು ಸಾಧ್ಯ ಎಂದೂ ಯತಿಗಳು ತಿಳಿಸುತ್ತಾರೆ.

ಗೀತಾ ಜಯಂತಿ ಆಚರಣೆಗಳು: ಈ ಶುಭ ದಿನದಂದು ಭಕ್ತರು ಗೀತೆಯ ಧ್ಯಾನದೊಂದಿಗೆ ಭಗವದ್ಗೀತೆಯನ್ನು ಪಠಿಸಿ ಗೀತೆಯ ಆರಂಭ ಹಾಗೂ ಕೊನೆಯಲ್ಲಿ ಗೀತಾ ಆರತಿಯನ್ನು ನೆರವೇರಿಸುತ್ತಾರೆ. ಆಧ್ಯಾತ್ಮಿಕವಾಗಿ ಪ್ರಗತಿ ಹೊಂದಲು ಬಯಸುವವರು ಗೀತೆಯನ್ನು ಅಧ್ಯಯನ ಮಾಡುತ್ತಾರೆ. ಭಜನೆ, ಪೂಜೆಗಳನ್ನು ಏರ್ಪಡಿಸಿ ಸಿಹಿ ಹಂಚಲಾಗುತ್ತದೆ. ಗೀತೆ ಓದುವ ಆಸಕ್ತಿಯನ್ನು ಉತ್ತೇಜಿಸುವ ಮಾರ್ಗವಾಗಿ ಮಕ್ಕಳಿಗೆ ಗೀತಾ ಪಠಣ ಸ್ಪರ್ಧೆಗಳನ್ನು ಆಯೋಜಿಸುತ್ತಾರೆ. ಯೋಗಿಗಳು ಗೀತೆಯ ಮಹತ್ವವನ್ನು ಅದರ ಆಳವಾದ ಅರ್ಥವನ್ನು ಜನ ಸಮೂಹಕ್ಕೆ ವಿವರಿಸುತ್ತಾರೆ. ಗೀತಾ ಸಾರದ ಪುಸ್ತಕಗಳನ್ನು ಸಾರ್ವಜನಿಕರಿಗೆ ವಿತರಿಸುವ ಮೂಲಕ ಗೀತಾ ಸಮರ್ಪಣೆ ಮಾಡಿ ಭಗವಂತನ ಕೃಪೆಗೆ ಪಾತ್ರರಾಗಿ ಧರ್ಮದ ಮಹತ್ವವನ್ನು ತಿಳಿಸಲಾಗುತ್ತದೆ.

ಗೀತಾ ಮಂದಿರ ಕುರುಕ್ಷೇತ್ರ: ಬಿರ್ಲಾ ಗೀತಾ ಮಂದಿರವು ಹಿಂದೂ ದೇವಾಲಯವಾಗಿದೆ. ದಿವಂಗತ ಶ್ರೀ ಜುಗಲ್ ಕಿಶೋರ್ ಬಿರ್ಲಾ ಅವರು 1952ರಲ್ಲಿ ನಿರ್ಮಿಸಿದ ಈ ದೇವಾಲಯವನ್ನು ಭಗವದ್ಗೀತಾ ಮಂದಿರ ಎಂದೇ ಕರೆಯಲಾಗುತ್ತಿದೆ. ಈ ದೇವಾಲಯವು ಭಾರತದ ಹರಿಯಾಣ ರಾಜ್ಯದ ದೇವ ಭೂಮಿ ಕುರುಕ್ಷೇತ್ರದ ಬ್ರಹ್ಮ ಸರೋವರದ ಸಮೀಪದಲ್ಲಿದೆ. ಬಿರ್ಲಾ ಗೀತಾ ಮಂದಿರವು, ಅಮೃತಶಿಲೆಯಿಂದ ನಿರ್ಮಿತವಾಗಿದ್ದು, ದೇವಾಲಯದ ಗೋಡೆಗಳ ಮೇಲೆ ಭಗವದ್ಗೀತೆಯನ್ನು ಕೆತ್ತನೆ ಮಾಡಿ ಆ ಮೂಲಕ ಭಗವದ್ಗೀತೆಯ ಬೋಧನೆಗಳು ಮತ್ತು ಮೌಲ್ಯಗಳನ್ನು ರಕ್ಷಿಸಲಾಗುತ್ತಿದೆ. ದೇವಾಲಯದಲ್ಲಿ ಗಾಂಡೀವ ಧಾರಿ ಅರ್ಜುನನು ಕುಳಿತ ಭಂಗಿಯಲ್ಲಿ ಹಾಗೂ ಭಗವಾನ್ ಕೃಷ್ಣ ಗೀತೆಯ ಭಗವತ್ ಉಲ್ಲೇಖಗಳನ್ನು ಬೋಧಿಸುತ್ತಿರುವ ರೀತಿಯಲ್ಲಿ ಮುಖ್ಯ ಮೂರ್ತಿ ಕೆತ್ತನೆಯಾಗಿದೆ.

ಗೀತಾ ಮಂದಿರ ಉಡುಪಿ: ಉಡುಪಿಯ ಪೊಡವಿಗೊಡೆಯ ಶ್ರೀಕೃಷ್ಣಮಠದ ಆವರಣದಲ್ಲಿ ಭಕ್ತಿಯ ಸಮರ್ಪಣೆಯೊಂದಿಗೆ ಜ್ಞಾನದ ಸಮರ್ಪಣೆ ಮಾಡುವ ಉದ್ದೇಶದಿಂದ ಮಠದ ಯತಿಗಳಾದ ಪುತ್ತಿಗೆ ಶ್ರೀಪಾದರ 2ನೇ ಪರ್ಯಾಯದ ಸಮಯದಲ್ಲಿ ಯತಿಗಳ ಆಣತಿಯಂತೆ ಗೀತಾ ಮಂದಿರ ನಿರ್ಮಾಣವಾಯಿತು. ಅಮೃತ ಶಿಲೆಯಿಂದ ನಿರ್ಮಿತವಾದ ಮಂದಿರದ ಒಳಾಂಗಣದಲ್ಲಿ ಭಗವದ್ಗೀತೆಯನ್ನು ಪೂರ್ಣವಾಗಿ ಶಿಲಾಲಿಖಿತ ಮಾಡಲಾಗಿದೆ. ಜ್ಞಾನ ಸಂಪಾದನೆಯ ಸುಂದರ ಕಲ್ಪನೆಯಾದ ಗೀತಾ ಮಂದಿರದಲ್ಲಿ ಪ್ರತೀ ನಿತ್ಯವು ಗೀತೆಯ ಒಂದು ಅಧ್ಯಾಯವನ್ನು ಭಕ್ತಿಯಿಂದ ಪಾರಾಯಣ ಮಾಡಲಾಗುತ್ತದೆ. ಶಾಲಾ ಮಕ್ಕಳಿಗಾಗಿ ಗೀತಾ ಪಠಣ ಸ್ಪರ್ಧೆಯನ್ನು ನಿರಂತರವಾಗಿ ಏರ್ಪಡಿಸಿ ಮಕ್ಕಳಿಗೂ ಗೀತಾ ಜ್ಞಾನವನ್ನು ನೀಡಲಾಗುತ್ತದೆ.

ಇಸ್ಕಾನ್ ಕ್ಷೇತ್ರದ ಆಚರಣೆ: ಪ್ರಪಂಚದಾದ್ಯಂತದ ಇಸ್ಕಾನ್ (ಇಂಟರ್ನ್ಯಾಷನಲ್ ಸೊಸೈಟಿ ಫಾರ್ ಕೃಷ್ಣ ಕಾನ್ಷಿಯಸ್‌ನೆಸ್) ದೇವಾಲಯಗಳಲ್ಲಿ, ಗೀತಾ ಜಯಂತಿಯನ್ನು ಶ್ರೀಕೃಷ್ಣನಿಗೆ ವಿಶೇಷ ಕೊಡುಗೆಗಳನ್ನು ಅರ್ಪಿಸುವ ಮೂಲಕ ಭಗವದ್ಗೀತೆಯ ಸಾಮೂಹಿಕ ಪಠಣವನ್ನು ನಡೆಸಲಾಗುತ್ತದೆ. ಗೀತಾ ಜಯಂತಿಯನ್ನು ಮೋಕ್ಷದ ಏಕಾದಶಿ ಎಂದೂ ಆಚರಿಸಲಾಗುತ್ತದೆ. ಈ ದಿನ, ಭಕ್ತರು ಉಪವಾಸವನ್ನು ಆಚರಿಸುತ್ತಾರೆ ಮತ್ತು ದ್ವಾದಶಿಯಂದು (12ನೇ ದಿನ) ಧಾರ್ಮಿಕ ಸ್ನಾನ ಹಾಗೂ ಕೃಷ್ಣನ ಪೂಜೆಯನ್ನು ಮಾಡುವ ಮೂಲಕ ಉಪವಾಸವನ್ನು ಕೊನೆಗೊಳಿಸುತ್ತಾರೆ.

ಕುರುಕ್ಷೇತ್ರದಲ್ಲಿ ಗೀತಾ ಜಯಂತಿ ಉತ್ಸವ: ಕುರುಕ್ಷೇತ್ರದಲ್ಲಿ ಗೀತಾ ಜಯಂತಿಯು ವಿಶೇಷವಾಗಿ ಆಚರಣೆಗೊಳ್ಳುತ್ತದೆ. ಇಲ್ಲಿಯ ಬ್ರಹ್ಮ ಸರೋವರ ಮತ್ತು ಸನ್ನಿಹಿತ್ ಸರೋವರ ಹೆಸರಿನ ಕೊಳಗಳಲ್ಲಿ ಪವಿತ್ರ ಸ್ನಾನ ಮಾಡಿ, ಆಚರಣೆಯಲ್ಲಿ ಭಾಗವಹಿಸಲು ಭಾರತದಾದ್ಯಂತ ಭಕ್ತರು ಇಲ್ಲಿ ಸೇರುತ್ತಾರೆ. ಈ ದಿನವನ್ನು ಆಚರಿಸಲು, ಪ್ರತಿ ವರ್ಷವೂ ಒಂದು ಮೇಳವನ್ನು ಆಯೋಜಿಸಲಾಗುತ್ತದೆ, ಇದು ಸುಮಾರು ಏಳು ದಿನಗಳವರೆಗೆ ಗೀತಾ ಜಯಂತಿ ಸಮಾರೋಹ್ ಹೆಸರಿನಲ್ಲಿ ವೈಭವಪೂರ್ಣವಾಗಿ ನೆರವೇರುತ್ತದೆ.

ಹೀಗೆ ಪವಿತ್ರ ಭಗವದ್ಗೀತೆ ಗ್ರಂಥ ಉಗಮವಾದ ದಿನದಂದು ಗೀತೆಯ ಮಹತ್ವವನ್ನು ಜಗತ್ತಿಗೆ ತಿಳಿಸುವ ಮೂಲಕ ಗೀತೆಯಲ್ಲಿ ಸ್ವತಃ ಭಗವಂತನೇ ತಿಳಿಸಿದಂತೆ ಅವನಿಗೆ ಪ್ರಿಯವಾದ ಗೀತಾ ಸಮರ್ಪಣೆ ಕಾರ್ಯವನ್ನು ಮಾಡಲಾಗುತ್ತದೆ. ಈ ದಿನದಂದು ಪ್ರತಿಯೊಂದು ಧಾರ್ಮಿಕ ಸ್ಥಳವೂ ಗೀತಾ ವಾಚನ ಹಾಗೂ ಪಠಣಗಳು, ಸ್ತೋತ್ರಗಳು ಮತ್ತು ಧಾರ್ಮಿಕ ಪ್ರವಚನಗಳೊಂದಿಗೆ ಪ್ರತಿಧ್ವನಿಸುತ್ತದೆ, ಆಧ್ಯಾತ್ಮಿಕ ಪ್ರತಿಬಿಂಬ ಮತ್ತು ಭಕ್ತಿಗಾಗಿ ವಾತಾವರಣವನ್ನು ಉತ್ತೇಜಿಸುತ್ತದೆ.

ಭಗವದ್ಗೀತೆಯ ಶ್ರೇಷ್ಠ ಗುಣವೆಂದರೆ, ಮನುಷ್ಯನು ಯೋಚಿಸಲು, ನ್ಯಾಯಯುತ ಮತ್ತು ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳಲು ಪ್ರೇರೇಪಿಸುತ್ತದೆ. ಸಹಸ್ರಾರು ವರ್ಷಗಳಿಂದ ದೈನಂದಿನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ತನ್ನ ಶಾಶ್ವತ ಪ್ರಭಾವವನ್ನು ಬೀರುತ್ತಿದೆ. ಅದಾಗಿಯೂ ಭಗವದ್ಗೀತೆ ಗ್ರಂಥ ಮಾತ್ರವಲ್ಲ, ಅದು ಒಂದು ಉನ್ನತವಾದ ಶಾಸ್ತ್ರವೂ, ಸ್ತೋತ್ರವೂ ಹಾಗೂ ಮಂತ್ರವೂ ಆಗಿದೆ.

-ಪೂಜಾಮಠದ್, ಮೈಸೂರು

ವಾರಣಾಸಿಯ ನಮೋ ಘಾಟ್‌ನಲ್ಲಿ ಮಹರ್ಷಿ ಅಗಸ್ತ್ಯ ಜಯಂತ್ಯೋತ್ಸವ

ಅಗಸ್ತ್ಯರ ತಪೋಬಲ ವಿವರಿಸಿದ ಮೈಸೂರಿನ ಖ್ಯಾತ ವಕೀಲ ಶ್ಯಾಮ್ ಭಟ್

ಮೈಸೂರು, ಡಿ.29– ವಾರಣಾಸಿಯ ನಮೋ ಘಾಟ್‌ನಲ್ಲಿ ನಡೆದ ಮಹರ್ಷಿ ಅಗಸ್ತ್ಯ ಜಯಂತ್ಯೋತ್ಸವದಲ್ಲಿ ಮೈಸೂರಿನ ಖ್ಯಾತ ವಕೀಲ ಓ.ಶ್ಯಾಮ್ ಭಟ್ ಭಾಗವಹಿಸಿ, ಮಹತ್ವದ ವಿಚಾರಗಳನ್ನು ಹಂಚಿಕೊಂಡಿದ್ದಾರೆ.



ಋಷಿ ಅಗಸ್ತ್ಯರ ಬಗ್ಗೆ ಸಂಶೋಧನೆಯಲ್ಲಿ ತೊಡಗಿರುವ ಶ್ಯಾಮ್ ಭಟ್ ಮಾತನಾಡಿ, ಮಹರ್ಷಿ ಅಗಸ್ತ್ಯರು ಈ ಪ್ರಪಂಚದ ಮೊದಲ ಋಷಿ ಸಂಗಮವನ್ನು ಆಯೋಜಿಸಿ, ಮುನ್ನಡೆಸಿದ್ದರು. ತಮ್ಮ ತಪೋಬಲದ ಮೂಲಕ ಭಾರತದ ದಕ್ಷಿಣ ಭಾಗದಲ್ಲಿ ಬೌದ್ಧಿಕ ಪರಾಕ್ರಮ ಬತ್ತಿ ಹೋಗುವುದನ್ನು ಮನಗಂಡ ಭಗವಾನ್ ಮಹಾದೇವ, ಬೌದ್ಧಿಕ ಸಮತೋಲನವನ್ನು ಕಾಪಾಡಿಕೊಳ್ಳಲು ಮಹರ್ಷಿ ಅಗಸ್ತ್ಯರನ್ನು ಕಳುಹಿಸಿದ್ದರು. ಪರ್ಯಟನೆ ಮಾಡಿದ ಮಹರ್ಷಿ ಅಗಸ್ತ್ಯರು ಅಂತಿಮವಾಗಿ ತಮಿಳುನಾಡಿನಲ್ಲಿ ನೆಲೆಸಿದರು. ಅವರು ಪಾಂಡ್ಯರು, ಚೇರರು, ಚೋಳರು ಮುಂತಾದವರಿಗೆ ರಾಜಗುರುಗಳಾಗಿ ಕಾರ್ಯನಿರ್ವಹಿಸಿದರು ಎಂದು ತಿಳಿಸಿದ್ದಾರೆ.

ಋಷಿ ಅಗಸ್ತ್ಯರು ಸಾಗರೋತ್ತರ ವ್ಯಾಪಾರವನ್ನು ಹೊಂದುವ ಅಗತ್ಯತೆಯ ಬಗ್ಗೆ ರಾಜನಿಗೆ ತಿಳಿಸಿ, ಹಡಗುಗಳನ್ನು ನಿರ್ಮಿಸಲು ಸಲಹೆ ನೀಡಿದರು. ಅಗಸ್ತ್ಯರು ಋಷಿಗಳಲ್ಲಿ ರಾಜನಂತೆಯೇ ಇದ್ದರು ಎಂದು ಶ್ರೀ ನಾರಾಯಣ ಗುರುಗಳು ಬರೆದಿದ್ದಾರೆ. ಜಗತ್ತಿನಲ್ಲಿ ಶಕ್ತಿಯಿಲ್ಲದ ಜಾಗವಿಲ್ಲ. ಶಕ್ತಿಯೇ ಬ್ರಹ್ಮ, ಇದರಿಂದ ಎಲ್ಲವೂ ಹೊರಹೊಮ್ಮುತ್ತದೆ ಎಂದು ಋಷಿ ಅಗಸ್ತ್ಯರು ಹೇಳಿದರು.

ನಮ್ಮ ಋಷಿಗಳು ಖಗೋಳ ವಿಜ್ಞಾನದಲ್ಲಿಯೂ ಪಾರಂಗತರಾಗಿದ್ದರು. ಉಳಿದೆಲ್ಲ ಭಾರತೀಯ ಭಾಷೆಗಳಿಗೆ ಅನುವಾದವಾಗಬೇಕಿದ್ದ ಅಗಸ್ತ್ಯರ ಬಹುತೇಕ ತಮಿಳು ಸಾಹಿತ್ಯಗಳು ನಮ್ಮ ಜನರ ನೆನಪಿನಿಂದ ಕಳೆದು ಹೋಗಿವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ರಾಮನ ತಂದೆಯ ಅಜ್ಜನ ಹೆಸರು ಅಜ ಎಂದು ಋಷಿ ಅಗಸ್ತ್ಯರು ಬರೆದಿದ್ದಾರೆ. ಅವರನ್ನು ಅಜರಥ ಎಂದೂ ಹೆಸರಿಸಲಾಗಿದೆ. ಅವರ ಪತ್ನಿ ಮಧುರೈ ಮೂಲದವರು. ಮಹಾರಾಜ ಅಜ ಅವರಿಗೆ ಅವರ ಮಾವ ನೀಡಿದ ಸಂಪತ್ತನ್ನು ದಕ್ಷಿಣ ಭಾಗದಲ್ಲಿ ಧರ್ಮ ಸ್ಥಾಪನೆಗಾಗಿ ಉಳಿಸಿ, ನಂತರ ಅದನ್ನು ಶ್ರೀರಾಮನಿಗೆ ನೀಡಲಾಯಿತು. ಇದರಿಂದ ಉತ್ತರ ಮತ್ತು ದಕ್ಷಿಣ ಭಾಗಗಳ ನಡುವಿನ ಸಂಪರ್ಕ, ಧರ್ಮ ಮತ್ತು ಧಾರ್ಮಿಕ ಜೀವನದ ಪರಸ್ಪರ ಅನ್ವೇಷಣೆಯನ್ನು ತಿಳಿಯಬಹುದು. ಋಷಿ ಅಗಸ್ತ್ಯರು ತಮಿಳುನಾಡು ಮತ್ತು ಕರ್ನಾಟಕದಲ್ಲಿ ಅನೇಕ ದೇವಾಲಯಗಳನ್ನು ಸ್ಥಾಪಿಸಿದರು. ತಮಿಳುನಾಡಿನಲ್ಲಿ ಕಲ್ಲು ಕೆಲಸ ಮಾಡುವವರ ಮನೆಗಳಲ್ಲಿ ಋಷಿ ಅಗಸ್ತ್ಯರ ಫೋಟೋ ಇದೆ ಅನೇಕ ಬುಡಕಟ್ಟು ಕುಗ್ರಾಮಗಳಲ್ಲಿ ಗಿಡಮೂಲಿಕೆ ಔಷಧಿಗಳ ಜ್ಞಾನವನ್ನು ನೀಡಿದ ವ್ಯಕ್ತಿ ಋಷಿ ಅಗಸ್ತ್ಯರು ಎಂದು ಗೌರವಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಶಿಕ್ಷಣ ಸಚಿವಾಲಯದ ಡಿಡಿಜಿ ಆರ್.ರಾಜೇಶ್ ಮಾತನಾಡಿ, ಮಹರ್ಷಿ ಅಗಸ್ತ್ಯರು ಬಹು ಆಯಾಮದ ವ್ಯಕ್ತಿತ್ವ ಹೊಂದಿದ್ದರು. ತಮಿಳು ಭಾಷೆಗೂ ವ್ಯಾಕರಣ ವ್ಯವಸ್ಥೆಯನ್ನು ಸಿದ್ಧಪಡಿಸಿದ್ದು ಅವರ ದೊಡ್ಡ ಕೊಡುಗೆಯಾಗಿದೆ. ಅವರು ಬರೆದ ಅನೇಕ ಶ್ಲೋಕಗಳು ಈಗ ಕಳೆದುಹೋಗಿವೆ. ಅವರು ಆಯುರ್ವೇದ ಮತ್ತು ಸಿದ್ಧ ವೈದ್ಯಕೀಯ ಪದ್ಧತಿಯ ಪ್ರಗತಿಗೆ ಅಪಾರ ಕೊಡುಗೆ ನೀಡಿದರು. ಮಹರ್ಷಿ ಅಗಸ್ತ್ಯರು ನಮ್ಮ ಪ್ರೀತಿಯ ಭಾರತದ ಈ ಬೃಹತ್ ಭೂಪ್ರದೇಶವನ್ನು ಒಂದುಗೂಡಿಸುವಲ್ಲಿ ಬಹುದೊಡ್ಡ ಪಾತ್ರವನ್ನು ಹೊಂದಿದ್ದಾರೆ, ಆ ಅರ್ಥದಲ್ಲಿ ಅವರು 'ಏಕ ಭಾರತ, ಶ್ರೇಷ್ಠ ಭಾರತ'ದ ಕನಸನ್ನು ನನಸಾಗಿಸಿದ ಮೊದಲಿಗರು ಎಂದು ಪರಿಗಣಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗದ ವೈದ್ಯಕೀಯ ಮೌಲ್ಯಮಾಪನ ಮತ್ತು ರೇಟಿಂಗ್ ಬೋರ್ಡ್ ಅಧ್ಯಕ್ಷ ರಘುರಾಮ್ ಭಟ್, ರಾಷ್ಟ್ರೀಯ ಆಯುರ್ವೇದ ಪರಿಷತ್‌ನ ರಾಷ್ಟ್ರೀಯ ಜಂಟಿ ಸಂಘಟನಾ ಕಾರ್ಯದರ್ಶಿ, ಕುಲೇಶ್ ಕುಮಾರ್ ದ್ವಿವೇದಿ, ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಕ್ಲಾಸಿಕಲ್ ತಮಿಳು(ಸಿಐಸಿಟಿ) ನಿರ್ದೇಶಕ ಡಾ.ಆರ್. ಚಂದ್ರಶೇಖರನ್, ವಾರಣಾಸಿಯ ಸರ್ಕಾರಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಂಶುಪಾಲರು ಸೇರಿದಂತೆ ವಿವಿಧ ಆಯುರ್ವೇದ ಕಾಲೇಜುಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಕಲ್ಲಡ್ಕ ಪ್ರಭಾಕರ ಭಟ್, ಆರ್.ಅಶೋಕ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ಡಿ.29(ಎಸ್‌ಪಿಎನ್)– ಮುಸ್ಲಿಂ ಮಹಿಳೆಯರ ವಿರುದ್ಧ ಅವಹೇಳನಕಾರಿಯಾಗಿ ಹೇಳಿಕೆ ನೀಡಿರುವ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ನಗರ ವಕ್ತಾರ ಎಸ್.ರಾಜೇಶ್ ಒತ್ತಾಯಿಸಿದ್ದಾರೆ.

ಈ ಹೇಳಿಕೆ ಮುಸ್ಲಿಂ ಮಹಿಳೆಯರ ಕುರಿತು ಲವ್ ಜಿಹಾದ್ ಹೇಳಿಕೆ ಸಂದರ್ಭದಲ್ಲಿ ಹಾಗೂ ತ್ರಿವಳಿ ತಲಾಕ್ ರದ್ದುಪಡಿಸಿದ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಸಾಂವಿಧಾನಿಕ ಹಕ್ಕು ಮತ್ತು ಘನತೆಗೆ ಧಕ್ಕೆ ತರುವಂತಹ ಹೇಳಿಕೆ ನೀಡಿದ್ದು, ಇವರ ವಿರುದ್ಧ ಸೆಕ್ಷನ್ 293, 294, 298, 354 ಹಾಗೂ 506ರಡಿ ಕ್ರಮ ಜರುಗಿಸುವಂತೆ ಒತ್ತಾಯಿಸಿ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿ, ಒತ್ತಾಯಿಸಿದ್ದಾರೆ.

ಅಶೋಕ ವಿರುದ್ಧವೂ ದೂರು: ಟಿಪ್ಪು ಸುಲ್ತಾನ್ ವಿರುದ್ಧ ವಿಪಕ್ಷ ನಾಯಕ ಆರ್. ಅಶೋಕ್ ಅವರು, ಅವಹೇಳನಾಕಾರಿ ಹೇಳಿಕೆ ನೀಡಿದ್ದು, ಇವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ನಗರ ವಕ್ತಾರ ಎಸ್.ರಾಜೇಶ್ ಒತ್ತಾಯಿಸಿದ್ದಾರೆ.

ಟಿಪ್ಪು ಓರ್ವ ಸ್ವಾತಂತ್ರ್ಯ ಹೋರಾಟಗಾರ, ಇವರ ವ್ಯಕ್ತಿತ್ವಕ್ಕೆ ಕಳಂಕ ತರುವ ರೀತಿಯಲ್ಲಿ ಅಶೋಕ್ ಸಾರ್ವಜನಿಕ ಹೇಳಿಕೆ ನೀಡಿದ್ದು, ಇವರ ವಿರುದ್ಧ ಕಾನೂನು ಕ್ರಮ ಜರುಗಿಸುವಂ ತೆಯೂ ಒತ್ತಾಯಿಸಿ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿ, ಒತ್ತಾಯಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 - 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕುವೆಂಪು ವಿಶ್ವ ಮಾನವ ಸಂದೇಶ ಎಲ್ಲರಿಗೂ ತಲುಪುವಂತಾಗಬೇಕು

ಮಾಜಿ ಶಾಸಕ ಸೋಮಶೇಖರ್ ಆಶಯ




ಮೈಸೂರು, ಡಿ.29(ಎಸ್‌ಬಿಡಿ)– ಮೈಸೂರು ನಾಗರಿಕ ಸಾಂಸ್ಕೃತಿಕ ವೇದಿಕೆ ಹಾಗೂ ಕುವೆಂಪುನಗರ ನಾಗರಿಕರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಕುವೆಂಪುನಗರದ ರಾಷ್ಟ್ರಕವಿ ಕುವೆಂಪುರವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಜನ್ಮ ದಿನಾಚರಣೆ ಆಚರಿಸಲಾಯಿತು.

ಈ ವೇಳೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ಕುವೆಂಪುರವರು ವಿಶ್ವ ಕಂಡ ಶ್ರೇಷ್ಠ ಸಾಹಿತಿ. ಅವರು ರಾಷ್ಟ್ರ ಕವಿ ಮಾತ್ರವಲ್ಲ ಇಡೀ ವಿಶ್ವವೇ ಒಪ್ಪಿದ ಜಗದ ಕವಿ, ಯುಗದ ಕವಿಯಾಗಿದ್ದವರು. ಸಮಸಮಾಜದಲ್ಲಿ ವಿಶ್ವ ಮಾನವತೆಯನ್ನು ಬೋಧಿಸುವ ಅವರ ವಿಚಾರಧಾರೆಗಳು ಪ್ರತಿಯೊಬ್ಬ ವ್ಯಕ್ತಿಗೂ ತಲುಪಬೇಕು. ಆಗ ಮಾತ್ರ ಇಂತಹ ಮಹನೀಯರ ಜಯಂತಿಗೆ ನಿಜವಾದ ಅರ್ಥ ಸಿಗುತ್ತದೆ ಎಂದು ಅಭಿಪ್ರಾಯಿಸಿದರು.

ಜಾತಿ ಧರ್ಮಗಳ ಬಂಧನಗಳಿಂದ ಮುಕ್ತರಾಗಬೇಕು ಆ ಮೂಲಕ ಸರ್ವಜನಾಂಗದ ಶಾಂತಿಯ ತೋಟ ನಿರ್ಮಾಣ ಮಾಡಲು ಸಾಧ್ಯ. ಯಾವುದೇ ಒಬ್ಬ ವ್ಯಕ್ತಿ ಜಾತಿಯಿಂದಲ್ಲ ನೈತಿಕ ವ್ಯಕ್ತಿತ್ವದಿಂದ ಮುಖ್ಯನಾಗಬೇಕು ಎಂಬ ಮಹಾನ್ ಸಂದೇಶವನ್ನು ನಾಡಿಗೆ ನೀಡಿದ ಕೀರ್ತಿ ಕುವೆಂಪು ಅವರಿಗೆ ಸಲ್ಲಬೇಕು. ಅವರು ಮೌಢ್ಯ, ಕಂದಾಚಾರಗಳನ್ನು ತೊಡೆದು ಜಿಡ್ಡುಗಟ್ಟಿದ ಸಮಾಜಕ್ಕೆ ಸಾಮರಸ್ಯ ಸಹಬಾಳ್ವೆಯ ಔಷಧಿ ನೀಡಿದ್ದರು. ಮಂತ್ರ ಮಾಂಗಲ್ಯದಂತಹ ವೈಚಾರಿಕತೆ ನೆಲೆಗಟ್ಟಿನ ಚಿಂತನೆಯ ಮೂಲಕ ಯುವಕರಲ್ಲಿದ್ದ ಮೌಢ್ಯತೆಗಳಿಗೆ ಕಡಿವಾಣ ಹಾಕುವ ದಾರಿ ತೋರಿದ್ದರು. ಲಿಂಗ ತಾರತಮ್ಯ ವಿರೋಧಿಸಿ ಎಲ್ಲರೂ ಸಮಾನರು ಎಂದು ತಿಳಿಸಿದ್ದರು. ನಿರಂತರವಾಗಿ ಚಿಂತಿಸಿ, ಯಶಸ್ಸಿನ ಬದುಕು ನಡೆಸಿ ಎಂಬುದನ್ನು ಕಾವ್ಯಗಳ ಮೂಲಕ ಪ್ರೇರೇಪಿಸಿದ್ದರು. ಮುಳುಗದ ಸಾಹಿತ್ಯ ಸೂರ್ಯನಾಗಿ ನಮ್ಮ ನಡುವೆ ಇಂದಿಗೂ ಉಳಿದಿರುವ ಕುವೆಂಪು ಅವರ ಸಂದೇಶಗಳನ್ನು ಮನೆ ಮನೆಗೂ ಸಾರುವ ಮೂಲಕ ಅವರನ್ನು ಗೌರವಿಸೋಣ ಎಂದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ವೈದ್ಯ ಸಾಹಿತಿ ಡಾ.ಎಸ್.ಪಿ.ಯೋಗಣ್ಣ, ಮಾಜಿ ಮೇಯರ್ ಶಿವಕುಮಾರ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಡಾ.ಎಲ್.ದೇವೇಗೌಡ, ಪ್ರೊ.ನೀ.ಗಿರಿಗೌಡ, ಕೆ.ಎಸ್.ನಾಗರಾಜ್, ಕೃಷ್ಣಕುಮಾರ್, ಕೆ.ಟಿ.ವೆಂಕಟೇಶ್, ಚರಣ್ ಶಿವರಾಜ್, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ವಿದ್ವಾಂಸ ಡಾ.ಪ್ರಧಾನ ಗುರುದತ್ತ, ರಮೇಶ್ ರಾಮಪ್ಪ, ರೂಪೇಶ್, ವಿನಯ್, ಗುಣಶೇಖರ್ ಮತ್ತಿತರು ಉಪಸ್ಥಿತರಿದ್ದರು.



ಮೈಸೂರಿನ ಗನ್‌ಹೌಸ್ ಬಳಿಯ ಕುವೆಂಪು ಉದ್ಯಾನವನದಲ್ಲಿರುವ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ನೇತೃತ್ವದಲ್ಲಿ ಕುವೆಂಪು ಜನ್ಮದಿನ ಆಚರಿಸಲಾಯಿತು. ಈ ವೇಳೆ ಮುಖಂಡರಾದ ಲೋಕೇಶ್, ವರುಣ ಮಹದೇವ್, ಶಿವಲಿಂಗ, ಮಹದೇವ್ ಪಾಂಡೆ, ನಾಗರಾಜು, ಶಿವಕುಮಾರ್, ಬಿಎಸ್‌ಎನ್‌ಎಲ್ ಮಹದೇವ್, ಕೇಶವಯ್ಯ ಉಪಸ್ಥಿತರಿದ್ದರು.



ಕುವೆಂಪುನಗರ ನಾಗರಿಕ ಸೇವಾ ಸಮಿತಿಯಿಂದ ಕುವೆಂಪುನಗರದಲ್ಲಿರುವ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಅವರ ಜನ್ಮದಿನ ಆಚರಿಸಲಾಯಿತು. ವೈದ್ಯರಾದ ಡಾ. ವಿ. ಲಕ್ಷ್ಮೀನಾರಾಯಣ್, ಮಾಜಿ ಮೇಯರ್‌ಗಳಾದ ಬಿ.ಕೆ. ಪ್ರಕಾಶ್, ಮೋದಾಮಣಿ, ಪುಷ್ಪಲತಾ ಜಗನ್ನಾಥ್, ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಅರುಣ್, ಸಮಿತಿ ಅಧ್ಯಕ್ಷ ವಿಕ್ರಾಂತ್ ಪಿ. ದೇವೇಗೌಡ, ಪೈಲ್ವಾನ್ ಕೊಪ್ಪಲ್ ಮಂಜು, ವಕೀಲ ನಾಗರಾಜು ಇನ್ನಿತರರಿದ್ದರು.



ಮೈಸೂರು ವಿವಿ ಮುಂಭಾಗದಲ್ಲಿರುವ ಕುವೆಂಪು ಪ್ರತಿಮೆಗೆ ಮೈಸೂರು ತಾಲೂಕು ಕಸಾಪ ಮತ್ತು ವಕೀಲರ ಬಳಗದಿಂದ ಪುಷ್ಪಾರ್ಚನೆ ಮಾಡಲಾಯಿತು. ತಾಲೂಕು ಕಸಾಪ ಅಧ್ಯಕ್ಷ ಎ.ಸಿ. ಮಂಜುನಾಥ್, ಕೋಶಾಧ್ಯಕ್ಷ ಕಾಮನಕೆರೆಹುಂಡಿ ಹೆಚ್. ಗಿರೀಶ್‌ಗೌಡ, ವಕೀಲರಾದ ಎ.ಜಿ. ಸುಧೀರ್, ಹರದೂರು ಜವರೇಗೌಡ, ಗುಂಗ್ರಾಲ್ ಛತ್ರ ರಘು, ಚಿಟ್ಟೇನಹಳ್ಳಿ ಲೋಕೇಶ್, ಗೋಪಾಲಪುರ ಅನಿಲ್‌ಗೌಡ, ರಾಜಣ್ಣ, ಪ್ರವೀಣ್‌ಕುಮಾರ್, ಅಮುಲ್ ದೇವರಾಜು ಇನ್ನಿತರರಿದ್ದರು.



ಮೈಸೂರಿನ ಆದಿಚುಂಚನಗಿರಿ ಶಾಖಾ ಮಠದಲ್ಲಿ ಕುವೆಂಪು ಜನ್ಮದಿನ ಆಚರಿಸಲಾಯಿತು. ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮಾಜಿ ಉಪಮೇಯರ್ ಮಹದೇವಪ್ಪ ಉಪಸ್ಥಿತರಿದ್ದರು.

ಕುವೆಂಪು ಅವರ ಸಾಮಾಜಿಕ ಸುಧಾರಣೆ, ಪ್ರಗತಿ ಕುರಿತ ಆಲೋಚನೆ ಸ್ಫೂರ್ತಿದಾಯಕ: ಶಾಸಕ ಜಿ.ಟಿ.ದೇವೇಗೌಡ ಅಭಿಮತ

ಮೈಸೂರು, ಡಿ. 29(ಆರ್‌ಕೆ)– ಸಾಮಾಜಿಕ ಸುಧಾರಣೆ ಮತ್ತು ಪ್ರಗತಿ ಕುರಿತಾದ ಕುವೆಂಪು ಅವರ ಆಲೋಚನಾ ಕೃತಿಗಳು ಮುಂದಿನ ಯುವ ಪೀಳಿಗೆಗೆ ಸ್ಫೂರ್ತಿ ನೀಡಲಿವೆ ಎಂದು ಶಾಸಕ ಜಿ.ಟಿ. ದೇವೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲಾಡಳಿತದಿಂದ ಮೈಸೂರಿನ ಕಲಾಮಂದಿರದಲ್ಲಿ ಇಂದು ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಸಾಹಿತ್ಯಕ್ಕೆ ಕಾವ್ಯದ ಹೊಸ ರೂಪ ಪರಿಚಯಿಸಿದ ಅವರ ಕೃತಿಗಳು ಕನ್ನಡದ ಅಸಂಖ್ಯಾತ ಬರಹಗಾರರಿಗೆ ಸ್ಫೂರ್ತಿಯಾಗಿವೆ ಎಂದರು.

ದೇಶದ ಬೆನ್ನೆಲುಬಾಗಿರುವ ಅನ್ನದಾತರ ಬೆವರಿನ ಪ್ರತೀ ಹನಿಯಲ್ಲೂ ಶ್ರಮ, ನಿಷ್ಠೆ ಇದೆ ಎಂದು ಹೇಳಿ ರೈತ ಗೀತೆ ರಚಿಸಿದ ಕುವೆಂಪು, ಅನ್ನಬ್ರಹ್ಮನಿಗೆ ಗೌರವ ಸಲ್ಲಿಸಿದ್ದಾರೆ. ಸರ್ವಧರ್ಮ ಸಮನ್ವಯ, ಪೂರ್ಣ ದೃಷ್ಟಿ ಸೌಂದರ್ಯೋಪಾಸನೆ, ಅನಿಕೇತನ ಪ್ರಜ್ಞೆಯ ಆದರ್ಶದ ಸೂತ್ರಗಳಾಗಿವೆ ಎಂದ ಶಾಸಕರು, ಪ್ರತಿಯೊಬ್ಬ ಕನ್ನಡಿಗರಿಗೂ ಭಾಷಾಭಿಮಾನ ಮೂಡಿಸುತ್ತದೆ ಎಂದರು. ಸಾಹಿತ್ಯ ಸಾಧನೆಯ ಶಿಖರವಾಗಿ ಇಂದಿಗೂ ಕನ್ನಡ ನಾಡಿನ ಮೇರು ಸದೃಶ ವ್ಯಕ್ತಿತ್ವದ ಪ್ರಾತಃಸ್ಮರಣೀಯರೆನಿಸಿದ ಕುವೆಂಪು ಅವರು ರಚಿಸಿದ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವೆನಿಸಿದೆ 'ಕೊಳಲು', 'ಪಾಂಚಜನ್ಯ', 'ನವಿಲು', 'ಕಲಾಸುಂದರಿ', 'ಪ್ರೇಮ ಕಾಶ್ಮೀರ', ಕವನ ಸಂಕಲನಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮಧುಮಗಳು ಕಾದಂಬರಿಗಳು, ಯಮನ ಸೋಲು, ಜಲಗಾರ, ಬಿರುಗಾಳಿ, ವಾಲ್ಮೀಕಿ ನಾಟಕಗಳು ಇಂದಿಗೂ ಜನಮಾನಸದಲ್ಲಿ ಉಳಿದಿವೆ ಎಂದರು.

ಹುಟ್ಟುವ ಪ್ರತಿ ಮಗುವೂ ವಿಶ್ವಮಾನವನೆ, ನಂತರ ಆ ಮಗುವನ್ನು ಜಾತಿ–ಮತದ ಕಟ್ಟುಪಾಡುಗಳಿಂದ ಬಂಧಿಸಲಾಗುತ್ತದೆ. ಯಾವುದೇ ವ್ಯಕ್ತಿಯನ್ನು ಜಾತಿಯಿಂದ ಅಳೆಯದೆ ನೈತಿಕ ವ್ಯಕ್ತಿತ್ವದಿಂದ ಪರಿಗಣಿಸಬೇಕೆಂಬ ಪರಿಕಲ್ಪನೆ ಬಿತ್ತಿದ ಕುವೆಂಪು ಅವರ ಜಾತ್ಯಾತೀತ ಮನೋಭಾವವು ವಿಶ್ವಮಾನವ ಸಂದೇಶವಾಯಿತು ಎಂದು ಜಿ.ಟಿ.ದೇವೇಗೌಡರು ನುಡಿದರು.

ಬುದ್ಧ–ಬಸವರ ಹಾಗೆ ಸಮಾಜದಲ್ಲಿ ವ್ಯಕ್ತಿ ಸ್ವತಂತ್ರವಾಗಿ, ವೈಚಾರಿಕ ದೃಷ್ಟಿಕೋನವನ್ನು ಹೊಂದಬೇಕು ಎಂಬ ಕುವೆಂಪು ಅವರ ಆಶಯವೇ ವಿಶ್ವಮಾನವ ಸಂದೇಶವಾಗಿದೆ ಎಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಕೆ. ಹರೀಶ್‌ಗೌಡ, ನಾಡಿಗೆ ವಿಶ್ವಮಾನವ ಸಂದೇಶ ಸಾರಿದ ಕನ್ನಡ ಸಾಹಿತ್ಯದ ಮೇರು ಕವಿ ಕುವೆಂಪು, ಮನುಜ ಮತ, ವಿಶ್ವಪಥ, ಸಮನ್ವಯ ಹಾಗೂ ಪೂರ್ಣ ದೃಷ್ಟಿ ಎಂಬ ಪಂಚಮಂತ್ರಗಳ ಹರಿಕಾರರ ಜನ್ಮದಿನ ಆಚರಿಸುತ್ತಿರುವುದು ಔಚಿತ್ಯಪೂರ್ಣ ಎಂದರು.

ಕನ್ನಡದ ಶ್ರೇಷ್ಠ ಕವಿ, ಕಾದಂಬರಿಕಾರ, ನಾಟಕಕಾರ, ವಿಮರ್ಶಕರಾಗಿದ್ದ ಕುವೆಂಪು ಅವರು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಮುಗಿಲೆತ್ತರಕ್ಕೆ ಕೊಂಡೊಯ್ದಿದ್ದರು. 20ನೇ ಶತಮಾನ ಕಂಡ ಅಪ್ರತಿಮ ಪ್ರತಿಭೆ, ರಸಋಷಿ, ಮೇರು ಕವಿಯಾಗಿ ಕುವೆಂಪು ಸದಾ ಜೀವಂತವಾಗಿದ್ದಾರೆ ಎಂದು ಅವರು ಬಣ್ಣಿಸಿದರು.



ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.29– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ನಿರ್ವಹಣಾ ಕಾಮಗಾರಿ ನಿಮಿತ್ತ ಡಿ.30 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ದಟ್ಟಗಳ್ಳಿ 3ನೇ ಹಂತ, ತ್ರಿವೇಣಿ ಸೂಪರ್ ಮಾರ್ಕೆಟ್ ಏರಿಯಾ, ಕದಂಬ ಬೇಕರಿ ಏರಿಯಾ, ಮುಖ್ಯ ಇಂಜಿನಿಯರ್‌ರವರ ಕಛೇರಿ, ದಟ್ಟಗಳ್ಳಿ 'ಐ'ಬ್ಲಾಕ್, ಮುಡಾ ಎಂಪ್ಲಾಯಿಸ್ ಲೇಔಟ್, ಸಬ್ ರಿಜಿಸ್ಟಾರ್ ಆಫೀಸ್, ಕನಕದಾಸ ನಗರ, ಆದಿತ್ಯ ಸರ್ಕಲ್, ಸೋಮನಾಥ ನಗರ, ಮಹಾಲಕ್ಷ್ಮೀ ಬಡಾವಣೆ ಕೇರ್ಗಳ್ಳಿ, ಕಲ್ಕಿ ಬಡಾವಣೆ, ನಂದಿ ಸರ್ಕಲ್ ದಟ್ಟಗಳ್ಳಿ, ಜೋಡಿ ಬೇವಿನಮರ ದಟ್ಟಗಳ್ಳಿ, ರಾಮಕೃಷ್ಣನಗರ, ಆರ್‌ಟಿ ನಗರ, ಲಿಂಗಾಬುದಿಪಾಳ್ಯ, ಯೂನಿವರ್ಸಿಟಿ ಲೇಔಟ್, ವಾಸು ಲೇಔಟ್, ಕೆ ಬ್ಲಾಕ್ ಆರ್‌ಕೆ ನಗರ, ಮೂಗನಹುಂಡಿ, ನಗರ್ತಹಳ್ಳಿ, ದೇವಗಳ್ಳಿ, ಅನಗಳ್ಳಿ, ತಿಬ್ಬಯ್ಯನಹುಂಡಿ, ಬೀರಿಹುಂಡಿ ಐ.ಪಿ ಲಿಮಿಟ್ಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ತಿಳಿಸಿದೆ.

ಬಿಜೆಪಿ ಕಚೇರಿಯಲ್ಲಿ ಕುವೆಂಪು ಜಯಂತಿ; ಸಾಧಕರಿಗೆ ಸನ್ಮಾನ

ಮೈಸೂರು, ಡಿ.29(ಎಂಟಿವೈ)– ಮೈಸೂರಿನ ಬಿಜೆಪಿ ಕಚೇರಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸುವ ಮೂಲಕ ರಾಷ್ಟ್ರಕವಿ ಕುವೆಂಪು ಜನ್ಮದಿನ ಆಚರಿಸಲಾಯಿತು.

ಮೈಸೂರಿನ ಚಾಮರಾಜ ಮೊಹಲ್ಲಾದಲ್ಲಿರುವ ಬಿಜೆಪಿ ಕಚೇರಿಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರು' ಪತ್ರಿಕೆಯ ಛಾಯಾಗ್ರಾಹಕ ಎಂ.ಎನ್. ಲಕ್ಷ್ಮೀನಾರಾಯಣ್, ಸಾವಯವ ಕೃಷಿಕ ದಿಲೀಪ್ ಚಿಕ್ಕಣ್ಣಗೌಡ, ಮಾಜಿ ಸೈನಿಕ ಶ್ರೀಧರ್, ಮಹಿಳಾ ಪೈಲೆಟ್ ತನುಶ್ರೀಗೌಡ, ವಿದ್ಯಾರ್ಥಿನಿ ಮೇಘನಾ ಹಾಗೂ ಬಿಜೆಪಿ ಹಿರಿಯ ಕಾರ್ಯಕರ್ತ ಬಾಲಸುಬ್ರಹ್ಮಣ್ಯ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಡಾ.ಡಿ.ಪ್ರಭು, ಕುವೆಂಪು ಅವರಲ್ಲಿದ್ದ ಸರ್ವೋದಯ, ಸಮನ್ವಯ ಪೂರ್ಣ ದೃಷ್ಟಿ ಹಾಗೂ ವಿಜ್ಞಾನ ಪ್ರಜ್ಞೆ ಸಮಕಾಲೀನ ದಿನಗಳಿಗೆ ಅನ್ವಯ ಮಾಡಬೇಕು. 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ರಚಿಸಿ, ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ದರ್ಶನ ತತ್ವವನ್ನು ಜಗತ್ತಿಗೆ ಸಾರಿದರು. ಜಗದ ಕವಿ, ಯುಗದ ಕವಿಯೂ ಆಗಿದ್ದ ಕುವೆಂಪು ಅವರು ಸದಾ ಕಾಲ ಸಮಾಜದ ಉದ್ಧಾರಕ್ಕಾಗಿ ಸಾಹಿತ್ಯ ಎಂಬ ತತ್ವಗಳಡಿ ಶ್ರಮಿಸಿದರು. 'ಶೂದ್ರ ತಪಸ್ವಿ' ನಾಟಕದಲ್ಲಿ ಮೇಲು ಕೀಳುಗಳ ಪಾತ್ರವನ್ನು ಕಿತ್ತೊಗೆದು ತಪಗಯ್ಯಲು ಇಚ್ಛಾಶಕ್ತಿ ಒಂದೇ ಮುಖ್ಯ. ಇಲ್ಲಿ ವರ್ಗ ತಾರತಮ್ಯ ಭಕ್ತಿಗೆ ಆಧ್ಯಾತ್ಮಕ್ಕೆ ಅಡ್ಡಿ ಆಗುವುದಿಲ್ಲ ಎಂಬ ಸಂಗತಿಯನ್ನು ಜಗತ್ತಿಗೆ ಪರಿಚಯಿಸಿದರು ಎಂದು ವಿವರಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಸಿದ್ದರಾಜು, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ರಾಜ್ಯ ಬಿಜೆಪಿ ಉಪಾಧ್ಯಕ್ಷ ರಾಜೇಂದ್ರ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷರಾದ ಹೇಮಂತ್‌ಕುಮಾರ್, ಮಿರ್ಲೆ ಶ್ರೀನಿವಾಸ್‌ಗೌಡ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮುಖಂಡರಾದ ರಾಜ್‌ಕುಮಾರ್, ಗಿರಿಧರ್, ಕುಮಾರ್‌ಗೌಡ, ಲ.ಜಗದೀಶ್, ಡಾ. ಅನಿಲ್ ಥಾಮಸ್, ಹೇಮಾ ನಂದೀಶ್, ಲಕ್ಷ್ಮೀದೇವಿ, ಪ್ರಶಾಂತ್ ಗೌಡ, ರಾಜಕುಮಾರ್, ಗೋವರ್ಧನ್, ಚಾಮರಾಜ ಕ್ಷೇತ್ರ ಉಪಾಧ್ಯಕ್ಷ ಕುಮಾರ್‌ಗೌಡ, ರವಿ, ಗಿರೀಶ್, ನೇಹಾ ಇನ್ನಿತರರು ಉಪಸ್ಥಿತರಿದ್ದರು.



ಮುಕ್ತ ವಿವಿಯಲ್ಲಿ ಭಾವಗೀತೆ ಸ್ಪರ್ಧೆಯೊಂದಿಗೆ ಕುವೆಂಪು ಜಯಂತಿ

ಮೈಸೂರು, ಡಿ.29(ಎಂಟಿವೈ)– ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನದ ಅಂಗವಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವತಿಯಿಂದ ಆಯೋಜಿಸಿದ್ದ ರಾಜ್ಯಮಟ್ಟದ ಕುವೆಂಪು ಕವನಗಳ ಭಾವಗೀತೆ ಸ್ಪರ್ಧೆಯಲ್ಲಿ 30ಕ್ಕೂ ಹೆಚ್ಚು ಮಂದಿ ಗಾಯಕರು ಪಾಲ್ಗೊಂಡು ಕುವೆಂಪು ವಿರಚಿತ ಭಾವಗೀತೆಗಳನ್ನು ಹಾಡಿ ಗಮನ ಸೆಳೆದರು.

ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಶುಕ್ರವಾರ ಕುವೆಂಪು ಸಂಶೋಧನಾ ಮತ್ತು ವಿಸ್ತರಣ ಕೇಂದ್ರದ ವತಿಯಿಂದ ಆಯೋಜಿಸಿದ್ದ ಕುವೆಂಪು ಜನ್ಮ ದಿನಾಚರಣೆ ಹಾಗೂ ಭಾವಗೀತೆಗಳ ಗಾಯನ ಸ್ಪರ್ಧೆಯನ್ನು ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಉದ್ಘಾಟಿಸಿ ಮಾತನಾಡಿ, ಕುವೆಂಪು ಅವರು ಜಗದ ಕವಿಯೂ, ಯುಗದ ಕವಿಯೂ ಆಗಿದ್ದಾರೆ. ಅಲ್ಲದೆ ದ.ರಾ. ಬೇಂದ್ರೆಯವರು ಹೇಳಿದಂತೆ ಕುವೆಂಪು ಅವರು ವಿಶ್ವಕವಿಯೂ ಆಗಿದ್ದಾರೆ. ವಿದ್ಯಾರ್ಥಿ ಜೀವನದಲ್ಲಿ ಕುವೆಂಪು ಅವರ ಕವನಗಳನ್ನು ಓದಿ ಪ್ರಭಾವಿತರಾಗಿದ್ದೇವೆ. ವಿಜ್ಞಾನದ ವಿದ್ಯಾರ್ಥಿಯಾದರೂ ಸಾಹಿತ್ಯ ನಮಗೆಲ್ಲಾ ಮೌಲ್ಯವನ್ನು ತುಂಬಿದೆ. ಬಸವಣ್ಣನವರ ಸಾಮಾಜಿಕ ಮತ್ತು ಕುವೆಂಪು ಅವರ ವೈಚಾರಿಕತೆ ಇಂದಿಗೂ ಪ್ರಸ್ತುತ ಮತ್ತು ಸಾರ್ವಕಾಲಿಕ. ಕುವೆಂಪು ಅವರ ವಿಶ್ವಮಾನವ ಪ್ರಜ್ಞೆಯನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಗಾಯನ ಸ್ಪರ್ಧೆಯ ವಿಜೇತರು: ವಿವಿಧೆಡೆಯಿಂದ ಆಗಮಿಸಿದ್ದ 30 ಮಂದಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಕುವೆಂಪು ವಿರಚಿತ ಭಾವಗೀತೆಗಳನ್ನು ಸೊಗಸಾಗಿ ಹಾಡಿ ಗಮನ ಸೆಳೆದರು. ವಿದ್ವಾನ್ ರಘು ಆರ್, ವಿದೂಷಿ ನಿತ್ಯಶ್ರೀ ಆರ್ ಹಾಗೂ ಭುವತಾಂಭೆ ಕೆ.ಎಸ್. ಅವರು ತೀರ್ಪುಗಾರರಾಗಿ ಪಾಲ್ಗೊಂಡಿದ್ದ ಸ್ಪರ್ಧೆಯಲ್ಲಿ ಎಲ್ಲರೂ ಅತ್ಯುತ್ತಮವಾಗಿ ಹಾಡುವ ಮೂಲಕ ತೀರ್ಪುಗಾರರಿಗೆ ಸವಾಲೊಡ್ಡಿದರು. ಅಂತಿಮವಾಗಿ ಅತ್ಯುತ್ತಮವಾಗಿ ಹಾಡಿದ ಐವರನ್ನು ಆಯ್ಕೆ ಮಾಡಲಾಯಿತು.

ಗಾಯನ ಸ್ಪರ್ಧೆಯಲ್ಲಿ ಡಾ.ಗಂಗೂಬಾಯಿ ಹಾನಗಲ್ಲ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಎಂಪಿಎ ವಿದ್ಯಾರ್ಥಿನಿ ಶೃತಿ ಭಟ್ ಪ್ರಥಮ, ಮಹಾರಾಣಿ ಕಾಲೇಜಿನ ಭ್ರಮರಾ ಕೆ.ಉಡುಪ ದ್ವಿತೀಯ, ಡಾ.ಗಂಗೂಬಾಯಿ ಹಾನಗಲ್ಲ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಎಂಪಿಎ ವಿದ್ಯಾರ್ಥಿ ದೇವರಾಜ್ ಟಿ.ಹೆಚ್. ತೃತೀಯ ಬಹುಮಾನ, ಕೆ.ಆರ್.ಪುರಂನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ಫೂರ್ತಿ ಹಾಗೂ ಭವ್ಯ ಪೈ ಅವರಿಗೆ ಸಮಾಧಾನಕರ ಬಹುಮಾನ ವಿತರಿಸಲಾಯಿತು. ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವಾಗಿ 6 ಸಾವಿರ, ದ್ವಿತೀಯ ಬಹುಮಾನವಾಗಿ 4 ಸಾವಿರ, ತೃತೀಯ ಬಹುಮಾನಕ್ಕೆ 2 ಸಾವಿರ ಹಾಗೂ ಸಮಾಧಾನಕರ ಬಹುಮಾನವಾಗಿ ತಲಾ 1 ಸಾವಿರ ರೂ. ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ.ಗಂಗೂಬಾಯಿ ಹಾನಗಲ್ಲ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಕುಲಪತಿ ಡಾ. ನಾಗೇಶ್ ಬೆಟ್ಟಕೋಟೆ, ಮುಕ್ತ ವಿವಿಯ ಅಧ್ಯಯನ ಕೇಂದ್ರ ಡೀನ್ ಪ್ರೊ.ರಾಮನಾಥನ್ ನಾಯ್ಡು, ಶೈಕ್ಷಣಿಕ ಡೀನ್ ಪ್ರೊ.ಲಕ್ಷ್ಮೀ, ಕುಲಸಚಿವ ಪ್ರೊ.ಕೆ.ಎಲ್.ಎನ್.ಮೂರ್ತಿ ಮುಕ್ತ ವಿವಿಯ ಕುವೆಂಪು ಸಂಶೋಧನಾ ಮತ್ತು ವಿಸ್ತರಣ ಕೇಂದ್ರದ ಡಾ.ಚಂದ್ರೇಗೌಡ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.



ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಯೋಜನೆಗೆ ನೋಂದಣಿ

ಮೈಸೂರು,ಡಿ.29– ದಿನಪತ್ರಿಕೆ ವಿತರಿಸುವ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ದೃಷ್ಟಿಯಿಂದ, ಎರಡು ಲಕ್ಷ ರೂಗಳ ಅಪಘಾತ ಪರಿಹಾರ ಸೌಲಭ್ಯ ಹಾಗೂ ಒಂದು ಲಕ್ಷ ರೂ.ವರೆಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸುವ ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆಯನ್ನು ಸರ್ಕಾರವು ಜಾರಿಗೊಳಿಸಿದ್ದು, ಈ ಯೋಜನೆಯ ಸದುಪಯೋಗ ಪಡೆಯಲು ದಿನಪತ್ರಿಕೆ ವಿತರಿಸುವ ಕಾರ್ಮಿಕರು ಇ–ಶ್ರಮ್ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಸಹಾಯವಾಣಿ 155214 (24X7) ಹಾಗೂ ಕಾರ್ಮಿಕ ಇಲಾಖೆಯನ್ನು ಸಂಪರ್ಕಿಸಬಹುದು ಎಂದು ಸಹಾಯಕ ಕಾರ್ಮಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಲ್ಲಿ ರಾಷ್ಟ್ರಕವಿ ಕುವೆಂಪು ಜನ್ಮದಿನ ಆಚರಣೆ

ಮೈಸೂರು, ಡಿ. 29(ಆರ್‌ಕೆ)– ಮೈಸೂರು ನಗರದಾದ್ಯಂತ ರಾಷ್ಟ್ರಕವಿ ಕುವೆಂಪು ಅವರ 119ನೇ ಜನ್ಮದಿನವನ್ನು ಇಂದು ಅತ್ಯಂತ ಸಂಭ್ರಮದಿಂದ ಆಚರಿಸಿ, ಮಹಾಕವಿಗೆ ಗೌರವ ಸಲ್ಲಿಸಲಾಯಿತು.

ಮೈಸೂರಿನ ಗನ್‌ಹೌಸ್ ಬಳಿಯ ಕುವೆಂಪು ಉದ್ಯಾನವನದ ಕುವೆಂಪು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಶಾಸಕ ಟಿ.ಎಸ್. ಶ್ರೀವತ್ಸ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಕೆ. ಪಾಂಡು, ಸಾಹಿತಿ ಜೆ. ಸರ್ವಮಂಗಳ, ಕನ್ನಡ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಮಾಜಿ ಕಾರ್ಪೊರೇಟರ್ ಬಿ.ವಿ. ಮಂಜುನಾಥ್, ಹಿಂದುಳಿದ ವರ್ಗಗಳ ನಾಯಕ ಕೆ. ಶಿವರಾಂ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕುವೆಂಪು ಜನ್ಮದಿನದ ಅಂಗವಾಗಿ 2022–23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಕನ್ನಡ ಭಾಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಪ್ರಬಂಧ ಸ್ಪರ್ಧೆ ವಿಜೇತರಿಗೆ ಇದೇ ಸಂದರ್ಭ ಬಹುಮಾನ ವಿತರಿಸಲಾಯಿತು. ನಂತರ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳಿಂದ ಕಲಾಮಂದಿರದಲ್ಲಿ ಆಯೋಜಿಸಿದ್ದ ಕುವೆಂಪು ಜಯಂತಿ ಕಾರ್ಯಕ್ರಮವನ್ನು ಶಾಸಕರಾದ ಜಿ.ಟಿ. ದೇವೇಗೌಡರು ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು.

ಈ ವೇಳೆ ವಿಧಾನಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ಡಾ. ಡಿ. ತಿಮ್ಮಯ್ಯ, ಹೆಚ್ಚುವರಿ ಜಿಲ್ಲಾಧಿಕಾರಿ ಲೋಕನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ, ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ ಜಿ.ಎಸ್. ಸೋಮಶೇಖರ್ ಹಾಗೂ ಇತರರು ಪಾಲ್ಗೊಂಡು ಕುವೆಂಪು ಸ್ಮರಣೆ ಮಾಡಿದರು.


ವಿಶ್ವಮಾನವ ಜೋಡಿ ರಸ್ತೆ: ಕುವೆಂಪು ಕ್ಷೇಮಾಭಿವೃದ್ಧಿ ಸಂಘ ಹಾಗೂ ನಾಗರಿಕ ಸಾಂಸ್ಕೃತಿಕ ವೇದಿಕೆಯಿಂದ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಮಾಜಿ ಮೇಯರ್ ಶಿವಕುಮಾರ್, ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷ ಪ್ರಧಾನ ಗುರುದತ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಕುವೆಂಪು ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಡಾ. ಎಲ್. ದೇವೇಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ನೀ. ಗಿರೀಗೌಡ, ನಾಗರಿಕ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಕೆ.ಎಸ್. ನಾಗರಾಜ್, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ವಾಜಪೇಯಿ, ಸಿ.ಬಸವರಾಜ್, ಕೆ.ವಿ.ಮಲ್ಲೇಶ್ ಸೇರಿದಂತೆ ಹಲವರು ಪಾಲ್ಗೊಂಡು, ಕುವೆಂಪು ಜನ್ಮದಿನ ಆಚರಿಸಿದರು.

ಆದಿಚುಂಚನಗಿರಿ ಶಾಖಾ ಮಠದಲ್ಲಿ ಕುವೆಂಪು ಜಯಂತಿ: ಮೈಸೂರಿನ ಹೆಬ್ಬಾಳ್‌ನಲ್ಲಿರುವ ಆದಿಚುಂಚನಗಿರಿ ಶಾಖಾ ಮಠದಲ್ಲಿ ಜಗದ ಕವಿ ಕುವೆಂಪು ಅವರ 119ನೇ ಜಯಂತ್ಯೋತ್ಸವವನ್ನು ಆಚರಿಸಲಾಯಿತು. ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಹಿರಿಯ ಸಾಹಿತಿ ಡಾ. ಸಿಪಿಕೆ, ಕುವೆಂಪು ಅವರ ಬರಹಗಳು ಅಂತರರಾಷ್ಟ್ರೀಯ ಗುಣಮಟ್ಟದ ಸತ್ವಗಳಾಗಿದ್ದು, ಅವರ ಸಾಹಿತ್ಯದ ಭಾಷಾಂತರ ಸಮಂಜಸವಾಗಿ ನಡೆದಿದ್ದರೆ ಸಾಹಿತ್ಯದ ಮೇರು ಕೃತಿಗಳಾಗುತ್ತಿದ್ದವು ಎಂದರು. ವೈದ್ಯ ಲೋಕೇಶ್, ಎ. ರವಿ, ಚೇತನ್, ಸುಶೀಲಾ ನಂಜಪ್ಪ, ಗುರುರಾಜ್, ಸತೀಶ್‌ಗೌಡ, ಶ್ರೀಧರ, ಗಂಗಾಧರ, ಮಂಜೇಗೌಡ, ಪ್ರೇಮಾ ಶಂಕರೇಗೌಡ, ಭರತೇಶ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮಾನವೀಯತೆ ತಳಪಾಯದಲ್ಲಿ ಸಮಾಜ ಕಟ್ಟೋಣ

ವಿಶ್ವಮಾನವ ದಿನಾಚರಣೆಯಲ್ಲಿ ಎಡಿಸಿ ಡಾ.ಹೆಚ್.ಎಲ್.ನಾಗರಾಜು



ಮಂಡ್ಯ, ಡಿ.29– ಕುವೆಂಪು ಅವರು ಸಮಾಜದಲ್ಲಿ ಮಾನವೀಯತೆ ಉಳಿಯಬೇಕು. ಮೌಢ್ಯತೆ ದೂರವಾಗಬೇಕು ಎಂದು ತಮ್ಮ ಕಾವ್ಯ, ಮಹಾಕಾವ್ಯ, ನಾಟಕ, ಕಾದಂಬರಿಗಳ ಮೂಲಕ ಸಮಾಜಕ್ಕೆ ವಿಶ್ವಮಾನವ ಸಂದೇಶ ನೀಡಿದ್ದಾರೆ. ಮಾನವೀಯತೆಯ ತಳಪಾಯದಲ್ಲಿ ಸಮಾಜ ಕಟ್ಟೋಣ ಎಂದು ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್. ನಾಗರಾಜು ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಹಯೋಗದೊಂದಿಗೆ ನಗರದ ಆರ್‌ಎಪಿಸಿಎಂಎಸ್ ಆವರಣದಲ್ಲಿ ಶುಕ್ರವಾರ ವಿಶ್ವಮಾನವ ದಿನಾಚರಣೆ ಅಂಗವಾಗಿ ರಾಷ್ಟ್ರಕವಿ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಕುವೆಂಪು ಅವರು ತಮ್ಮ ಸಾಹಿತ್ಯದ ಮೂಲಕ ಧರ್ಮ, ಜಾತಿ, ಸಾಮಾಜಿಕ ವೈರತ್ವಗಳನ್ನು ದೂರ ಮಾಡಲು ಪ್ರಯತ್ನಿಸಿದ್ದಾರೆ. ಅವರ ಸಾಹಿತ್ಯ ಜೀವನದ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ದಾರಿದೀಪ ಎಂದರು. ಮೌಢ್ಯತೆಯಿಂದ ಮಾನವೀಯತೆ ನಾಶವಾಗುತ್ತದೆ ಎಂದರೆ ಮೌಢ್ಯತೆಯಿಂದ ಹೊರಬನ್ನಿ, ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಿ ಎಂದು ಕುವೆಂಪು ತಿಳಿಸಿದ್ದಾರೆ. ಆದ್ದರಿಂದ ಅದರ ಪಾಲನೆಯಾಗಬೇಕಿದೆ ಎಂದರು.

ಆಡು ಮುಟ್ಟದ ಸೊಪ್ಪಿಲ್ಲ, ಕುವೆಂಪು ರಚಿಸದ ಸಾಹಿತ್ಯವಿಲ್ಲ. ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಎಂಬ ಪಂಚಮಂತ್ರ ವಿಶ್ವಕ್ಕೆ ಅವಶ್ಯಕ ಎಂದು ವಿಶ್ವಮಾನವ ಸಂದೇಶವನ್ನು ಕುವೆಂಪು ನೀಡಿದ್ದಾರೆ ಎಂದರು.

ಕುವೆಂಪು ಅವರನ್ನು ವ್ಯಕ್ತಿಯಾಗಿ ಸಂಕುಚಿತ ಭಾವನೆಯಲ್ಲಿ ನೋಡಬೇಡಿ. ದೊಡ್ಡ ದಾರ್ಶನಿಕರಾಗಿ ನೋಡಬೇಕು. ಕುವೆಂಪು ಅವರ ಜನ್ಮದಿನವನ್ನು ಕೇವಲ ನೆಪವಾಗಿ ಆಚರಿಸಬಾರದು. ಅವರ ತತ್ವಾದರ್ಶಗಳನ್ನು ಪಾಲಿಸಬೇಕು ಎಂದರು.

ಬಿಜಿಎಸ್ ಕಾಲೇಜಿನ ಪ್ರಾಧ್ಯಾಪಕ ಬೆಟ್ಟಸ್ವಾಮಿ, ಕುವೆಂಪು ಅವರ ವಿಶ್ವ ಮಾನವ ಸಂದೇಶ ತಿಳಿಸಿದರು. ತಹಸೀಲ್ದಾರ್ ಡಾ.ಶಿವಕುಮಾರ್ ಬಿರಾದರ್, ಅಪರ ಪೊಲೀಸ್ ಅಧಿಕಾರಿ ತಿಮ್ಮಯ್ಯ, ಮುಖಂಡರಾದ ಎ.ಸಿ. ರಮೇಶ್, ಮಹದೇವು, ಜಿ.ಎನ್. ಕೆಂಪರಾಜು, ರತ್ನಮ್ಮ, ನೇತ್ರಾವತಿ, ಅರುಣ, ಸುಜಾತ ಕೃಷ್ಣ ಯಶೋಧ, ಲಂಕೇಶ್ ಉಪಸ್ಥಿತರಿದ್ದರು.

ನಾಡಿನ ಶ್ರೇಷ್ಠ ಸಾಹಿತಿಗಳಲ್ಲಿ ಕುವೆಂಪು ಪ್ರಮುಖರು



ಕೆ.ಆರ್.ಪೇಟೆ, ಡಿ.29– ನಾಡಿನ ಶ್ರೇಷ್ಠ ಸಾಹಿತಿಗಳಲ್ಲಿ ರಾಷ್ಟ್ರಕವಿ ಕುವೆಂಪು ಅವರು ಪ್ರಮುಖರು ಎಂದು ಶಾಸಕ ಹೆಚ್.ಟಿ.ಮಂಜುನಾಥ್ ತಿಳಿಸಿದರು.

ಪಟ್ಟಣದಲ್ಲಿ ತಾಲೂಕು ಆಡಳಿತದಿಂದ ಆಯೋಜಿಸಿದ್ದ ವಿಶ್ವಮಾನವ ದಿನಾಚರಣೆಯಲ್ಲಿ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ನಾಡಿನ ಶ್ರೇಷ್ಠ ಸಾಹಿತಿಗಳಲ್ಲಿ ಕುವೆಂಪು ಅವರು ಒಬ್ಬರಾಗಿದ್ದಾರೆ. ತಮ್ಮ ಸಾಹಿತ್ಯ ಕೃತಿಗಳ ಮೂಲಕ ಮೌಢ್ಯ, ಆಡಂಬರಗಳು, ಜಾತಿ, ಮತ, ಪಂಥಗಳು ದೂರವಾಗಬೇಕು ಎಂಬ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ. ಸರಳ ವಿವಾಹಗಳನ್ನು ಪ್ರೋತ್ಸಾಹಿಸಿ ಲಕ್ಷಾಂತರ ಬಡ ಹೆಣ್ಣುಮಕ್ಕಳ ಪೋಷಕರಿಗೆ ಸಾಲದ ಹೊರೆ ತಪ್ಪಿಸಿದ್ದಾರೆ. ಆ ಮೂಲಕ ಪುರೋಹಿತ ಶಾಹಿ ವ್ಯವಸ್ಥೆ ವಿರೋಧಿಸಿದ ಮೊದಲ ಸಾಹಿತಿ ಕುವೆಂಪು. ಅವರ ಪ್ರಕಾರ ಪುರೋಹಿತ ಶಾಹಿ ಅಂದರೆ ದೇವಾಲಯದ ಅರ್ಚಕರು, ಮಸೀದಿ ಹಾಗೂ ಚರ್ಚ್‌ಗಳ ಧರ್ಮಗುರುಗಳಾಗಿದ್ದು, ಇವರು ತಮ್ಮ ಧರ್ಮವೇ ಮೇಲು ಎಂದು ಧರ್ಮದ ನಡುವೆ ಕಂದಕ ಸೃಷ್ಟಿಸುತ್ತಾರೆ. ಹಾಗಾಗಿ ಪುರೋಹಿತ ಶಾಹಿಗಳ ಹಿಡಿತಕ್ಕೆ ಯಾರೂ ಸಿಲುಕಬಾರದು. ಎಲ್ಲರೂ ವಿಶ್ವ ಮಾನವರಾಗಬೇಕು. ಜಾತ್ಯಾತೀತ ತತ್ವಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ಸಾಹಿತಿಗಳಾದ ಬಲ್ಲೇನಹಳ್ಳಿ ಮಂಜುನಾಥ್, ಮಾರೇನಹಳ್ಳಿ ಲೋಕೇಶ್, ಕನ್ನಡ ನಾಗರಾಜು, ವೇದಾವತಿ, ಬಿಂದುಶ್ರೀ ಅವರನ್ನು ತಾಲೂಕು ಆಡಳಿತದ ಪರವಾಗಿ ಸನ್ಮಾನಿಸಲಾಯಿತು. ತಹಸೀಲ್ದಾರ್ ನಿಸರ್ಗಪ್ರಿಯ ಅಧ್ಯಕ್ಷತೆ ವಹಿಸಿದ್ದರು. ತಾಲೂಕು ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ತಾಲೂಕು ದರಖಾಸ್ತು ಕಮಿಟಿ ಸದಸ್ಯರಾದ ರಂಗಪ್ಪ, ಕೋಮಲಾ, ತಾಪಂ ಇಓ ಸತೀಶ್, ಪುರಸಭೆ ಮುಖ್ಯಾಧಿಕಾರಿ ಜಗರೆಡ್ಡಿ, ಪುರಸಭಾಧ್ಯಕ್ಷ ನಟರಾಜು, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ಜಿಲ್ಲಾ ಜೆಡಿಎಸ್ ಉಪಾಧ್ಯಕ್ಷ ಬಿ.ವಿ.ನಾಗೇಶ್, ತಾಪಂ ಉದ್ಯೋಗಖಾತ್ರಿ ಅಧಿಕಾರಿ ಡಾ.ನರಸಿಂಹರಾಜು, ಎಸಿಡಿಪಿಓ ಪದ್ಮ, ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು. ಇದೇ ವೇಳೆ ಯುವನಿಧಿ ನೋಂದಣಿಗೆ ಶಾಸಕ ಹೆಚ್.ಟಿ.ಮಂಜು ಚಾಲನೆ ನೀಡಿದರು.

ವಿವಿಧ ಕಾಮಗಾರಿ ಪರಿಶೀಲಿಸಿದ ಜಿಪಂ ಸಿಇಓ



ಮಂಡ್ಯ, ಡಿ.29– ಪಾಂಡವಪುರ ತಾಲೂಕಿನಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳನ್ನು ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಶೇಖ್ ತನ್ವೀರ್ ಆಸೀಫ್ ಶುಕ್ರವಾರ ಪರಿಶೀಲಿಸಿದರು.

ಪಾಂಡವಪುರ ತಾಲೂಕಿನ ಲಕ್ಷ್ಮೀಸಾಗರ ಗ್ರಾಮ ಪಂಚಾಯಿತಿಯ ಲಕ್ಷ್ಮೀಸಾಗರ ಪ್ರೌಢಶಾಲೆಗೆ ಭೇಟಿ ನೀಡಿದ ಅವರು, ನರೇಗಾ ಯೋಜನೆಯಡಿ ನಿರ್ಮಾಣಗೊಂಡಿರುವ ಕಾಂಪೌಂಡ್, ಆಟದ ಮೈದಾನ ಪರಿಶೀಲಿಸಿ ಕಾಂಪೌಂಡ್ ಮೇಲೆ ಮಕ್ಕಳಿಗೆ ಅನುಕೂಲವಾಗುವ ಚಿತ್ರಗಳನ್ನು ಬಿಡಿಸುವಂತೆ ಪಿಡಿಓಗೆ ಸೂಚಿಸಿದರು. ಮಕ್ಕಳೊಂದಿಗೆ ಸಂವಾದ ನಡೆಸಿ ಮಕ್ಕಳಿಗೆ ಚೆನ್ನಾಗಿ ಓದುವಂತೆ ಸಲಹೆ ನೀಡಿ, ಎಲ್ಲಾ ಶಿಕ್ಷಕರಿಗೆ ಗುಣಮಟ್ಟದ ಶಿಕ್ಷಣ ನೀಡುವಂತೆ ತಿಳಿಸಿದರು.

ನಂತರ ಮಾಣಿಕ್ಯದಹಳ್ಳಿ ಗ್ರಾಮ ಪಂಚಾಯಿತಿಯ ಬಳ್ಳಾಳೆ ಪ್ರೌಢಶಾಲೆಗೆ ಭೇಟಿ ನೀಡಿ, ಹೊಸದಾಗಿ ನಿರ್ಮಾಣಗೊಂಡಿರುವ ಶೌಚಾಲಯ ಕಾಮಗಾರಿಯನ್ನು ಪರಿಶೀಲಿಸಿ ಉತ್ತಮ ನಿರ್ವಹಣೆ ಮಾಡುವಂತೆ ತಿಳಿಸಿದರು. ಬಳಿಕ ಬಳ್ಳಾಳೆ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಿ, ತಾಲೂಕು ಪಂಚಾಯಿತಿ ಅನುದಾನ ಕಾಮಗಾರಿಯನ್ನು ಪರಿಶೀಲಿಸಿದರು. ಮೇಲುಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಜಿಪಂ ಸಿಇಓ, ಆಸ್ಪತ್ರೆಯ ಎಲ್ಲಾ ವಿಭಾಗಗಳನ್ನು ಪರಿಶೀಲಿಸಿ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಆರೋಗ್ಯಾಧಿಕಾರಿಗಳಿಗೆ ತಿಳಿಸಿದರು. ಇದೇ ವೇಳೆ ಜಕ್ಕನಹಳ್ಳಿ ಗ್ರಾಪಂ ಕದಲಗೆರೆ ಕೆರೆ ಅಭಿವೃದ್ಧಿ ಕಾಮಗಾರಿ ಪರಿಶೀಲಿಸಿದರು.

ಇದೇ ಸಂದರ್ಭದಲ್ಲಿ ಪಾಂಡವಪುರ ತಾಲೂಕು ಪಂಚಾಯಿತಿ ಇಓ, ಪಿಆರ್‌ಇಡಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಹಾಯಕ ನಿರ್ದೇಶಕರು (ಗ್ರಾಉ), ವಿವಿಧ ಗ್ರಾಮ ಪಂಚಾಯಿತಿ ಪಿಡಿಓ ಹಾಗೂ ತಾಂತ್ರಿಕ ಸಿಬ್ಬಂದಿ ಉಪಸ್ಥಿತರಿದ್ದರು.

ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಪ್ರತಿಭಟನೆ



ಮಂಡ್ಯ, ಡಿ.29–ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಅವರನ್ನು ಬಂಧಿಸದ ರಾಜ್ಯ ಸರ್ಕಾರ ಸಂವಿಧಾನ ವಿರೋಧಿ ನಡೆ ಅನುಸರಿಸುತ್ತಿದೆ ಎಂದು ಆರೋಪಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಹಾಗೂ ಜನಪರ ಸಂಘಟನೆಗಳ ಒಕ್ಕೂಟ ಕಾರ್ಯಕರ್ತರು ಶುಕ್ರವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ಜಯಚಾಮರಾಜೇಂದ್ರ ಒಡೆಯರ್ ವೃತ್ತದಿಂದ ಮೆರವಣಿಗೆ ಹೊರಟ ಪ್ರತಿಭಟನಾಕಾರರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿವರೆಗೆ ತೆರಳಿ ಮನವಿ ಸಲ್ಲಿಸಿದರು. ಶ್ರೀರಂಗಪಟ್ಟಣದಲ್ಲಿ ನಡೆದ ಹನುಮ ಸಂಕೀರ್ತನಾ ಯಾತ್ರೆಯಲ್ಲಿ ಕಲ್ಲಡ್ಕ ಪ್ರಭಾಕರ್ ಭಟ್ ಮುಸ್ಲಿಂ ಮಹಿಳೆಯರ ಬಗ್ಗೆ ಅವಹೇಳನ ಮಾಡಿದ್ದು, ಈ ವೇಳೆ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲಿದ್ದರೂ ಕ್ರಮ ಕೈಗೊಳ್ಳದಿರುವುದು ವಿಪರ್ಯಾಸ. ಮಹಿಳೆಯರ ಘನತೆಗೆ ಚ್ಯುತಿ ತರುವ ಮಾತು ಹಾಗೂ ಮುಸ್ಲಿಂ ಸಮುದಾಯ ಅಪಮಾನಿಸಿರುವುದು ಅಪರಾಧವಾಗಿದೆ ಎಂದರು.

ಕೋಮು ಗಲಭೆ ಸೃಷ್ಟಿಸಿ ಮಾನಹಾನಿ, ಅಶಾಂತಿ ಉಂಟು ಮಾಡಿರುವ ಕಲ್ಲಡ್ಕ ಪ್ರಭಾಕರ್ ಭಟ್ ಅವರನ್ನು ಸರ್ಕಾರ ರಕ್ಷಿಸಲು ಹೊರಟಿರುವುದು ಜಾತ್ಯಾತೀತ ಮನೋಭಾವ ಹಾಗೂ ಸಂವಿಧಾನ ವಿರೋಧಿ ನಡೆಯಾಗಿದೆ. ದ್ವೇಷ ಬಿತ್ತಲು ಸಮಾವೇಶ ಆಯೋಜಿಸಿದ ಹಿಂದೂ ಜಾಗರಣ ವೇದಿಕೆಯ ಸ್ಥಳೀಯ ಮುಖಂಡರು ಹಾಗೂ ಆಯೋಜಕರ ಮೇಲೆ ದೂರು ದಾಖಲಿಸಬೇಕು. ಮಂಡ್ಯ ಜಿಲ್ಲೆ ಸೌಹಾರ್ದ ನೆಲೆಯಾಗಿದ್ದು, ಸೌಹಾರ್ದತೆಗೆ ಬೆಂಕಿ ಹಚ್ಚುವ, ವಿಷಬೀಜ ಬಿತ್ತುವ ಮಾನವ ವಿರೋಧಿ ಚಟುವಟಿಕೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಅನುಮತಿ ನೀಡಬಾರದು ಎಂದು ಒತ್ತಾಯಿಸಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ದೇವಿ, ಡಿ.ಕೆ.ಲತಾ, ಸುಶೀಲಾ, ಶೋಭಾ, ರಾಣಿ, ಮಂಜುಳಾ, ಜಯಶೀಲಾ, ಜಯಲಕ್ಷ್ಮೀ, ಸಿಐಟಿಯುನ ಪ್ರಧಾನ ಕಾರ್ಯದರ್ಶಿ ಸಿ.ಕುಮಾರಿ, ಪ್ರಾಂತ ರೈತ ಸಂಘದ ಎನ್.ಎಲ್.ಭರತ್ ರಾಜ್, ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್.ಕೆಂಪೂಗೌಡ, ಮಹಿಳಾ ಮುನ್ನಡೆ ಪೂರ್ಣಿಮಾ, ಶಿಲ್ಪಾ, ಬಿಸಿಯೂಟ ನೌಕರರ ಸಂಘದ ಮಹದೇವಮ್ಮ, ಎಜಾಜ್ ಪಾಷಾ, ಚಂದ್ರಶೇಖರ್ ಭಾಗವಹಿಸಿದ್ದರು.

ಮುತ್ತತ್ತಿಗೆ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ

ಹಲಗೂರು, ಡಿ.29–ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಡಿ.31ರಂದು ಬೆಳಗ್ಗೆ 6 ರಿಂದ ಜ.1ರ ಸಂಜೆ 6ರ ವರೆಗೆ ಇಲ್ಲಿನ ಪ್ರವಾಸಿ ತಾಣ ಮುತ್ತತ್ತಿಗೆ ಪ್ರವಾಸಿಗರಿಗೆ ನಿರ್ಬಂಧಿಸಿ ಮಳವಳ್ಳಿ ತಾಲೂಕು ಆಡಳಿತ ಆದೇಶ ಹೊರಡಿಸಿದೆ. ಹೊಸ ವರ್ಷಾಚರಣೆಗಾಗಿ ಮಂಡ್ಯ, ಬೆಂಗಳೂರು, ಮೈಸೂರು ಸೇರಿದಂತೆ ವಿವಿಧೆಡೆಗಳಿಂದ ಹೆಚ್ಚಿನ ಪ್ರವಾಸಿಗರು ಮುತ್ತತ್ತಿಗೆ ಆಗಮಿಸಿ ನದಿ ಹಾಗೂ ಅರಣ್ಯ ಪ್ರದೇಶದಲ್ಲಿ ಮೋಜು ಮಸ್ತಿ ಮಾಡುವ ಸಾಧ್ಯತೆ ಹೆಚ್ಚಿರುತ್ತದೆ. ಹೀಗಾಗಿ ಮುತ್ತತ್ತಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಶಾಂತಿ, ಕಾನೂನು ಪಾಲನೆ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ 2 ದಿನ ನಿಷೇಧಾಜ್ಞೆ ಹೊರಡಿಸಿ ಮಳವಳ್ಳಿ ತಹಸೀಲ್ದಾರ್ ಆದೇಶಿಸಿದ್ದಾರೆ.

ನ್ಯಾಯ ಬೆಲೆ ಅಂಗಡಿ ತೆರೆಯಲು ಅರ್ಜಿ

ಮಂಡ್ಯ, ಡಿ.29– ನಾಗಮಂಗಲ ತಾಲೂಕಿನಲ್ಲಿ ವಿವಿಧ ಕಾರಣಗಳಿಂದ ನ್ಯಾಯಬೆಲೆ ಅಂಗಡಿಗಳು ರದ್ದಾಗಿರುವ ಹಿನ್ನೆಲೆಯಲ್ಲಿ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲು ಅರ್ಜಿ ಆಹ್ವಾನಿಸಲಾಗಿದೆ. ನಾಗಮಂಗಲದ ಬಿಳಗುಂದ, ಹಳ್ಳದ ಹೊಸಹಳ್ಳಿ, ದಡಗ, ಅಳೀಸಂದ್ರ, ಗಂಗವಾಡಿ, ಕಾಂತಪುರ, ತಿರುಗನಹಳ್ಳಿ, ಬೆಟ್ಟದ ಮಲ್ಲೇನಹಳ್ಳಿ, ಲಾಳನಕೆರೆ, ಬಿದರಕೆರೆ ಗ್ರಾಮಗಳಲ್ಲಿ ನ್ಯಾಯಬೆಲೆ ಅಂಗಡಿ ತೆರೆಯಲು ಉದ್ದೇಶಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಆನ್‌ಲೈನ್‌ನಲ್ಲಿ ಶಿಕ್ಷಕರಿಗೆ 12.91 ಲಕ್ಷ ವಂಚನೆ

ಚಾಮರಾಜನಗರ, ಡಿ. 29– ಆನ್‌ಲೈನ್ ಮೂಲಕ ಡೆಮೋ ವರ್ಕ್ ಮಾಡಿದರೆ ದಿನಕ್ಕೆ 1000ದಿಂದ 1500 ರೂ. ಗಳಿಸಬಹುದು ಎಂದು ಆಮಿಷವೊಡ್ಡಿ ಶಿಕ್ಷಕರೊಬ್ಬರಿಗೆ ಆನ್‌ಲೈನ್ ಮೂಲಕ 12.91 ಲಕ್ಷ ರೂ. ವಂಚಿಸಿರುವುದಲ್ಲದೇ, ಇನ್ನೂ 5 ಲಕ್ಷ ರೂ. ಕೊಡಬೇಕೆಂದು ಪೀಡಿಸುತ್ತಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಚಾಮರಾಜನಗರ ತಾಲೂಕು ಕಾಗಲವಾಡಿ ಗ್ರಾಮದ ಗಣೇಶ್ ಪ್ರಸಾದ್(38) ವಂಚನೆಗೊಳಗಾದ ಶಿಕ್ಷಕರಾಗಿದ್ದು, ಇವರನ್ನು ಟೆಲಿಗ್ರಾಂ ಗ್ರೂಪ್‌ನಲ್ಲಿ ಸಂಪರ್ಕಿಸಿದ ಕಾವ್ಯ ಶರ್ಮಾ ಎಂಬಾಕೆ ಆನ್‌ಲೈನ್ ಮೂಲಕ ಪಾರ್ಟ್‌ಟೈಂ ಜಾಬ್ ಮಾಡಲು ಆಸಕ್ತಿ ಇದೆಯೇ ಎಂದು ಪ್ರಶ್ನಿಸಿದ್ದಾಳೆ. ಅದಕ್ಕೆ ಅವರು ಸ್ಪಂದಿಸಿದಾಗ ಡೆಮೋ ವರ್ಕ್ ಮಾಡಿದರೆ ದಿನಕ್ಕೆ 1000ದಿಂದ 1500 ರೂ. ಪಡೆಯಬಹುದು ಎಂದು ತಿಳಿಸಿ, ಅವರನ್ನು ಟೆಲಿಗ್ರಾಂನಲ್ಲೇ ಮತ್ತೊಂದು ಗ್ರೂಪ್‌ಗೆ ಸೇರ್ಪಡೆಗೊಳಿಸುತ್ತಾಳೆ. ಹಂತ ಹಂತವಾಗಿ ಗಣೇಶ್‌ಪ್ರಸಾದ್ 12,91,868 ರೂ. ವರ್ಗಾವಣೆ ಮಾಡಿ, ವಂಚನೆಗೊಳಗಾಗಿದ್ದಾರೆ. ಅದು ಮಾತ್ರವಲ್ಲದೇ, ಪಂಕಜ್ 565 ಹೆಸರಿನ ಖಾತೆ ಹೊಂದಿರುವ ವ್ಯಕ್ತಿ ಗಣೇಶ್ ಪ್ರಸಾದ್ ಹೆಸರಿನಲ್ಲಿ ತಾನು 5 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿದ್ದು, ಅದನ್ನು ಕೊಡಬೇಕು ಎಂದು ಮೆಸೇಜ್ ಮೂಲಕ ಪೀಡಿಸುತ್ತಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಚಾಮರಾಜನಗರ ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಸ್ಕ್ರ್ಯಾಪ್ ಅಂಗಡಿ ರೋಲಿಂಗ್ ಶೆಟ್ಟರ್ ಮೀಟಿ ಲಕ್ಷಾಂತರ ರೂ. ಮೌಲ್ಯದ ತಾಮ್ರ, ಹಿತ್ತಾಳೆ ಪದಾರ್ಥ ಕಳವು

ಮೈಸೂರು, ಡಿ. 29– ಹಿತ್ತಾಳೆ ಮತ್ತು ತಾಮ್ರದ ಸ್ಕ್ರ್ಯಾಪ್ ಸಂಗ್ರಹಿಸಿದ್ದ ಅಂಗಡಿಯ ರೋಲಿಂಗ್ ಶೆಟರ್ ಮೀಟಿ 4.35 ಲಕ್ಷ ರೂ. ಮೌಲ್ಯದ ಪದಾರ್ಥಗಳನ್ನು ಕಳವು ಮಾಡಿರುವ ಘಟನೆ ಮೈಸೂರಿನ ಬನ್ನಿಮಂಟಪ ಸಿವಿ ರಸ್ತೆಯಲ್ಲಿ ನಡೆದಿದೆ.

ಈ ರಸ್ತೆಯಲ್ಲಿ ಶ್ರೀ ಬೀರೇಶ್ವರ ಎಂಟರ್‌ಪ್ರೈಸಸ್ ಎಂಬ ಹೆಸರಿನಲ್ಲಿ ಹಿತ್ತಾಳೆ ಮತ್ತು ತಾಮ್ರದ ಸ್ಕ್ರ್ಯಾಪ್ ಖರೀದಿಸುವ ಗುಜರಿ ನಡೆಸುತ್ತಿರುವ ಡಿ. ಮಂಜುನಾಥ್, ಡಿ. 26ರಂದು ಅಂಗಡಿ ಮುಚ್ಚಿಕೊಂಡು ಮನೆಗೆ ಹೋಗಿದ್ದಾರೆ. ಮರುದಿನ ಬೆಳಗ್ಗೆ ಬಂದು ನೋಡಿದಾಗ ಅಂಗಡಿಯ ರೋಲಿಂಗ್ ಶೆಟ್ಟರ್ ಮೀಟಿ ಖದೀಮರು, ಒಳನುಗ್ಗಿದ 3.60 ರೂ. ಮೌಲ್ಯದ 550ರಿಂದ 600 ಕೆಜಿ ತೂಕದ ತಾಮ್ರದ ಸ್ಕ್ರ್ಯಾಪ್, ಕ್ಯಾಷ್ ಬಾಕ್ಸ್‌ನಲ್ಲಿದ್ದ 15 ಸಾವಿರ ರೂ. ನಗದು ಹಾಗೂ 15 ಗ್ರಾಂ ತೂಕದ ಚಿನ್ನದ ಸರ ಸೇರಿ ಒಟ್ಟು 4.35 ಲಕ್ಷ ರೂ. ಮೌಲ್ಯದ ಪದಾರ್ಥಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಎನ್‌ಆರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇದು ಪ್ರಯಾಣಿಕರ ತಂಗುದಾಣವೋ...! ಇಲ್ಲ ದ್ವಿಚಕ್ರ ವಾಹನಗಳ ನಿಲ್ದಾಣವೋ...!!



ಮೈಸೂರು, ಡಿ. 29– ಮೈಸೂರಿನ ಚಾಮುರಂಗ ರಸ್ತೆಯ ಎಸ್‌ಜೆಸಿಇ ಕಾಲೇಜು ಬಳಿ ಇರುವ ಪ್ರಯಾಣಿಕರ ತಂಗುದಾಣ ಬೈಕ್ ಪಾರ್ಕಿಂಗ್ ಸ್ಥಳವಾಗಿ ಮಾರ್ಪಟ್ಟಿದೆ.

ಬಸ್‌ಗಾಗಿ ಕಾಯುವ ಪ್ರಯಾಣಿಕರಿಗೆ ಬಿಸಿಲು, ಮಳೆ, ಗಾಳಿಯಿಂದ ರಕ್ಷಣೆ ನೀಡುವ ಉದ್ದೇಶದಿಂದ ಈ ಸ್ಥಳದಲ್ಲಿ ದಿವಂಗತ ಹೆಚ್.ಎಸ್. ಶಂಕರಲಿಂಗೇಗೌಡರು ಶಾಸಕರಾಗಿದ್ದಾಗ ಅವರ ಅನುದಾನದಲ್ಲಿ ಪ್ರಯಾಣಿಕರ ತಂಗುದಾಣವನ್ನು ನಿರ್ಮಿಸಲಾಗಿದೆ. ಆದರೆ, ಈ ತಂಗುದಾಣವು ಪ್ರಯಾಣಿಕರ ಉಪಯೋಗಕ್ಕೆ ಬಾರದೇ ಕೆಲ ವಿದ್ಯಾರ್ಥಿಗಳ ದ್ವಿಚಕ್ರ ವಾಹನಗಳಿಗೆ ನೆರಳು ನೀಡುವ ಸ್ಥಳವಾಗಿ ಪರಿಣಮಿಸಿದೆ. ಪ್ರಯಾಣಿಕರ ತಂಗುದಾಣದಲ್ಲಿ ದ್ವಿಚಕ್ರ ವಾಹನಗಳನ್ನು ಪಾರ್ಕ್ ಮಾಡಿದ್ದರೂ ಕೂಡ ಸಂಚಾರ ವಿಭಾಗದ ಪೊಲೀಸರು, ಇದರತ್ತ ಗಮನ ಹರಿಸದೇ ಇರುವುದು ಅಚ್ಚರಿಯನ್ನುಂಟು ಮಾಡಿದೆ.

ವಿದ್ಯಾರ್ಥಿಗಳು ತಮ್ಮ ವಾಹನಗಳನ್ನು ನಿಲ್ಲಿಸಲು ಕಾಲೇಜಿನ ಒಳಗೆ ಪಾರ್ಕಿಂಗ್ ಸ್ಥಳವಿದೆ. ಆದರೆ, ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನವನ್ನು ಕಾಲೇಜಿನ ಕ್ಯಾಂಪಸ್ ಒಳಗೆ ಪ್ರವೇಶಿಸಲು ಬಿಡುವುದಿಲ್ಲ. ಸುರಕ್ಷತಾ ದೃಷ್ಟಿಯಿಂದ ಕಾಲೇಜು ಆಡಳಿತ ಮಂಡಳಿಯು ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದೆ. ಹೀಗೆ ಹೆಲ್ಮೆಟ್ ಇಲ್ಲದೆ ದ್ವಿಚಕ್ರ ವಾಹನ ಕೊಂಡೊಯ್ಯುವ ವಿದ್ಯಾರ್ಥಿಗಳು ಪ್ರಯಾಣಿಕರ ತಂಗುದಾಣದೊಳಗೆ ತಮ್ಮ ವಾಹನವನ್ನು ನಿಲ್ಲಿಸಿ ಕಾಲೇಜಿಗೆ ತೆರಳುತ್ತಿದ್ದಾರೆ. ಈ ಕಾಲೇಜಿನ ಬಳಿ ಪ್ರತೀದಿನವೂ 3ರಿಂದ 4 ಬಾರಿ ಪೊಲೀಸರು ಗಸ್ತು ತಿರುಗುತ್ತಾರೆ. ಕಾಲೇಜು ಆರಂಭವಾಗುವ ಹಾಗೂ ಬಿಡುವ ವೇಳೆ ಕೆಲ ಸಮಯ ಪೊಲೀಸ್ ವಾಹನ ಕಾಲೇಜು ಬಳಿಯೇ ಇರುತ್ತದೆ. ಪೊಲೀಸರ ಈ ವ್ಯವಸ್ಥೆಯು ವಿದ್ಯಾರ್ಥಿಗಳ ಹಿತದೃಷ್ಟಿಯಿಂದಾಗಿ ಕೈಗೊಳ್ಳಲಾಗಿದೆ. ಆದರೆ, ಪ್ರಯಾಣಿಕರ ತಂಗುದಾಣದಲ್ಲಿ ವಿದ್ಯಾರ್ಥಿಗಳು ದ್ವಿಚಕ್ರ ವಾಹನಗಳನ್ನು ನಿಲ್ಲಿಸುವುದರ ಬಗ್ಗೆ ಪೊಲೀಸರು ಗಮನ ಹರಿಸಬೇಕಿದೆ ಎಂದು ಬಸ್ ಪ್ರಯಾಣಿಕರು ಆಗ್ರಹಿಸಿದ್ದಾರೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಜೈಲಿಗೆ ವಾಪಸ್ಸಾದ ಖೈದಿ ಬಳಿ ಗಾಂಜಾ

ಕಾಲಿನಲ್ಲಿ ಸುತ್ತಿದ್ದ ಸೆಲ್ಲೋ ಟೇಪ್ ಬಿಚ್ಚಿದರೆ ಅದರೊಳಗಿತ್ತು 76 ಗ್ರಾಂ ಗಾಂಜಾ!

ಮೈಸೂರು, ಡಿ. 29– ಮೈಸೂರು ಕಾರಾಗೃಹದಲ್ಲಿರುವ ಖೈದಿಯೋರ್ವ ಚಿಕಿತ್ಸೆಗಾಗಿ ಆಸ್ಪತ್ರೆಗೆ ತೆರಳಿ ಹಿಂತಿರುಗುವಾಗ ಗಾಂಜಾ ಕೊಂಡೊಯ್ದು ಸಿಕ್ಕಿಬಿದ್ದಿದ್ದಾನೆ.

ಮಡಿಕೇರಿ ನಿವಾಸಿಯಾಗಿರುವ ದುರ್ಗದತ್ತ ಕಾಳಿದಾಸಸ್ವಾಮಿ ಅಲಿಯಾಸ್ ಮಹಮ್ಮದ್ ಇಕ್ಬಾಲ್(28) ಎಂಬಾತ ಮೈಸೂರು ಜೈಲಿನಲ್ಲಿ ಸಜಾಬಂಧಿಯಾಗಿದ್ದು, ಈತನನ್ನು ಅನಾರೋಗ್ಯದ ನಿಮಿತ್ತ ಜೈಲು ಸಿಬ್ಬಂದಿ ಡಿಸೆಂಬರ್ 27ರಂದು ಕೆಆರ್ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನಂತರ ಮಧ್ಯಾಹ್ನ 2.30ರ ಸುಮಾರಿಗೆ ಜೈಲಿಗೆ ಕರೆತಂದಿದ್ದಾರೆ. ಜೈಲಿನೊಳಗೆ ಆತನನ್ನು ಸೇರಿಸಿಕೊಳ್ಳುವ ಮುನ್ನ ತಪಾಸಣೆ ನಡೆಸಿದಾಗ, ಆತನ ಕಾಲಿನಲ್ಲಿ ಸೆಲ್ಲೋ ಟೇಪ್ ಸುತ್ತಿರುವುದು ಕಂಡುಬಂದಿದೆ. ಅದನ್ನು ಬಿಚ್ಚಿ ನೋಡಿದಾಗ ಅದರೊಳಗೆ 76 ಗ್ರಾಂ ತೂಕದ ಗಾಂಜಾ ಇರುವುದು ಪತ್ತೆಯಾಗಿದೆ.

ಜೈಲು ಸಿಬ್ಬಂದಿಯ ಭದ್ರತೆಯೊಂದಿಗೆ ಆಸ್ಪತ್ರೆಗೆ ತೆರಳಿದ್ದ ಈತನಿಗೆ ಗಾಂಜಾ ಹೇಗೆ ದೊರೆಯಿತು ಎಂಬುದರ ಬಗ್ಗೆ ವಿಚಾರಣೆ ನಡೆಸಿದಾಗ, ಈತ ಕೆಆರ್ ಆಸ್ಪತ್ರೆಯ ಬಾತ್‌ರೂಂ ಬಳಿ ನವೆಲ್ ಎಂಬಾತ ಇಟ್ಟು ಹೋಗಿದ್ದ ಗಾಂಜಾವನ್ನು ತಾನು ತೆಗೆದುಕೊಂಡು ಬಂದಿರುವುದಾಗಿ ತಿಳಿಸಿದ್ದಾನೆ. ಜೈಲಿನ ಕಾರ್ಯ ನಿರ್ವಾಹಕ ಜೈಲರ್ ಎಂ.ಡಿ. ಧರಣೇಶ್ ನೀಡಿದ ಮಾಹಿತಿ ಮೇರೆಗೆ ಮಂಡಿ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಎನ್.ವಿ. ರಂಗಸ್ವಾಮಿ ಅವರು ಸಿಬ್ಬಂದಿಯೊಂದಿಗೆ ಜೈಲಿಗೆ ತೆರಳಿ ಗಾಂಜಾ ವಶಪಡಿಸಿ ಕೊಂಡು ಖೈದಿ ದುರ್ಗದತ್ತ ಕಾಳಿದಾಸಸ್ವಾಮಿ ಅಲಿಯಾಸ್ ಮಹಮ್ಮದ್ ಇಕ್ಬಾಲ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಆಸ್ಪತ್ರೆಗೆ ಖೈದಿಗಳನ್ನು ಕರೆದುಕೊಂಡು ಹೋಗುವ ಜೈಲಿನ ಸಿಬ್ಬಂದಿ, ಅವರನ್ನು ಬಿಟ್ಟು ಎಲ್ಲೂ ಹೋಗುವುದಿಲ್ಲ. ಅವರೊಂದಿಗೆ ಯಾರೂ ಮಾತನಾಡದೇ ಹಾಗೂ ಏನನ್ನೂ ಕೊಡದ ಹಾಗೆ ನಿಗಾ ವಹಿಸಬೇಕು ಎಂಬುದು ನಿಯಮ. ಆದರೆ ಈ ಪ್ರಕರಣದಲ್ಲಿ ಕೆಆರ್ ಆಸ್ಪತ್ರೆಗೆ ಖೈದಿಯನ್ನು ಕರೆದೊಯ್ದ ಜೈಲು ಸಿಬ್ಬಂದಿಯ ಕಣ್ಣು ತಪ್ಪಿಸಿ ಈತ ಹೇಗೆ ಗಾಂಜಾ ತೆಗೆದುಕೊಂಡು ಬಂದ ಎಂಬುದು ಯಕ್ಷಪ್ರಶ್ನೆಯಾಗಿದೆ. ಒಂದು ವೇಳೆ ಈತ ಬಾತ್‌ರೂಂಗೆ ಹೋಗುವಾಗ ಸಿಬ್ಬಂದಿ ಒಳಗೆ ಹೋಗದೆ ಹೊರಗೆ ಕಾಯುತ್ತಿದ್ದರು ಎಂದು ಹೇಳುವುದಾದರೂ, ಈತ ಬಾತ್‌ರೂಂನಲ್ಲಿ ಇಟ್ಟಿದ್ದ ಗಾಂಜಾ ತೆಗೆದುಕೊಂಡು ಅದನ್ನು ತನ್ನ ಕಾಲಿಗೆ ಸೆಲ್ಲೋ ಟೇಪ್‌ನಿಂದ ಸುತ್ತಿಕೊಂಡು ಬರುವವರೆವಿಗೂ ಜೈಲು ಸಿಬ್ಬಂದಿ ಏನು ಮಾಡುತ್ತಿದ್ದರು ಹಾಗೂ ಖೈದಿ ಆಸ್ಪತ್ರೆಗೆ ಹೋಗುತ್ತಿದ್ದಾನೆ ಎಂಬುದರ ಬಗ್ಗೆ ಗಾಂಜಾ ಸರಬರಾಜುದಾರನಿಗೆ ಮಾಹಿತಿ ಲಭಿಸಿದ್ದು ಹೇಗೆ ಎಂಬ ಪ್ರಶ್ನೆಗಳು ಉದ್ಭವಿಸಿವೆ.



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀ ಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್‌ನ 2024ನೇ ಸಾಲಿನ ಕ್ಯಾಲೆಂಡರ್ ಅನ್ನು ಮೈಸೂರಿನ ಜಲದರ್ಶಿನಿಯಲ್ಲಿ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ ಬಿಡುಗಡೆಗೊಳಿಸಿದರು. ಈ ವೇಳೆ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಹೆಚ್.ಬಿ.ಸಂಪತ್ ಕುಮಾರ್, ನಿವೃತ್ತ ಮುಖ್ಯೋಪಾಧ್ಯಾಯ ಸುಂದರ್ ಕುಮಾರ್, ಐಎನ್‌ಬಿಸಿಡಬ್ಲ್ಯೂಎಫ್ ಮೈಸೂರು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಚೆಟ್ಟಿಹುಂಡಿ ಸುನೀಲ್, ಸಾಹುಕಾರ್ ಹುಂಡಿ ಸಿ.ಗೋಪಾಲಗೌಡ, ಸವಿತ ಸಮಾಜದ ನಗರ ಅಧ್ಯಕ್ಷ ಹರೀಶ್ ರೆಡ್ಡಿ, ಮಡಿವಾಳ ಸಂಘದ ಜಿಲ್ಲಾ ಉಪಾಧ್ಯಕ್ಷ ಬಿ.ಜಿ.ಕೇಶವ್ ರಾಜು ರೆಡ್ಡಿ, ಪಿ.ಎಂ.ನಾರಾಯಣ, ಬೊಮ್ಮೇನಹಳ್ಳಿ ಸುನೀಲ್, ಪ್ರದೀಪ್ ರೆಡ್ಡಿ ಉಪಸ್ಥಿತರಿದ್ದರು.

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆ ಜ.22ರಂದು ಮನೆ ಮುಂದೆ ಐದು ದೀಪ ಬೆಳಗಿಸಲು ವಿಹೆಚ್‌ಪಿ ಮನವಿ

ಜ.1ರಿಂದ ಪ್ರತಿ ಮನೆಗೂ ಪವಿತ್ರ ಮಂತ್ರಾಕ್ಷತೆ, ಶ್ರೀರಾಮ, ರಾಮಮಂದಿರ ಭಾವಚಿತ್ರ ವಿತರಣೆ



ಮೈಸೂರು, ಡಿ.29(ಜಿಎ)– ಅಯೋಧ್ಯೆಯ ಶ್ರೀರಾಮ ಜನ್ಮಭೂಮಿ ಟ್ರಸ್ಟ್ ವತಿಯಿಂದ ಅಯೋಧ್ಯೆಯಲ್ಲಿ ನಿರ್ಮಿಸಿರುವ ಶ್ರೀರಾಮ ಮಂದಿರದಲ್ಲಿ ಜ.22ರಂದು ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಅಂದು ಸಂಜೆ ಸೂರ್ಯಾಸ್ತದ ನಂತರ ಮನೆಯ ಮುಂದೆ ಕನಿಷ್ಠ ಐದು ದೀಪಗಳನ್ನು ಬೆಳಗಬೇಕೆಂದು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಮನವಿ ಮಾಡಿದೆ.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ವಿಎಚ್‌ಪಿ ಮಠ ಮಂದಿರ ಧರ್ಮ ಪ್ರಚಾರ ಪ್ರಮುಖ ಜನಾರ್ಧನ್ ರಾವ್ ಅಂದು ಅಯೋಧ್ಯೆಯಲ್ಲಿ ಶ್ರೀರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆ ನೆರವೇರಲಿದೆ. ಈ ದಿನದಂದು ಇಡೀ ಭಾರತವು ಅಯೋಧ್ಯೆ ಆಗಲಿದೆ. ಆದ್ದರಿಂದ ಟ್ರಸ್ಟ್‌ನ ಸೂಚನೆಯಂತೆ ಜ.1ರಿಂದ 15ರವರೆಗೆ ರಾಷ್ಟ್ರದಾದ್ಯಂತ ನಡೆಯುವ ಸಂಪರ್ಕ ಅಭಿಯಾನದಲ್ಲಿ ಶ್ರೀ ರಾಮ ಜನ್ಮಭೂಮಿಯಿಂದ ಬಂದ ಪವಿತ್ರ ಮಂತ್ರಾಕ್ಷತೆ, ನಿವೇದನಾ ಪತ್ರ ಮತ್ತು ಶ್ರೀರಾಮ ಮತ್ತು ರಾಮಮಂದಿರದ ಭಾವಚಿತ್ರವನ್ನು ವಿಶ್ವ ಹಿಂದೂ ಪರಿಷತ್ ನೇತೃತ್ವದಲ್ಲಿ ಎಲ್ಲಾ ಪರಿವಾರದವರು ಮತ್ತು ರಾಮಭಕ್ತರು ಪ್ರತಿಯೊಂದು ಗ್ರಾಮಕ್ಕೂ ತೆರಳಿ, ಪ್ರತಿ ಮನೆ ಮನೆಗೂ ತಲುಪಿಸಲಿದ್ದಾರೆ ಎಂದು ವಿವರಿಸಿದರು.

ಅಂದು ಬೆಳಗ್ಗೆ 11ಕ್ಕೆ ಟಿವಿ ವಾಹಿನಿಗಳಲ್ಲಿ ಆ ಕಾರ್ಯಕ್ರಮ ಪ್ರಸಾರವಾಗಲಿದ್ದು, ಎಲ್ಲರೂ ಅದನ್ನು ವೀಕ್ಷಿಸಬೇಕು. ಅಲ್ಲದೆ, ಅಂದು ಸಂಜೆ ಉತ್ತರ ದಿಕ್ಕಿಗೆ ಮುಖ ಮಾಡಿ ಪ್ರತಿಯೊಬ್ಬರೂ ಒಂದೊಂದು ಹಣತೆಯಿಂದ ದೀಪ ಬೆಳಗುವ ಮೂಲಕ ಇತಿಹಾಸ ನಿರ್ಮಿಸಬೇಕೆಂದು ಕೋರಿದರು. ಪ್ರಾಣ ಪ್ರತಿಷ್ಠಾಪನೆಯ ದಿನದಂದು ಪ್ರತಿ ಗ್ರಾಮವೂ ಅಯೋಧ್ಯೆ ಆಗಲಿದೆ. ಪ್ರತಿ ಗ್ರಾಮದ ಮಂದಿರಗಳಲ್ಲಿ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆಯ ದೃಶ್ಯವನ್ನು ಎಲ್ಲ ರಾಮ ಭಕ್ತರು ಸೇರಿ ಪೂಜೆ, ಸಂಕೀರ್ತನೆ, ಆರತಿಗಳೊಂದಿಗೆ ವೀಕ್ಷಿಸಲಿದ್ದಾರೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಧುಶಂಕರ್, ಸವಿತಾ ಘಾಟ್ಕೆ, ರಾಧಾಕೃಷ್ಣ, ಜಗದೀಶ್ ಹೆಬ್ಬಾರ್ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನ; ವಿಜಯ ವಿಠಲ ಶಾಲೆ ವಿದ್ಯಾರ್ಥಿನಿ ಉತ್ತಮ ಸಾಧನೆ

ಮೈಸೂರು, ಡಿ.29– ಕರ್ನಾಟಕ ರಾಜ್ಯ ಶಿಕ್ಷಣ



ಇಲಾಖೆ 'ತ್ಯಾಜ್ಯವನ್ನು ಬೇರ್ಪಡಿಸುವುದು ಇಂದಿನ ಸಂದರ್ಭಕ್ಕೆ ಅಗತ್ಯವಾಗಿದೆ' ಶೀರ್ಷಿಕೆಯಡಿಯಲ್ಲಿ ಆಯೋಜಿಸಿದ್ದ 'ರಾಜ್ಯ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ' ಮೈಸೂರಿನ ವಿಜಯ ವಿಠಲ ವಿದ್ಯಾ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ಎನ್.ಅಮೃತಾ, 'ಸ್ಮಾರ್ಟ್ ವೇಸ್ಟ್ ಸೆಗ್ರೇಗೇಟರ್, ವೇಸ್ಟ್ ಟು ವೆಲ್ತ್' ವಿಭಾಗದಲ್ಲಿ ಆಕರ್ಷಕ ಮಾದರಿ ಪ್ರದರ್ಶಿಸಿ, ಅತ್ಯುತ್ತಮ ಪ್ರದರ್ಶನ ನೀಡಿದ 10 ವಿದ್ಯಾರ್ಥಿಗಳಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ. ಈ ಮೂಲಕ ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಜನವರಿ 28ರಿಂದ ಫೆಬ್ರವರಿ 1ರವರೆಗೆ ನಡೆಯಲಿರುವ 'ದಕ್ಷಿಣ ಭಾರತ ವಿಜ್ಞಾನ ಮೇಳ – 2024'ಕ್ಕೆ ಆಯ್ಕೆಯಾಗಿದ್ದಾರೆ.

ವಿದ್ಯಾರ್ಥಿಗಳಿಗೆ ಪುಸ್ತಕ ನಿರ್ವಹಣೆ ಸಂಬಂಧ ಗ್ರಂಥಪಾಲಕರು ನೆರವಾಗಬೇಕು



ಮೈಸೂರು, ಡಿ.29(ಎಸ್‌ಪಿಎನ್)– ವಿದ್ಯಾರ್ಥಿಗಳಿಗೆ ಗ್ರಂಥಾಲಯದಲ್ಲಿ ಪುಸ್ತಕಗಳು ಸುಲಭವಾಗಿ ಸಿಗುವಂತಾಗಲು ಗ್ರಂಥಪಾಲಕರು ಸಹಕರಿಸಬೇಕು ಎಂದು ತಲಕಾಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ(ಪ್ರಭಾರ) ಹಾಗೂ ಗ್ರಂಥಪಾಲಕ ಡಾ.ಎನ್.ವಸಂತ ರಾಜು ಅಭಿಪ್ರಾಯಪಟ್ಟರು.

ಮೈಸೂರು ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಆವರಣ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಹಾಗೂ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ(ಮುಲಿಸಾ)ದ ಸಹಯೋಗದಲ್ಲಿ ನಡೆದ ವಿಶೇಷ ಉಪನ್ಯಾಸ ಮಾಲಿಕೆ–1ರ 'ಕಾಲೇಜು ಗ್ರಂಥಾಲಯಗಳಲ್ಲಿ ಕರ್ತವ್ಯ, ನಿರ್ವಹಣೆ ಅವಕಾಶಗಳು ಮತ್ತು ಸವಾಲುಗಳು' ವಿಷಯ ಕುರಿತು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಗ್ರಂಥಾಲಯಗಳಿಗೆ ಬರುವ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಮಾತಿದೆ. ಆದರೆ, ಕಾಲೇಜು ವಿದ್ಯಾರ್ಥಿಗಳಿಗೆ ಪುಸ್ತಕಗಳು, ಸಾಮಾಜಿಕ ಜಾಲತಾಣಗಳ ನಿರ್ವಹಣೆ ಕುರಿತು ಗ್ರಂಥಾಪಾಲಕರು ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು. ಸ್ನಾತಕೋತ್ತರ ವಿಭಾಗದ ಗ್ರಂಥಾಲಯ ವಿದ್ಯಾರ್ಥಿಗಳು ಗ್ರಂಥಾಲಯ ನಿರ್ವಹಣೆ ಕುರಿತು ಮುಖ್ಯವಾಗಿ ತಿಳಿದುಕೊಳ್ಳಬೇಕಾಗಿದೆ. ಕಾಲಕಾಲಕ್ಕೆ ರಾಜ್ಯ ಸರ್ಕಾರ ಹೊರಡಿಸುವ ಸುತ್ತೋಲೆಗಳ ಬಗ್ಗೆ ಗಮನಹರಿಸಬೇಕು ಹಾಗೂ ಕಾಲೇಜು ಗ್ರಂಥಾಲಯ ವ್ಯವಸ್ಥಾಪನಾ ಮಂಡಳಿಯ ಸೂಚನೆಗಳಿಗೆ ತಕ್ಕಂತೆ ನಡೆದುಕೊಳ್ಳಬೇಕು. ಗ್ರಂಥಾಲಯದ ನಿರ್ವಹಣೆ ಕುರಿತು ವಿದ್ಯಾರ್ಥಿಗಳು ಗ್ರಹಿಸಬೇಕು. ಆಗ ಮಾತ್ರ ಈ ಕ್ಷೇತ್ರದ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯ ಎಂದು ಹೇಳಿದರು.

ಈ ವೇಳೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ ಮತ್ತು ಅಧ್ಯಕ್ಷ ಪ್ರೊ.ಎಂ.ಚಂದ್ರಶೇಖರ, ಶಿಕ್ಷಕ ಸಲಹೆಗಾರರ ಬಿ.ನಿವೇದಿತಾ, ಕಾರ್ಯದರ್ಶಿ ಸಿ.ವಿ.ಮನೋಜ್ ಕುಮಾರ್ ಉಪಸ್ಥಿತರಿದ್ದರು.



ಪ್ರಮುಖ ಘಟನಾವಳಿ

(ನಿನ್ನೆಯ ಸಂಚಿಕೆಯಿಂದ)

ಜುಲೈ




ಜು. 1 ಮೈಸೂರು ಸಾಹಿತ್ಯೋತ್ಸವಕ್ಕೆ ಪ್ರಮೋದಾದೇವಿ ಒಡೆಯರ್ ಚಾಲನೆ
ಜು. 2 ಐಷರ್ ವಾಹನ–ಸ್ವಿಫ್ಟ್ ಕಾರು ಡಿಕ್ಕಿ: ಮೈಸೂರಿನ ಹೋಟೆಲ್ ಮ್ಯಾನೇಜರ್ ಸಜೀವ ದಹನ
ಜು. 4 ಯಾವ ಷರತ್ತಿಲ್ಲದೆ ಗ್ಯಾರಂಟಿ ಯೋಜನೆಗಳ ಜಾರಿಗೆ ಆಗ್ರಹಿಸಿ ಸದನದ ಒಳಗೆ–ಹೊರಗೆ ಬಿಜೆಪಿ ಹೋರಾಟ
ಜು. 5 ಕುಮಾರಣ್ಣನ ಕೈಯ್ಯಲ್ಲಿದೆ ಭ್ರಷ್ಟಾಚಾರದ ಪೆನ್‌ಡ್ರೈವ್
ಜು. 5 ಕೊಡಗಲ್ಲಿ ಮುಂದುವರೆಗೆ ಮಳೆ, ಗಾಳಿ ಆರ್ಭಟ
ಜು. 6 ಅ.15 ರಿಂದ 24ರವರೆಗೆ ಮೈಸೂರು ದಸರಾ
ಜು. 6 ಮೈಶುಗರ್ ಕಾರ್ಯಾರಂಭ, ಕಬ್ಬು ಅರೆಯುವ ಕಾರ್ಯಕ್ಕೆ ಸಕ್ಕರೆ ಸಚಿವ ಶಿವಾನಂದ ಪಾಟೀಲ್ ಚಾಲನೆ
ಜು. 7 ಸಿದ್ದರಾಮಯ್ಯರ ಗ್ಯಾರಂಟಿ ಬಜೆಟ್ ಮಂಡನೆ
ಜು. 7 ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರ ರಚನೆ



ಜೈನಮುನಿ

ಜು. 8 ಜೈನಮುನಿಯ ಭೀಕರ ಹತ್ಯೆ
ಜು. 8 15ಕ್ಕೂ ಅಧಿಕ ಮಹಿಳೆಯರ ಮದುವೆಯಾದ ಮಹಾಖತರ್ನಾಕ್ ನಕಲಿ ವೈದ್ಯ
ಜು. 10 ಚಾಮುಂಡೇಶ್ವರಿ ವರ್ಧಂತಿ ಉತ್ಸವ, ಅಸಂಖ್ಯಾತ ಭಕ್ತರಿಗೆ ದೇವಿಯ ದರ್ಶನ ಭಾಗ್ಯ.
ಜು. 10 ಮುಕ್ತ ವಿವಿ 250 ಕೋಟಿ ಹಗರಣ: ಸಿಬಿಐ ತನಿಖೆ ಆರಂಭ
ಜು. 11 ತಿ.ನರಸೀಪುರ: ಯುವ ಬ್ರಿಗೇಡ್ ಕಾರ್ಯಕರ್ತನ ಕೊಲೆ ಪ್ರಕರಣ: 6 ಆರೋಪಿಗಳ ಬಂಧನ
ಜು. 13 ಬಿಜೆಪಿ ಆಡಳಿತಾವಧಿಯ ಎಲ್ಲಾ ಹಗರಣಗಳು ಎಸ್‌ಐಟಿ ತನಿಖೆ
ಜು. 14 ಶ್ರೀಹರಿಕೋಟಾ : ಚಂದ್ರಯಾನ–3 ಯಶಸ್ವಿ ಉಡಾವಣೆ
ಜು. 17 ಪ್ರಧಾನಿ ಮೋದಿ ಹಿಮ್ಮೆಟ್ಟಿಸಲು ಮಹಾಘಟಬಂಧನ್: ಬೆಂಗಳೂರಲ್ಲಿ ಕಸರತ್ತು
ಜು. 19 ವಿಧಾನಸಭೆಯಲ್ಲಿ ಸ್ಪೀಕರ್ ಪೀಠಕ್ಕೆ ಅಗೌರವ :ಬಿಜೆಪಿಯ ಹತ್ತು ಶಾಸಕರು ಅಮಾನತು
ಜು. 20 ಬೆಂಗಳೂರಲ್ಲಿ ಶಂಕಿತ ಉಗ್ರರ ಸೆರೆ :ಮೈಸೂರಲ್ಲಿ ಕಟ್ಟೆಚ್ಚರ
ಜು. 22 ಹಾರಂಗಿ ಜಲಾಶಯ ಭರ್ತಿ :5000 ಕ್ಯುಸೆಕ್ ನೀರು ಬಿಡುಗಡೆ
ಜು. 22 ಮುಖ್ಯಮಂತ್ರಿ ಮಾಡೋದು ಗೊತ್ತು, ಕೆಳಗೆ ಇಳಿಸೋದು ಗೊತ್ತು: ಬಿ.ಕೆ.ಹರಿಪ್ರಸಾದ್
ಜು. 23 ಕೊಡಗಲ್ಲಿ ಮುಂದುವರೆದ ವರುಣಾರ್ಭಟ
ಜು. 24 ಸರ್ಕಾರ ಪತನಕ್ಕೆ ಸಿಂಗಾಪುರದಲ್ಲಿ ಸಂಚು: ಡಿ.ಕೆ. ಶಿವಕುಮಾರ್
ಜು. 25 ಲೋಕಸಭಾ ಚುನಾವಣೆಯಲ್ಲಿ ಯಾವ ಪಕ್ಷದೊಂದಿಗೂ ಮೈತ್ರಿ ಇಲ್ಲ: ಹೆಚ್.ಡಿ. ದೇವೇಗೌಡ
ಜು. 28 ಬಿಜೆಪಿ ಆಡಳಿತಾವಧಿಯಲ್ಲಿ ಜಾರಿಯಾದ ರಾಷ್ಟ್ರೀಯ ಶಿಕ್ಷಣ ನೀತಿ ರದ್ದು
ಜು. 29 ಶ್ರೀರಂಗಪಟ್ಟಣ : ನಾಲೆಗೆ ಕಾರು ಉರುಳಿ ನಾಲ್ವರು ಮಹಿಳೆಯರು ಜಲಸಮಾಧಿ
ಜು. 30 ಮೈಸೂರು : ಐಷಾರಾಮಿ ಕಾರುಗಳ ಕದ್ದಿದ್ದ ಖದೀಮನ ಸೆರೆ
ಜು. 30 ಮೈಸೂರಲ್ಲಿ ಡ್ರೋನ್‌ಗಳ ರಾಜಾರೋಷ ಹಾರಾಟ
ಜು. 31 ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಹೃದಯಾಘಾತದಿಂದ ಡಾ.ಕೆ.ಭೈರಪ್ಪ ನಿಧನ

ಆಗಸ್ಟ್



ಇಮ್ರಾನ್‌ಖಾನ್



ಸ್ಪಂದನಾ



ಸಿಎಂ ಸಿದ್ದರಾಮಯ್ಯ ಮತ್ತು ಪ್ರಧಾನಿ ಮೋದಿ

ಆ. 1 ಮೈಸೂರಲ್ಲಿ ಅಗ್ನಿವೀರ್ ಸೇನಾ ನೇಮಕಾತಿ
ಆ. 2 ಕರ್ನಾಟಕದಲ್ಲಿ ನಾವು 20 ಸ್ಥಾನ ಗೆಲ್ಲಲೇಬೇಕು: ಡಿ.ಕೆ. ಶಿವಕುಮಾರ್
ಆ. 2 ಪುಟ್ಟಪರ್ತಿಯ ಖತರ್ನಾಕ್ ಖದೀಮನ ಬಂಧನ
ಆ. 3 ಪ್ರಧಾನಿ ಮೋದಿ ಭೇಟಿ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ
ಆ. 4 ಮಾನನಷ್ಟ ಮೊಕದ್ದಮೆ ಪ್ರಕರಣದಲ್ಲಿ ರಾಹುಲ್ ಗಾಂಧಿಗೆ ಬಿಗ್ ರಿಲೀಫ್
ಆ. 4 ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ಕಟ್ಟುನಿಟ್ಟಿನ ಕ್ರಮ: ಕೃಷ್ಣಭೈರೇಗೌಡ
ಆ. 5 ಮೂರನೇ ಗ್ಯಾರಂಟಿ ಗೃಹಜ್ಯೋತಿಗೆ ಸಿಎಂ ಸಿದ್ದರಾಮಯ್ಯ ಅಧಿಕೃತ ಚಾಲನೆ
ಆ. 5 ಮೈಸೂರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ
ಆ. 5 ತೋಷಖಾನಾ ಭ್ರಷ್ಟಾಚಾರ ಪ್ರಕರಣ: ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್‌ಗೆ 3 ವರ್ಷ ಜೈಲು
ಆ. 6 ರಾಜ್ಯದ 13 ಸೇರಿ ದೇಶದ 508 ರೈಲು ನಿಲ್ದಾಣಗಳ ನವೀಕರಣಕ್ಕೆ ಚಾಲನೆ: ಪ್ರಧಾನಿ ಮೋದಿಯವರಿಂದ ವರ್ಚ್ಯುಯಲ್ ಮೂಲಕ ಅಡಿಗಲ್ಲು
ಆ. 6 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರ 'ಲೈಫ್ ಅಂಡ್ ಟೈಮ್ಸ್' ಕೃತಿ ಲೋಕಾರ್ಪಣೆ
ಆ. 7 ಬ್ಯಾಂಕಾಕ್‌ನಲ್ಲಿ ನಟ ವಿಜಯರಾಘವೇಂದ್ರರ ಪತ್ನಿ ಸ್ಪಂದನಾ ಹೃದಯಾಘಾತದಿಂದ ಸಾವು
ಆ. 8 ಸರ್ಕಾರಿ ಭೂಮಿ ಸರ್ಕಾರದ ವಶಕ್ಕೆ ಕಂದಾಯ ಸಚಿವ ಕೃಷ್ಣಭೈರೇಗೌಡ ಖಡಕ್ ನುಡಿ
ಆ. 9 ನಿರುದ್ಯೋಗ ನಿವಾರಣೆ, ವಲಸೆ ತಡೆಯುವುದು, ಕೃಷಿಯನ್ನೇ ಪ್ರಮುಖ ಆದಾಯ ಮೂಲವಾಗಿಸಲು ಸಹಕಾರ ಕೃಷಿ ಪದ್ಧತಿ ಜಾರಿ: ಡಾ.ಹೆಚ್.ಸಿ.ಮಹದೇವಪ್ಪ
ಆ. 10 ವಿಶ್ವಾಸಮತ ಗೆದ್ದ ಪ್ರಧಾನಿ ಮೋದಿ: ಮಣಿಪುರ ಹಿಂಸಾಚಾರ ಹಿನ್ನೆಲೆ ವಿಪಕ್ಷಗಳು ಮಂಡಿಸಿದ್ದ ಅವಿಶ್ವಾಸ ನಿರ್ಣಯ
ಆ. 11 ಬೆಂಗಳೂರು–ಮೈಸೂರು ಉಪನಗರ ರೈಲು ಯೋಜನೆ ಜಾರಿ: ಸಚಿವ ಎಂ.ಬಿ. ಪಾಟೀಲ್
ಆ. 13 ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಒಂದೇ ರಾತ್ರಿ ಎರಡು ಕಡೆ ದರೋಡೆ
ಆ. 16 ಶ್ರೀಲಂಕಾದ ಮಾಜಿ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್‌ರಿಂದ ಚಾ.ನಗರ ಬಳಿ ಬೃಹತ್ ಪಾನೀಯ, ಚಾಕೋಲೇಟ್ ಘಟಕ ಸ್ಥಾಪನೆ
ಆ. 17 ಕೈಕೊಟ್ಟ ಮುಂಗಾರು : ರಾಜ್ಯದಲ್ಲಿ ಬರದ ಭೀತಿ
ಆ. 20 ಮಂಡ್ಯ : ಮೈಸೂರಿನ ಇಬ್ಬರು ಕೃಷಿ ಅಧಿಕಾರಿಗಳು ಸಿಐಡಿ ವಶಕ್ಕೆ
ಆ. 21 ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಮಂಡ್ಯದಲ್ಲಿ ಬಿಜೆಪಿ ಭಾರಿ ಪ್ರತಿಭಟನೆ
ಆ. 21 ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ಮಡಿಕೇರಿಯಲ್ಲಿ ಧರೆಗುರುಳಿದ ಜನರಲ್ ತಿಮ್ಮಯ್ಯನವರ ಪ್ರತಿಮೆ
ಆ. 23 ಚಂದ್ರಯಾನ–3 ಯಶಸ್ವಿ: ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಮ್ ಲ್ಯಾಂಡರ್ ಸುರಕ್ಷಿತ ಲ್ಯಾಂಡಿಂಗ್
ಆ. 24 ಮೈಸೂರಲ್ಲಿ 3200 ಉದ್ಯೋಗ ಸೃಷ್ಟಿಯ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆ : ಒಡಂಬಡಿಕೆಗೆ ಸಹಿ
ಆ. 25 ಚಾರ್ಲಿ 777ಗೆ ರಾಷ್ಟ್ರೀಯ ಪ್ರಶಸ್ತಿ



ಆ. 26 ವಿಜ್ಞಾನಿಗಳ ಅಭಿನಂದಿಸಲು ಬೆಂಗಳೂರಿನ ಇಸ್ರೋಗೆ ಪ್ರಧಾನಿ ಮೋದಿ ಭೇಟಿ
ಆ. 26 ಚಂದ್ರಯಾನ–3ರ ಲ್ಯಾಂಡಿಂಗ್ 'ಶಿವಶಕ್ತಿ' ಸ್ಥಳ, ಆ. 23 ರಾಷ್ಟ್ರೀಯ ಬಾಹ್ಯಾಕಾಶ ದಿನ
ಆ. 27 ಮೈಸೂರಿನ ಚಾಮುಂಡಿಪುರಂನಲ್ಲಿ ಒಂದೇ ಕುಟುಂಬದ ನಾಲ್ವರು ನಿಗೂಢ ಸಾವು
ಆ. 28 ಮೊದಲು ನಮ್ಮ ರೈತರ ಬೆಳೆಗೆ ನೀರು ಬಿಡಿ; ಮೈಸೂರಿನಲ್ಲಿ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸಿಎಂ ಕಟ್ಟುನಿಟ್ಟಿನ ಆದೇಶ



ಆ. 29 ದಸರಾ ಉದ್ಘಾಟನೆಗೆ ಸಂಗೀತ ನಿರ್ದೇಶಕ ಹಂಸಲೇಖ ಆಯ್ಕೆ: ಸಿಎಂ ಸಿದ್ದರಾಮಯ್ಯ ಘೋಷಣೆ
ಆ. 30 ಮನೆ ಯಜಮಾನಿ ಈಗ ಗೃಹಲಕ್ಷ್ಮಿ, ಮೈಸೂರಲ್ಲಿ ಯೋಜನೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಧ್ಯುಕ್ತ ಚಾಲನೆ
ಆ. 31 25 ಸಾವಿರ ಕ್ಯುಸೆಕ್ ನೀರಿಗೆ ತಮಿಳುನಾಡು ಪಟ್ಟು
ಆ. 31 ಹಾಸನ : ಆನೆ ದಾಳಿಗೆ ಅರವಳಿಕೆ ತಜ್ಞ ವೆಂಕಟೇಶ್ ಬಲಿ

ಸೆಪ್ಟೆಂಬರ್







ಸೆ. 1 ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸಿ ಗಜಪಯಣಕ್ಕೆ ಚಾಲನೆ; ಸುರಕ್ಷಿತವಾಗಿ ಮೈಸೂರು ತಲುಪಿದ ಗಜಪಡೆ
ಸೆ. 2 ಶ್ರೀಹರಿಕೋಟ : ಸೂರ್ಯನತ್ತ ಆದಿತ್ಯ ಎಲ್–1 ನೌಕೆ ಯಶಸ್ವಿ ಉಡಾವಣೆ
ಸೆ. 4 ಮಡಿಕೇರಿ: ಪುಂಡಾನೆ ತುಳಿದು ಅರಣ್ಯ ಸಿಬ್ಬಂದಿ ಸಾವು : ಹುಲಿಗೆ ಬಾಲಕ ಬಲಿ
ಸೆ. 5 ಅರಮನೆ ಅಂಗಳಕ್ಕೆ ದಸರಾ ಗಜಪಡೆ ಆಗಮನ
ಸೆ. 7 ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ, ಸಭೆಯಲ್ಲಿ ತೀರ್ಮಾನ
ಸೆ. 8 ಖ್ಯಾತ ವ್ಯಂಗ್ಯಚಿತ್ರಕಾರ ಅಜಿತ್ ನಿನಾನ್ ನಿಧನ
ಸೆ. 9 ಜಿ–20 ಶೃಂಗಸಭೆ : ದೆಹಲಿ ಘೋಷಣೆಗೆ ವಿಶ್ವನಾಯಕರ ಒಕ್ಕೊರಲ ಸಹಮತ
ಸೆ. 10 ಜಿ–20 ಶೃಂಗಸಭೆಗೆ ತೆರೆ : ಭದ್ರತಾ ಮಂಡಳಿ ಕಾಯಂ ಸ್ಥಾನಕ್ಕೆ ಆಗ್ರಹ
ಸೆ. 11 ಅದೃಷ್ಟ, ಜನರ ಆಶೀರ್ವಾದದಿಂದ ರಾಜಕೀಯದಲ್ಲಿ ನಾನು ಮೇಲೆ ಬಂದೆ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ನೂತನ ಶಾಖಾ ಮಠದ ಕಟ್ಟಡ ಲೋಕಾರ್ಪಣೆ ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ ಬಿಚ್ಚುನುಡಿ
ಸೆ. 13 ರಾಜ್ಯದಲ್ಲಿ 195 ತಾಲೂಕು ಬರಪೀಡಿತ
ಸೆ. 13 ಕಾವೇರಿ ನದಿ ನೀರು ಬಿಕ್ಕಟ್ಟು : ನಮ್ಮಲ್ಲೇ ನೀರಿಲ್ಲ... ಸರ್ವಪಕ್ಷ ಸಭೆಯ ನಂತರ ಸಿಎಂ ಸಿದ್ದರಾಮಯ್ಯ ವಿವರಣೆ
ಸೆ. 14 ರಾಜ್ಯದಲ್ಲಿ ಬರಗಾಲ : ಸೂಕ್ತ ಪರಿಹಾರ ಕಲ್ಪಿಸಲು ಕೇಂದ್ರಕ್ಕೆ ಮನವಿ
ಸೆ. 15 ಮೈಸೂರಿನಿಂದ ಮುರುಡೇಶ್ವರಕ್ಕೆ ರೈಲು ಸೇವೆ ಆರಂಭ : ಪ್ರತಾಪ್ ಸಿಂಹ
ಸೆ. 16 ಬೆಂಗಳೂರು : ಎನ್‌ಡಿಎ ಮೈತ್ರಿಕೂಟಕ್ಕೆ ಜೆಡಿಎಸ್ ಸೇರ್ಪಡೆ
ಸೆ. 17 ಮೋದಿ ಅವರಿಂದ 13,000 ಕೋಟಿ ರೂ.ಗಳ ಪಿಎಂ ವಿಶ್ವಕರ್ಮ ಯೋಜನೆಗೆ ಚಾಲನೆ
ಸೆ. 17 ಕೊಲಂಬೋ : ಭಾರತ ಏಷ್ಯಾ ಕಪ್ ಚಾಂಪಿಯನ್
ಸೆ. 19 ಹೊಸ ಸಂಸತ್ ಭವನದಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡನೆ
ಸೆ. 19 ರಾಜ್ಯದ 3 ಹೊಯ್ಸಳ ದೇವಾಲಯಗಳು ಯುನೆಸ್ಕೋ ವಿಶ್ವ ಪರಂಪರೆ ಪಟ್ಟಿಗೆ ಸೇರ್ಪಡೆ
ಸೆ. 20 ಲೋಕಸಭೆಯಲ್ಲಿ ಐತಿಹಾಸಿಕ ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರ
ಸೆ. 21 ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕೃತರಾದ ಡಾ. ಕೆ.ಬಿ. ಗಣಪತಿ ಅವರಿಗೆ ಸನ್ಮಾನ



ವಹೀದಾ ರೆಹಮಾನ್

ಸೆ. 23 ಕಾವೇರಿಗಾಗಿ ಮಂಡ್ಯ ಬಂದ್ ಸಂಪೂರ್ಣ ಯಶಸ್ವಿ
ಸೆ. 26 ಕಾವೇರಿ ವಿವಾದ :ಬೆಂಗಳೂರು ಬಂದ್ ಶಾಂತಿಯುತ ಯಶಸ್ವಿ
ಸೆ. 26 ವಹೀದಾ ರೆಹಮಾನ್‌ಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ
ಸೆ. 27 ನಾಗಮಂಗಲ : ಬೆಳ್ಳೂರು ಕ್ರಾಸ್ ಬಳಿ ಭೀಕರ ರಸ್ತೆ ಅಪಘಾತ: ನಾಲ್ವರು ದುರ್ಮರಣ
ಸೆ. 29 ಕರ್ನಾಟಕ ಬಂದ್: ಕಾವೇರಿ ಕಣಿವೆ ಸ್ತಬ್ಧ
ಸೆ. 30 ಸರಗೂರು ಬಳಿ ಮೂವರು ಜಲಸಮಾಧಿ

ಅಕ್ಟೋಬರ್



ವಿ.ಶ್ರೀನಿವಾಸಪ್ರಸಾದ್



ಎಸ್.ಎಲ್.ಭೈರಪ್ಪ



ಕೆ.ಬಿ.ಗಣಪತಿ



ಡಾ.ಪದ್ಮಮೂರ್ತಿ

ಅ. 1 ರಾಮನಗರ : ಬಿಜೆಪಿ ಜೊತೆ ಮೈತ್ರಿಗೆ ಜೆಡಿಎಸ್ ಅಸ್ತು
ಅ. 3 ಈ ಬಾರಿ ಪ್ರಾಯೋಜಕತ್ವ ದಸರಾ
ಅ. 3 ಸಂಸದ ವಿ.ಶ್ರೀನಿವಾಸ್ ರಾಜಕೀಯ ನಿವೃತ್ತಿ ಘೋಷಣೆ
ಅ. 4 ಲೋಕಸಭೆಗೂ ಮುನ್ನ ಜಾತಿಗಣತಿ ವರದಿ ಬಿಡುಗಡೆ
ಅ. 4 ಹೆಚ್‌ಎಎಲ್‌ನಿಂದ ಎಲ್‌ಸಿಎ ತರಬೇತಿ ವಿಮಾನ ವಾಯುಸೇನೆಗೆ ಹಸ್ತಾಂತರ
ಅ. 4 ಡಾ. ಎಸ್.ಎಲ್. ಭೈರಪ್ಪ ಅವರಿಗೆ ಅಮೃತಕೀರ್ತಿ ಪ್ರಶಸ್ತಿ ಪ್ರದಾನ
ಅ. 5 ಬರ ಪರಿಸ್ಥಿತಿ ವಾಸ್ತವಾಂಶ ವಿವರಿಸಿ: ರೈತರ ಹಿತ ಕಾಪಾಡುವಂತೆ ಸಿದ್ದರಾಮಯ್ಯ ಸಲಹೆ
ಅ. 6 ರಾಜ್ಯದಾದ್ಯಂತ ಹೊಸದಾಗಿ 188 ಇಂದಿರಾ ಕ್ಯಾಂಟೀನ್ ಆರಂಭ
ಅ. 6 ಯುವ ಸಂಭ್ರಮಕ್ಕೆ ತಾರಾ ದಂಪತಿ ವಸಿಷ್ಠ ಸಿಂಹ, ಹರಿಪ್ರಿಯರಿಂದ ಚಾಲನೆ
ಅ. 7 ಜೆರುಸಲೇಂ: ಹಮಾಸ್ ಮೇಲೆ ಯುದ್ಧ ಸಾರಿದ ಇಸ್ರೇಲ್; 200ಕ್ಕೂ ಅಧಿಕ ಉಗ್ರರು ಬಲಿ
ಅ. 7 ಆನೇಕಲ್ ಬಳಿ ಪಟಾಕಿ ಗೋಡೌನ್‌ಗೆ ಬೆಂಕಿ :13ಕ್ಕೂ ಅಧಿಕ ಮಂದಿ ಸಜೀವ ದಹನ
ಅ. 8 ಬಿಗ್‌ಬಾಸ್ 10ನೇ ಆವೃತ್ತಿ ಆರಂಭ
ಅ. 8 ಮಂಡ್ಯ ಮೈಮುಲ್ ಮೆಗಾ ಡೈರಿಗೆ ಬೆಂಕಿ
ಅ. 10 ಮಹಿಷಾ ದಸರಾ, ಚಲೋ ಚಾಮುಂಡಿಬೆಟ್ಟಕ್ಕೆ ಅನುಮತಿ ನಿರಾಕರಣೆ
ಅ. 10 ಮೈಸೂರಿನ ಸಿಎಂ ಸಿದ್ದರಾಮಯ್ಯರ ಮನೆ ಮೇಲೆ ಕಲ್ಲು ತೂರಾಟ, ಕಿಟಕಿ ಗಾಜು ಪುಡಿ
ಅ. 11 ಮೈಸೂರು ದಸರಾ ಮಹೋತ್ಸವಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ದಸರಾ ಉದ್ಘಾಟಕರಾದ ಹಂಸಲೇಖರಿಗೆ ಮೈಸೂರು ಜಿಲ್ಲಾಡಳಿತದಿಂದ ವಿಧ್ಯುಕ್ತ ಆಹ್ವಾನ
ಅ. 13 ಮೈಸೂರಲ್ಲಿ ಅದ್ಧೂರಿಯಾಗಿ ನೆರವೇರಿದ ಮಹಿಷಾ ದಸರಾ
ಅ. 13 ಬೆಂಗಳೂರು: ಮಾಜಿ ಕಾರ್ಪೋರೇಟರ್ ಮನೆಗಳ ಮೇಲೆ ಐಟಿ ದಾಳಿ : ಮಂಚದಡಿ ಸಿಕ್ತು 42 ಕೋಟಿ ನಗದು
ಅ. 15 ಮೈಸೂರು ದಸರಾಗೆ ನಾದಬ್ರಹ್ಮ ಹಂಸಲೇಖರಿಂದ ಚಾಲನೆ
ಅ. 15 ಮೈಸೂರು ಅರಮನೆಯಲ್ಲಿ ಖಾಸಗಿ ದರ್ಬಾರ್ ಆರಂಭ
ಅ. 15 ಸಂಗೀತ ಸಾಧಕಿ ಡಾ. ಪದ್ಮಾಮೂರ್ತಿಗೆ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ
ಅ. 16 ಅದ್ದೂರಿ ಶ್ರೀರಂಗಪಟ್ಟಣ ದಸರಾ
ಅ. 17 ಬೆಂಗಳೂರು : ರಾಜ್ಯದ ಆಡಳಿತದಲ್ಲಿ ಕನ್ನಡಕ್ಕೆ ಆದ್ಯತೆ
ಅ. 17 ಮಡಿಕೇರಿ : ಸಾವಿರಾರು ಭಕ್ತರ ಹರ್ಷೋದ್ಗಾರದ ನಡುವೆ ಕಾವೇರಿ ತೀರ್ಥೋದ್ಭವ
ಅ. 18 ಮೈಸೂರು ವಿವಿಯಿಂದ ಡಾ. ಪಿ.ಎಸ್. ಶಂಕರ್, ಕೆ.ಬಿ. ಗಣಪತಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ
ಅ. 19 ಆದಾಯಕ್ಕೂ ಮೀರಿ ಆಸ್ತಿ ಸಂಪಾದನೆ ಆರೋಪ : ಡಿಕೆಶಿ ವಿರುದ್ಧ ಸಿಬಿಐ ತನಿಖೆ
ಅ. 19 ನಂಜನಗೂಡು : ಕಾಲು ಜಾರಿ ನಾಲೆಯಲ್ಲಿ ದಂಪತಿ ಜಲಸಮಾಧಿ
ಅ. 20 ನಮ್ಮ ಮೈಸೂರಿಗೂ ಮೆಟ್ರೋ, ಪ್ರಧಾನಿ ಮೋದಿ ಘೋಷಣೆ
ಅ. 21 ಹುತಾತ್ಮ ಪೊಲೀಸರ ಸಮೂಹ ವಿಮಾ ಮೊತ್ತ 50 ಲಕ್ಷಕ್ಕೆ ಏರಿಕೆ: ಸಿದ್ದರಾಮಯ್ಯ ಘೋಷಣೆ
ಅ. 21 ಅಖಿಲ ಕೊಡವ ಸಮಾಜದ ಮಾಜಿ ಅಧ್ಯಕ್ಷ ಮಾತಂಡ ಮೊಣ್ಣಪ್ಪ ನಿಧನ
ಅ. 22 ದಸರಾ ಮಹೋತ್ಸವಕ್ಕೆ ಹರಿದು ಬಂದ ಜನಸಾಗರ, ಟ್ರಾಫಿಕ್ ಜಾಮ್‌ನಿಂದ ಪ್ರವಾಸಿಗರ ಪರದಾಟ
ಅ. 22 ಮೈಸೂರಿನಲ್ಲಿ ಪೂರ್ವಾಭ್ಯಾಸದ ವೈಮಾನಿಕ ಪ್ರದರ್ಶನ, ಬಾನಂಗಳದಲ್ಲಿ ಲೋಹದ ಹಕ್ಕಿಗಳ ಚಿತ್ತಾರ–ಚಮತ್ಕಾರ
ಅ. 24 ಅದ್ಧೂರಿ ಜಂಬೂ ಸವಾರಿ, ತಾಯಿ ಚಾಮುಂಡೇಶ್ವರಿ ಉತ್ಸವಮೂರ್ತಿ ಕಣ್ತುಂಬಿಕೊಂಡ ಲಕ್ಷಾಂತರ ಮಂದಿ
ಅ. 24 ರೋಚಕ ಸಾಹಸದೊಂದಿಗೆ ಕಣ್ಮನ ತುಂಬಿದ ಪಂಜಿನ ಕವಾಯತು
ಅ. 25 ಮುಂದಿನ ವಿಜಯದಶಮಿ ವೇಳೆಗೆ ನಾನೇ ಮುಖ್ಯಮಂತ್ರಿಯಾಗಿರ್ತೇನೆ...! : ಡಿಕೆಶಿ
ಅ. 25 ಲಾಲ್‌ಬಾಗ್ ಮಾದರಿಯ ಮೈಸೂರಿನ ಲಿಂಗಾಂಬುದಿ ಸಸ್ಯಶಾಸ್ತ್ರೀಯ ತೋಟ ಸಿಎಂ ಸಿದ್ದರಾಮಯ್ಯರಿಂದ ಲೋಕಾರ್ಪಣೆ
ಅ. 26 ಚಾಮುಂಡಿಬೆಟ್ಟದಲ್ಲಿ ವಿಜೃಂಭಣೆಯಿಂದ ನೆರವೇರಿದ ಚಾಮುಂಡೇಶ್ವರಿ ರಥೋತ್ಸವ
ಅ. 27 ಹೆಚ್.ಡಿ. ಕೋಟೆ : ಕಾಡಾನೆ ದಾಳಿಗೆ ಆದಿವಾಸಿ ಯುವಕ ಬಲಿ
ಅ. 27 ಏಪ್ರಿಲ್–ಮೇ ತಿಂಗಳಲ್ಲಿ ಲೋಕಸಭಾ ಚುನಾವಣೆ: ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಮಾಹಿತಿ
ಅ. 29 ಕೇರಳ ಧಾರ್ಮಿಕ ಸಮಾವೇಶದಲ್ಲಿ ಸರಣಿ ಸ್ಫೋಟ, ಮಹಿಳೆ ಸೇರಿ 2 ಸಾವು
ಅ. 30 ಮಹಾರಾಷ್ಟ್ರ ಮಾದರಿ ರಾಜ್ಯದಲ್ಲೂ ಸರ್ಕಾರ ಪತನ: ಶಾಸಕ ರಮೇಶ್ ಜಾರಕಿಹೊಳಿ ಬಾಂಬ್
ಅ. 31 ಇಸ್ರೋ ಮುಖ್ಯಸ್ಥ ಸೋಮನಾಥನ್, ನ್ಯಾ. ಗೋಪಾಲಗೌಡ, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯ ಡಾ. ರಾಮಚಂದ್ರ ಸೇರಿ 68 ಮಂದಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ
ಅ. 31 ಮಡಿಕೇರಿಯಲ್ಲಿ ಭೂ ಕುಸಿತ : ಮೂವರು ಸಾವು ಕಾಂಪೌಂಡ್ ನಿರ್ಮಾಣಕ್ಕೆ ಪಾಯ ತೆಗೆಯುತ್ತಿದ್ದಾಗ ದುರಂತ
ಅ. 31 ಮೈಸೂರು ದಸರಾ ವೇಳೆ ಡ್ರಗ್ಸ್ ಮಾರಾಟ ಯತ್ನ : ಕೇರಳ ಮೂಲದ ಇಬ್ಬರ ಬಂಧನ


ನವೆಂಬರ್



ಬಿ.ವೈ.ವಿಜಯೇಂದ್ರ



ಆರ್.ಅಶೋಕ್



ಡಿ.ಬಿ.ಜಯಚಂದ್ರ



ಸದಾನಂದಗೌಡ

ನ. 2 ತಿರುಪತಿಗೆ ತೆರಳಿದ ಮೈಸೂರಿನ ಮೂವರು ಮಹಿಳೆಯರು ಸಾವು
ನ. 2 ಬೆಂಗಳೂರು : ಪವರ್‌ವಾರ್‌ಗೆ ಮತ್ತಷ್ಟು ಕಿಚ್ಚು ಹಚ್ಚಿದ ಮುಖ್ಯಮಂತ್ರಿ ಸಿದ್ದರಾಮಯ್ಯ; ನಾನು ಈಗ ಮುಖ್ಯಮಂತ್ರಿ... ನಾನೇ ಮುಂದುವರೆಯುತ್ತೇನೆ..
ನ. 5 ಬೆಂಗಳೂರಲ್ಲಿ ಗಣಿ ಭೂ ವಿಜ್ಞಾನ ಇಲಾಖೆ ಮಹಿಳಾ ಅಧಿಕಾರಿ ಬರ್ಬರ ಹತ್ಯೆ
ನ. 5 ಬಂಡೀಪುರ : ಅರಣ್ಯ ಸಿಬ್ಬಂದಿ ಗುಂಡೇಟಿಗೆ ಕಡವೆ ಬೇಟೆಗಾರ ಬಲಿ
ನ. 6 ಹುಲಿ ದಾಳಿಗೆ ಮತ್ತೊಬ್ಬ ರೈತ ಬಲಿ
ನ. 6 90 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರ ಮನೆ ಬಾಗಿಲಿಗೆ ಪಡಿತರ ಪದಾರ್ಥ 'ಅನ್ನ ಸುವಿಧ' ಯೋಜನೆಗೆ ಚಾಲನೆ
ನ. 7 ಪಾಂಡವಪುರ : ವಿಶ್ವೇಶ್ವರಯ್ಯ ನಾಲೆಗೆ ಕಾರು ಉರುಳಿ ತಿಪಟೂರಿನ ಐವರು ಜಲಸಮಾಧಿ
ನ. 7 ಹಿರಿಯ ರಾಜಕಾರಣಿ ಡಿ.ಬಿ. ಚಂದ್ರೇಗೌಡ ನಿಧನ
ನ. 8 ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ ನಿವೃತ್ತಿ ಘೋಷಣೆ
ನ. 8 ಮಾಜಿ ಕಾರ್ಯದರ್ಶಿ ಸಹಿ ನಕಲು ಮಾಡಿ ಮುಡಾದಲ್ಲಿ ಕೋಟ್ಯಾಂತರ ರೂ. ಲೂಟಿ
ನ. 9 ಗ್ಯಾರಂಟಿ ಗಿಫ್ಟ್ ಬೆನ್ನಲ್ಲೇ ಕೃಷಿ ಪಂಪ್‌ಸೆಟ್ ಸಬ್ಸಿಡಿ ರದ್ದು
ನ. 9 ಮೈಸೂರು ಲಲಿತ ಮಹಲ್ ಅರಮನೆಗೆ ನವೀಕರಣ ಭಾಗ್ಯ
ನ. 10 ಬಿ.ಎಸ್. ಯಡಿಯೂರಪ್ಪ ಪುತ್ರ ಬಿ.ವೈ. ವಿಜಯೇಂದ್ರ ರಾಜ್ಯ ಬಿಜೆಪಿ ಸಾರಥಿ
ನ. 11 ನಂಜನಗೂಡು ಬಳಿಯ ಸೌತ್ ಇಂಡಿಯಾ ಪೇಪರ್ ಮಿಲ್‌ನಲ್ಲಿ ಭಾರಿ ಅಗ್ನಿ ಅವಘಡ
ನ. 11 ಪೇಪರ್ ಸುಬ್ಬಣ್ಣ ಇನ್ನಿಲ್ಲ
ನ. 15 ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಪದಗ್ರಹಣ
ನ. 15 ಕುವೆಂಪುನಗರದಲ್ಲಿ ಹಾಡಹಗಲೇ ಸರ್ಕಾರಿ ಅಧಿಕಾರಿ ಪತ್ನಿ ಹತ್ಯೆ
ನ. 17 ಆರ್. ಅಶೋಕ್ ವಿಧಾನಸಭೆ ವಿಪಕ್ಷ ನಾಯಕ
ನ. 19 ಅಹಮದಾಬಾದ್ : 6ನೇ ಬಾರಿ ಆಸ್ಟ್ರೇಲಿಯಾ ವಿಶ್ವಕಪ್ ಚಾಂಪಿಯನ್
ನ. 19 ಕಾವೇರಿ ಹಿನ್ನೀರಿಯಲ್ಲಿ ಮುಳುಗಿ ಮೂವರ ಸಾವು
ನ. 23 ಆದಾಯಕ್ಕೂ ಮೀರಿದ ಆಸ್ತಿ ಗಳಿಕೆ ಪ್ರಕರಣ – ಡಿಸಿಎಂ ಡಿ.ಕೆ. ಶಿವಕುಮಾರ್ ವಿರುದ್ಧದ ತನಿಖೆ ಸಿಬಿಐನಿಂದ ಹಿಂಪಡೆಯಲು ಸಂಪುಟ ತೀರ್ಮಾನ
ನ. 23 ಕಾಶ್ಮೀರದಲ್ಲಿ ಭಯೋತ್ಪಾದಕರ ಗುಂಡಿನ ದಾಳಿಗೆ ಕರ್ನಾಟಕದ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಬಲಿ
ನ. 24 ಹೆಡಿಯಾಲ ಬಳಿ ಹುಲಿ ದಾಳಿ : ರೈತ ಮಹಿಳೆ ಬಲಿ
ನ. 25 ಮೈಸೂರಲ್ಲಿ 900ಕ್ಕೂ ಭ್ರೂಣಹತ್ಯೆ; ಚೆನ್ನೈನ ವೈದ್ಯ ಸೇರಿಂದತೆ 9 ಮಂದಿ ಬಂಧನ
ನ. 26 ಮನ್ ಕಿ ಬಾತ್‌ನಲ್ಲಿ ಚಾಮರಾಜನಗರ ತಾಲೂಕು ಉಮ್ಮತ್ತೂರಿನ ವರ್ಷಾ ಸಾಧನೆ
ನ. 27 ಹೆಣ್ಣು ಭ್ರೂಣಹತ್ಯೆ ಪ್ರಕರಣ :ಮೈಸೂರು ವೈದ್ಯ ಡಾ. ಚಂದನ್ ಬಲ್ಲಾಳ್ ಬಂಧನ
ನ. 28 ಹೆಣ್ಣು ಭ್ರೂಣಹತ್ಯೆ ತಡೆಗೆ ಟಾಸ್ಕ್ ಫೋರ್ಸ್ ರಚನೆ

ಡಿಸೆಂಬರ್



ಲೀಲಾವತಿ



ಮನೋರಂಜನ್




ಹೆಚ್.ಡಿ.ದೇವೇಗೌಡರಿಂದ ಮೋದಿ ಭೇಟಿ

ಡಿ. 1 ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಭಾವ ಮಹದೇವಯ್ಯ ಅಪಹರಣ
ಡಿ. 3 ಮಿಜೋರಾಂ ಹೊರತುಪಡಿಸಿ ನಾಲ್ಕು ರಾಜ್ಯಗಳ ಚುನಾವಣಾ ಫಲಿತಾಂಶ : ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಘಡದಲ್ಲಿ ಬಿಜೆಪಿಗೆ ಜಯ, ತೆಲಂಗಾಣದಲ್ಲಿ ಕಾಂಗ್ರೆಸ್‌ಗೆ ಗೆಲುವು
ಡಿ. 4 ಹಾಸನ : ಅರ್ಜುನ ಆನೆ ಇನ್ನಿಲ್ಲ
ಡಿ. 4 ನಾಪತ್ತೆಯಾಗಿದ್ದ ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಭಾವ ಮಹದೇವಯ್ಯ ಶವವಾಗಿ ಪತ್ತೆ
ಡಿ. 4 ಮಡಿಕೇರಿ : ಇಬ್ಬರು ಪುತ್ರಿಯರೊಂದಿಗೆ ತಾಯಿ ಹೊಳೆಯಲ್ಲಿ ಮುಳುಗಿ ಸಾವು
ಡಿ. 5 ತೆಲಂಗಾಣ ನೂತನ ಮುಖ್ಯಮಂತ್ರಿಯಾಗಿ ಹೇಮಂತ್ ರೆಡ್ಡಿ ಆಯ್ಕೆ
ಡಿ. 5 ಅಪಾರ ಅಭಿಮಾನಿಗಳ ಅಶ್ರುತರ್ಪಣ : ಸರ್ಕಾರಿ ಗೌರವಗಳೊಂದಿಗೆ ಅರ್ಜುನನ ಅಂತ್ಯಕ್ರಿಯೆ
ಡಿ. 6 ಕೊಡಗಿನಲ್ಲಿ ಭಾರಿ ಮಳೆ ಅಭಾವ: ಚಿಕ್ಲಿಹೊಳೆ ಜಲಾಶಯದಲ್ಲಿ ಶಿವ ದೇವಾಲಯ ಪ್ರತ್ಯಕ್ಷ
ಡಿ. 8 ಹಿರಿಯ ನಟಿ ಲೀಲಾವತಿ ಇನ್ನಿಲ್ಲ
ಡಿ. 9 ಬೆಂಗಳೂರು : ಜೆಡಿಎಸ್‌ನಿಂದ ಸಿ.ಎಂ.ಇಬ್ರಾಹಿಂ, ಸಿ.ಕೆ. ನಾಣು ಉಚ್ಚಾಟನೆ
ಡಿ. 9 ಮಡಿಕೇರಿ : ಪುತ್ರಿ ಕೊಂದು ಕೇರಳ ದಂಪತಿ ಆತ್ಮಹತ್ಯೆ
ಡಿ. 10 ಛತ್ತೀಸ್‌ಗಡದ ಮುಖ್ಯಮಂತ್ರಿಯಾಗಿ ವಿಷ್ಣುದೇವ್ ಸಾಯಿ ಆಯ್ಕೆ
ಡಿ. 11 ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನದ 370ನೇ ವಿಧಿ ರದ್ದು: ಕೇಂದ್ರದ ನಿರ್ಧಾರ ಎತ್ತಿ ಹಿಡಿದ ಸುಪ್ರೀಂ ಕೋರ್ಟ್
ಡಿ. 11 ಮಧ್ಯ ಪ್ರದೇಶದ ಮುಖ್ಯಮಂತ್ರಿಯಾಗಿ ಒಬಿಸಿಯ ಡಾ. ಮೋಹನ್ ಯಾದವ್ ಆಯ್ಕೆ
ಡಿ. 12 ರಾಜಸ್ಥಾನ ಸಿಎಂ ಆಗಿ ಭಜನ್ ಲಾಲ್ ಶರ್ಮಾ ಆಯ್ಕೆ
ಡಿ. 13 ಸಂಸತ್ ಭವನದಲ್ಲಿ ಭಾರಿ ಭದ್ರತಾ ಲೋಪ ಮೈಸೂರಿನ ಮನೋರಂಜನ್, ಉತ್ತರ ಪ್ರದೇಶದ ಸಾಗರ್ ಶರ್ಮಾ ಪ್ರೇಕ್ಷಕರ ಗ್ಯಾಲರಿಯಿಂದ ಸದನಕ್ಕೆ ಜಿಗಿದು ದಾಂಧಲೆ, ಕಲರ್ ಗ್ಯಾಸ್ ಸಿಡಿಸಿ ರಂಪಾಟ
ಡಿ. 14 ಮನೋರಂಜನ್, ಸಾಗರ್ ಶರ್ಮಾ ಸೇರಿ ನಾಲ್ವರು ಆರೋಪಿಗಳ ಮೇಲೆ ಭಯೋತ್ಪಾದನಾ ನಿಗ್ರಹ ಕಾಯ್ದೆಯಡಿ ಕೇಸ್ ದಾಖಲು
ಡಿ. 15 ರೈತರ ಸಂಕಷ್ಟ, ಸಹಕಾರಿ ಬ್ಯಾಂಕ್‌ಗಳ ಸಾಲದ ಬಡ್ಡಿ ಮನ್ನಾ : ಸಿಎಂ ಘೋಷಣೆ
ಡಿ. 16 ಪೂರ್ಣಯ್ಯ ನಾಲೆಯ ಡ್ರೋಣ್ ಸರ್ವೆ
ಡಿ. 17 ಕೇರಳದಲ್ಲಿ ಜೆಎನ್1ಗೆ ನಾಲ್ವರ ಬಲಿ
ಡಿ. 18 ಬೆಂಗಳೂರು :60 ವರ್ಷ ಮೇಲ್ಪಟ್ಟವರು, ಅನಾರೋಗ್ಯ ಪೀಡಿತರಿಗೆ ಮಾಸ್ಕ್ ಕಡ್ಡಾಯ
ಡಿ. 19 ನವದೆಹಲಿ : ಸಿಎಂ ಸಿದ್ದರಾಮಯ್ಯ ಪ್ರಧಾನಿ ಮೋದಿ ಭೇಟಿ; ಕರ್ನಾಟಕದಲ್ಲಿ ಭೀಕರ ಬರ; ಬೇಗ ಪರಿಹಾರ ಕೊಡಿ
ಡಿ. 20 ಕೊರೊನಾ ರೂಪಾಂತರಿಗೆ ರಾಜ್ಯದಲ್ಲಿ ಇಬ್ಬರು ಬಲಿ
ಡಿ. 20 ಕನ್ನಡದ ಲಕ್ಷ್ಮೀಶ ತೋಳ್ಪಾಡಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
ಡಿ. 21 ಪ್ರಧಾನಿ ಭೇಟಿಯಾದ ಗೌಡರ ಕುಟುಂಬ
ಡಿ. 21 ಪ್ರಧಾನಿ ಭೇಟಿಯಾದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ
ಡಿ. 21 ಕೆ.ಆರ್.ನಗರ :ಕೆ.ಆರ್.ಎಸ್. ಹಿನ್ನೀರಿನಲ್ಲಿ ಇಬ್ಬರು ಅಪರಿಚಿತ ಯುವಕರ ಶವ ಪತ್ತೆ
ಡಿ. 22 ಮೈಸೂರು ಪತ್ರಿಕಾ ಭವನಕ್ಕೆ ಸಿಎಂ ಸಿದ್ದರಾಮಯ್ಯ ಶಂಕುಸ್ಥಾಪನೆ
ಡಿ. 22 ಮೈಸೂರಿನ ಪಿ.ಕೆ. ಸ್ಯಾನಿಟೋರಿಯಂ ಆವರಣದಲ್ಲಿ ಕಿದ್ವಾಯಿ ಕ್ಯಾನ್ಸರ್ ಘಟಕಕ್ಕೆ ಸಿಎಂ ಸಿದ್ದರಾಮಯ್ಯ ಶಂಕುಸ್ಥಾಪನೆ
ಡಿ. 22 ಚಾಮುಂಡೇಶ್ವರಿಗೆ ಪುಷ್ಪಾರ್ಚನೆಯೊಂದಿಗೆ ಅರಮನೆ ಆವರಣದಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಚಾಲನೆ
ಡಿ. 23 ಚಾಮುಂಡಿಬೆಟ್ಟಕ್ಕೆ ರೋಪ್‌ವೇ ನಿರ್ಮಾಣಕ್ಕೆ ನಾವು ತಯಾರಿದ್ದೇವೆ; ಆದರೆ ಯಾರೂ ಅಡ್ಡಿಪಡಿಸಬಾರದು : ಸಿಎಂ ಸಿದ್ದರಾಮಯ್ಯ
ಡಿ. 26 ಯುವನಿಧಿ ನೋಂದಣಿ ಆರಂಭ
ಡಿ. 26 ಕೋವಿಡ್ ಸೋಂಕಿತರಿಗೆ ಏಳು ದಿನ ಹೋಂ ಐಸೋಲೇಷನ್ ಕಡ್ಡಾಯ
ಡಿ. 27 ಮತ್ತೊಂದು ಐಐಟಿ ಸ್ಥಾಪನೆಗೆ ಪ್ರಧಾನಿ ಮೋದಿಗೆ ಸಿಎಂ ಸಿದ್ದರಾಮಯ್ಯ ಪ್ರಸ್ತಾಪ : ಮೈಸೂರಿಗೆ ಮೊದಲ ಆದ್ಯತೆ
ಡಿ. 28 ಚಾಮುಂಡಿಬೆಟ್ಟಕ್ಕೆ ರೋಪ್ ವೇ :ಪರಿಸರವಾದಿಗಳು, ಸಾಹಿತಿಗಳ ವಿರೋಧ
ಡಿ. 28 ತಮಿಳು ಹಿರಿಯ ನಟ, ರಾಜಕಾರಣಿ 'ಕ್ಯಾಪ್ಟನ್' ವಿಜಯಕಾಂತ್ ವಿಧಿವಶ
ಡಿ. 29 ಹಾಸನ, ಮಂಡ್ಯ, ತುಮಕೂರು, ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ ಸ್ಪರ್ಧೆ

ಮೈಸೂರು ಮಿತ್ರ ಶನಿವಾರ 30 ಡಿಸೆಂಬರ್ 2023

ಸಂಪ್ರದಾಯ ಆಚರಣೆಯಿಂದ ಸಂಸ್ಕೃತಿ ರಕ್ಷಣೆ

• ವಿಧಾನ ಪರಿಷತ್ ಸದಸ್ಯ ಶಾಂತರಾಮ ಬುದ್ಧ ಸಿದ್ದಿ ಅಭಿಮತ • ಮಡಿಕೇರಿಯಲ್ಲಿ ವಿಶ್ವ ಕೊಡವ ಸಮ್ಮೇಳನ





ಮಡಿಕೇರಿ, ಡಿ.29– ಸಂಪ್ರದಾಯಗಳನ್ನು ಆಚರಿಸಿಕೊಂಡು ಬಂದಲ್ಲಿ ಅದು ಸಂಸ್ಕೃತಿಯನ್ನು ರಕ್ಷಿಸುತ್ತದೆ ಎಂದು ವಿಧಾನಪರಿಷತ್ ಸದಸ್ಯ ಶಾಂತರಾಮ ಬುದ್ಧ ಸಿದ್ದಿ ಹೇಳಿದರು.

ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಮೈದಾನದಲ್ಲಿ ಕನೆಕ್ಟಿಂಗ್ ಕೊಡವಾಸ್ ಸಂಘಟನೆ ವತಿಯಿಂದ ಆಯೋಜಿಸಿದ್ದ ವಿಶ್ವ ಕೊಡವ ಸಮ್ಮೇಳನದಲ್ಲಿ ಮಾತ ನಾಡಿದ ಅವರು, ಕೊಡವ ಸಮುದಾಯ ದವರನ್ನು ಒಗ್ಗೂಡಿಸಲು ಆಯೋಜಿಸಿರುವ ಇಂತಹ ಕಾರ್ಯಕ್ರಮವನ್ನು ನಾನು ಎಲ್ಲೂ ನೋಡಿಲ್ಲ. ಇದೊಂದು ದೊಡ್ಡ ಸಾಧನೆ. ಪರಂಪರೆಗಳನ್ನು ಆಚರಿಸುವ ಮೂಲಕ ಉಳಿಸಿ ಬೆಳೆಸಬೇಕು. ಕೊಡವ ಸಮುದಾಯದ ಹಿರಿಯರು ಇಂತಹ ಸಂಸ್ಕೃತಿಗಳನ್ನು ಆಚರಿಸಿ, ಯುವ ಸಮುದಾಯಕ್ಕೆ ಮಾರ್ಗದರ್ಶನ ನೀಡಬೇಕು ಎಂದು ಹೇಳಿದರು.

ಕೊಡವರು ಎಸ್‌ಟಿ ಸಮುದಾಯಕ್ಕೆ ಸೇರ್ಪಡೆಯಾಗಬೇಕಾದರೆ ಅದಕ್ಕೆ ಕುಲಶಾಸ್ತ್ರ ಅಧ್ಯಯನ ನಡೆಸಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರಕ್ಕೂ ಮನವಿ ಮಾಡಬೇಕೆಂದು ಸಲಹೆ ನೀಡಿದರು. ಇದಕ್ಕಾಗಿ ಎಲ್ಲಾ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಸಮಸ್ಯೆಗಳು ಪರಿಹಾರವಾಗಬೇಕು: ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮಾತನಾಡಿ, ಕೊಡವರ ಹಕ್ಕುಗಳನ್ನು ಕಸಿಯಲು ಹಲವು ಪ್ರಯತ್ನಗಳು ನಡೆದಿವೆ. ಇವುಗಳ ವಿರುದ್ಧ ಕೊಡವ ಸಮುದಾಯ ಸಾಮೂಹಿಕವಾಗಿ ಹೋರಾಟ ನಡೆಸಬೇಕು. ರಾಜಕೀಯ ಪ್ರಾತಿನಿಧ್ಯ ಇಲ್ಲವಾದಲ್ಲಿ ಹಕ್ಕುಗಳನ್ನು ಕೇಳಲು ಸಾಧ್ಯವಾಗುವುದಿಲ್ಲ. ಹೀಗಾಗಿ ರಾಜಕೀಯ ಇಚ್ಛಾಶಕ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.



ಕೊಡವ ಸಮುದಾಯ ಜನಸಂಖ್ಯೆಯಲ್ಲಿ ಚಿಕ್ಕದಾಗಿದ್ದರೂ ದೇಶಕ್ಕೆ ಸಾಕಷ್ಟು ಕೊಡುಗೆ ನೀಡಿದೆ. ಜಮ್ಮಾ ಬಾಣೆಗೆ ಕಂದಾಯ ನಿಗದಿ, ಪಟ್ಟೆದಾರರಿಂದ ಹಕ್ಕು ಬದಲಾವಣೆ, ಪೌತಿ ಖಾತೆ, ಕೋವಿ ಹಕ್ಕು ಸೇರಿದಂತೆ ಹಲವಾರು ಸಮಸ್ಯೆಗಳು ಕೊಡವ ಸಮುದಾಯವನ್ನು ಕಾಡುತ್ತಿದೆ. ಇವುಗಳಿಗೆ ಪರಿಹಾರವನ್ನೂ ಕಾಣುವಂತಾಗಬೇಕು ಎಂದರು.

ಈ ಕಾರ್ಯಕ್ರಮ ಕೊಡವರ ಹಕ್ಕುಗಳ ಪ್ರತಿಪಾದನೆಗೆ ವೇದಿಕೆಯಾಗಬೇಕು. ಕೊಡವರ ಕುಲಶಾಸ್ತ್ರ ಅಧ್ಯಯನದ ಕಡತ ಸರ್ಕಾರದ ಬಳಿ ಇದ್ದು, ಅದು ಜಾರಿಗೆ ಬರಲಿದೆ. ಕೊಡವರಿಗೆ ಕಾನೂನು ಬದ್ಧ ಹಕ್ಕುಗಳನ್ನು ನೀಡಲು ಶಕ್ತಿ ಮೀರಿ ಹೋರಾಟ ನಡೆಸುವುದಾಗಿ ಭರವಸೆ ನೀಡಿದರು.

ಯುವಶಕ್ತಿ ದೇಶದ ಸಂಪತ್ತು: ರಾಷ್ಟ್ರೀಯ ಪಠ್ಯಕ್ರಮ ಶಿಕ್ಷಣ ಸಚಿವಾಲಯದ ಮುಖ್ಯ ಸಲಹೆಗಾರ ಡಾ.ಚೇತನ್ ಸಿಂಘೈ ಮಾತನಾಡಿ, ಜಾಗತಿಕವಾಗಿ ಗುರುತಿಸಿಕೊಳ್ಳುವ ಮುನ್ನ ಸ್ಥಳೀಯತೆಯನ್ನು ಮರೆಯಬಾರದು. ಸಂಸ್ಕೃತಿ, ಆಚಾರ, ವಿಚಾರ, ಪದ್ಧತಿ, ಪರಂಪರೆಗಳು ಮನೆಯಿಂದಲೇ ಕಲಿಯುವಂತಾಗಬೇಕು. ಯಾವುದೇ ಜನಾಂಗಕ್ಕೆ ಶಿಕ್ಷಣವೇ ಮೂಲವಾಗಬೇಕು. ಆ ಮೂಲಕ ಯುವ ಸಮುದಾಯ ದೇಶದ ಸಂಪತ್ತುಗಳಾಗಿ ಬದಲಾಗಬೇಕು ಎಂದು ತಿಳಿಸಿದರು. ದೇಶತಕ್ಕ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ, ಕನೆಕ್ಟಿಂಗ್ ಕೊಡವಾಸ್ ಸಂಘಟನೆಯ ನಿರ್ದೇಶಕ ಪಾಲೇಂಗಡ ಅಮಿತ್ ಭೀಮಯ್ಯ ಮಾತನಾಡಿದರು.

ಸನ್ಮಾನ: ಇದೇ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಪಠ್ಯಕ್ರಮ ಶಿಕ್ಷಣ ಸಚಿವಾಲಯದ ಮುಖ್ಯ ಸಲಹೆಗಾರರಾದ ರಶ್ಮಿ ಸಮಂತ್, ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಆತ್ಮ ನಿರ್ಭರ ಅಧ್ಯಕ್ಷೆ ಕುಪ್ಪಂಡ ಛಾಯಾ ನಂಜಪ್ಪ, ಕನೆಕ್ಟಿಂಗ್ ಕೊಡವಾಸ್ ಸಂಘಟನೆ ಅಧ್ಯಕ್ಷ ಶಾಂತೆಯಂಡ ನಿರನ್ ನಾಚಪ್ಪ, ಉಪಾಧ್ಯಕ್ಷ ಪಟ್ರಪಂಡ ಪಂಥ್ ಮೊಣ್ಣಪ್ಪ ಉಪಸ್ಥಿತರಿದ್ದರು.

ಬೃಹತ್ ಮೆರವಣಿಗೆ

ಕಾರ್ಯಕ್ರಮಕ್ಕೂ ಮುನ್ನ ನಗರದ ಹೊಸ ಖಾಸಗಿ ಬಸ್ ನಿಲ್ದಾಣದಿಂದ ಸಾವಿರಾರು ಕೊಡವ ಕೊಡವತಿಯರು ತಮ್ಮ ಕುಟುಂಬದ ಹೆಸರಿರುವ ಧ್ವಜ ಹಿಡಿದು ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ವರೆಗೆ ಬೃಹತ್ ಮೆರವಣಿಗೆ ನಡೆಸಿದರು. ದುಡಿಕೊಟ್ಟ್ ಪಾಟ್ ಸಹಿತ ಕೊಡವ ಸಾಂಪ್ರದಾಯಿಕ ವಾಲಗದೊಂದಿಗೆ ವಿವಿಧ ಕೊಡವ ಸಮಾಜಗಳು, ಕೊಡವ ಸಂಘಟನೆಗಳ ಪದಾಧಿಕಾರಿಗಳು ಹೆಜ್ಜೆ ಹಾಕಿದರು. ವೇದಿಕೆ ಬಳಿ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ ಮತ್ತು ಕನೆಕ್ಟಿಂಗ್ ಕೊಡವಾಸ್ ಸಂಘಟನೆಯ ಪ್ರಮುಖರು ಗುರುಕಾರೋಣರಿಗೆ ಅಕ್ಕಿ ಹಾಕಿ ನಮಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಆಕರ್ಷಕ ವಸ್ತು ಪ್ರದರ್ಶನ

ವಿಶ್ವ ಕೊಡವ ಸಮ್ಮೇಳನ ಆಯೋಜಿಸಿದ್ದ ಮೈದಾನದ ಮುಂಭಾಗದಲ್ಲೇ ಕೊಡವ 'ಐನ್‌ಮನೆ' ನಿರ್ಮಿಸಲಾಗಿತ್ತು. ಐನ್‌ಮನೆಯಲ್ಲಿ ಹಿಂದಿನ ಎಲ್ಲಾ ವಸ್ತುಗಳನ್ನು ಇರಿಸಲಾಗಿತ್ತು. ನೂರಾರು ಜನರು ಐನ್‌ಮನೆ ಒಳಹೊಕ್ಕು ಹಿಂದಿನ ಕಾಲದ ಗತವೈಭವಗಳನ್ನು ಕಣ್ತುಂಬಿಕೊಂಡರು.



ಹಿಂದಿನ ಕಾಲದ ಕೃಷಿ ಉಪಕರಣಗಳು, ಗೃಹೋಪಯೋಗಿ ವಸ್ತುಗಳು, ಸಾಂಪ್ರದಾಯಿಕ ವಸ್ತುಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು. ಇಸ್ತ್ರಿ ಪೆಟ್ಟಿಗೆ, ನೇಗಿಲು, ನೊಗ, ಮರದ ಹಿಟ್ಟು ತಯಾರಿಕಾ ಯಂತ್ರ, ಜೇನು ತೆಗೆಯುವ ಯಂತ್ರ, ತಾಮ್ರದ ಬಿಂದಿಗೆಗಳು, ದುಡಿ, ಮೀನು ಹಿಡಿಯುವ ಮತ್ತು ಸಂಗ್ರಹಿಸುವ ಕೂಳಿಗಳು ಜನರನ್ನು ಆಕರ್ಷಿಸಿದವು.

ಗುಂಡು ಹೊಡೆಯುವ ಸ್ಪರ್ಧೆ: ವೇದಿಕೆಯ ಹಿಂಭಾಗ ಕೊಡವ ಪುರುಷ ಮತ್ತು ಮಹಿಳೆಯರಿಗೆ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿವಿಧ ವಯೋಮಾನದ ನೂರಾರು ಪುರುಷರು ಹಾಗೂ ಮಹಿಳೆಯರು 12 ಬೋರ್ ಮತ್ತು ಪಾಯಿಂಟ್ 2 ಬಂದೂಕಿನಿಂದ ಗುಂಡು ಹೊಡೆಯುವ ಮೂಲಕ ತಮ್ಮ ನಿಖರ ಗುರಿಯ ಸಾಮರ್ಥ್ಯ ಪ್ರದರ್ಶಿಸಿ ಗಮನ ಸೆಳೆದರು.

ಸರ್ಕಾರಿ ಕಚೇರಿಗಳು ಜನಸೇವೆ ಕೇಂದ್ರವಾಗಬೇಕು



ವಿರಾಜಪೇಟೆ, ಡಿ.29–ಸರ್ಕಾರಿ ಕಚೇರಿಗಳು ಜನಸೇವೆಯ ಕೇಂದ್ರವಾಗಬೇಕು. ಎಲ್ಲಾ ಇಲಾಖೆಗಳು ಒಂದೇ ಸೂರಿನಡಿ ದೊರಕುವುದರಿಂದ ಸಾರ್ವಜನಿಕರ ಎಲ್ಲಾ ಕೆಲಸಗಳು ಸುಲಭವಾಗಿ ಆಗಲಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

6.95 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾದ ವಿರಾಜಪೇಟೆಯ ಮಿನಿವಿಧಾನ ಸೌಧದ ಮೊದಲ ಹಾಗೂ ಎರಡನೇ ಮಹಡಿಯ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಕೆಲವೆ ಇಲಾಖೆಗಳಲ್ಲಿ ಮಧ್ಯವರ್ತಿಗಳ ಹಾವಳಿ ಬಗ್ಗೆ ದೂರುಗಳು ಬರುತ್ತಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಸಾರ್ವನಿಕರೊಂದಿಗೆ ಉತ್ತಮವಾಗಿ ನಡೆದುಕೊಳ್ಳಬೇಕು. ಎಲ್ಲಾ ಕಚೇರಿಗಳು ಒಂದೇಕಡೆ ಇರುವುದರಿಂದ ವಾಹನ ನಿಲುಗಡೆ, ಲಿಫ್ಟ್, ಕಾಂಪೌಂಡ್ ಸೇರಿದಂತೆ ಇನ್ನಿತರ ಸೌಲಭ್ಯಗಳನ್ನು ಶೀಘ್ರದಲ್ಲಿ ಕಟ್ಟಡಕ್ಕೆ ಒದಗಿಸಲಾಗುವುದು ಎಂದರು.

ವಿಧಾನಪರಿಷತ್ ಸದಸ್ಯ ಎಂ.ಸುಜಾ ಕುಶಾಲಪ್ಪ ಮಾತನಾಡಿ, ಮಿನಿವಿಧಾನಸೌಧ ಮೊದಲ ಹಂತದ ಕಾಮಗಾರಿ 2 ಕೋಟಿ ರೂ. ವೆಚ್ಚದಲ್ಲಿ ನಡೆದು 2018ರಲ್ಲಿ ಉದ್ಘಾಟನೆಗೊಂಡಿತ್ತು. ಎರಡನೇ ಹಂತದ ಕಾಮಗಾರಿ ಕಾರಣಾಂತರದಿಂದ ನಿಂತಿತ್ತು. ಆದರೆ, ಇದೀಗ ಪೂರ್ಣಗೊಂಡಿದ್ದು, ಸರ್ಕಾರಿ ಕಚೇರಿಯಲ್ಲಿ ಮಧ್ಯವರ್ತಿಗಳಿಗೆ ಅವಕಾಶ ನೀಡುವುದರಿಂದ ಇಲಾಖೆಗಳಿಗೆ ಹಾಗೂ ಅಧಿಕಾರಿಗಳಿಗೆ ಕೆಟ್ಟ ಹೆಸರು ಬರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ತಹಶೀಲ್ದಾರ್ ಎಚ್.ಎನ್.ರಾಮಚಂದ್ರ ಮಾತನಾಡಿದರು. ಇದೇ ವೇಳೆ ಗುತ್ತಿಗೆದಾರ ರಘುರಾಂ ಅವರನ್ನು ಸನ್ಮಾನಿಸಲಾಯಿತು. ಪುರಸಭೆ ಮುಖ್ಯಾಧಿಕಾರಿ ಎ.ಚಂದ್ರಕುಮಾರ್, ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನಿಯರ್ ಸಿದ್ದೇಗೌಡ, ಇಂಜಿನಿಯರ್ ಲಿಂಗರಾಜು, ಭೂಮಾಪನ ಇಲಾಖೆಯ ಸಹಾಯಕ ನಿರ್ದೇಶಕ ಮಹೇಶ್ ಕುಮಾರ್, ಪುರಸಭೆ ಸದಸ್ಯೆ ಸುನಿತಾ ಜೂನ, ಕಂದಾಯ ಇಲಾಖೆಯ ಅಧಿಕಾರಿ ಎಂ.ಎಲ್.ಹರೀಶ್, ಶಿಕ್ಷಕ ಎ.ವಿ.ಮಂಜುನಾಥ್, ತಾಲೂಕು ಕಚೇರಿ ಸಿಬ್ಬಂದಿ, ಪುರಸಭೆ ಸದಸ್ಯರು ಹಾಜರಿದ್ದರು.

ಓದಿನೊಂದಿಗೆ ಸಾಹಿತ್ಯದಲ್ಲೂ ಆಸಕ್ತಿ ಬೆಳೆಸಿಕೊಳ್ಳಿ



ಕುಶಾಲನಗರ, ಡಿ.29–ವಿದ್ಯಾರ್ಥಿ ಜೀವನದಲ್ಲೇ ಶಿಕ್ಷಣದ ಜೊತೆಯಲ್ಲೇ ಸಾಹಿತ್ಯದ ಬಗ್ಗೆಯೂ ಆಸಕ್ತಿ ಬೆಳಸಿಕೊಳ್ಳಬೇಕು ಎಂದು ಕೂಡಿಗೆ ಸೈನಿಕ ಶಾಲೆಯ ಪ್ರಾಂಶುಪಾಲ ಕರ್ನಲ್ ಅಮರ ಜೀತ್ ಸಿಂಗ್ ತಿಳಿಸಿದರು.

ಕೂಡಿಗೆ ಸೈನಿಕ ಶಾಲೆಯ ಕುವೆಂಪು ವಿವಿದ್ದೋದೇಶ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶುಕ್ರವಾರ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಾತೃಭಾಷೆಯ ಬಗ್ಗೆ ಪ್ರತಿಯೊಬ್ಬರಿಗೂ ಪ್ರೀತಿ, ಗೌರವ, ಅಭಿಮಾನ ಇರುತ್ತದೆ. ಜೊತೆಯಲ್ಲಿ ಬೇರೆ ಭಾಷೆಗಳನ್ನು ಗೌರವಿಸುವುದು ಅವಶ್ಯ. ಕುವೆಂಪು ಅವರ ಅದ್ಭುತ ಬರಹಗಳಿಂದಲ್ಲೇ ಅವರಿಗೆ ರಾಷ್ಟ್ರಕವಿ ಎಂದು ಹೆಸರು ಬರಲು ಕಾರಣ. ಅವರ ಆದರ್ಶ ಮತ್ತು ಚಿಂತನೆಗಳನ್ನು ಇಂದಿನ ಯುವ ಪೀಳಿಗೆ ಜೀವನದಲ್ಲಿ ಅಳವಡಿಸಿಕೊಂಡು ಯಶಸ್ಸು ಕಾಣಬೇಕು ಎಂದರು.

ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಮಾತನಾಡಿ, ಸಮಾಜದಲ್ಲಿ ಬೇರೂರಿರುವ ಮೌಢ್ಯ, ಕಂದಾಚಾರದ ವಿರುದ್ಧ ಧ್ವನಿಯೆತ್ತಿ, ವೈಚಾರಿಕತೆ ಬೆಳಸುವಲ್ಲಿ ಸಾಹಿತ್ಯ ರಚನೆಯಲ್ಲಿ ಹೆಚ್ಚಿನ ಬೆಳಕು ಚೆಲ್ಲಿದ ಕುವೆಂಪು ಅವರ ಸಾಹಿತ್ಯ ಹಾಗೂ ವಿಚಾರಧಾರೆಗಳು ಸಮಾಜಕ್ಕೆ ದಾರಿದೀಪವಾಗಿವೆ ಎಂದು ಬಣ್ಣಿಸಿದರು.

ಇದೇ ವೇಳೆ ಕೊಡಗಿನ ತ್ರಿಭಾಷಾ ಸಾಹಿತಿ ದಿ.ವಿ.ಎಸ್.ರಾಮಕೃಷ್ಣ ಅವರ ಹೆಸರಿನ ದತ್ತಿ ಕಾರ್ಯಕ್ರಮ ಅಂಗವಾಗಿ ವಿದ್ಯಾರ್ಥಿಗಳಿಗೆ ಭಾಷಣ ಸ್ಪರ್ಧೆ ಏರ್ಪಡಿಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕುಶಾಲನಗರ ಕಸಾಪ ಅಧ್ಯಕ್ಷ ಕೆ.ಎಸ್.ನಾಗೇಶ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪ ಪ್ರಾಂಶುಪಾಲ ಕ್ಯಾಪ್ಟನ್ ಸ್ಕ್ವಡರ್ನ್ ಲೀಡರ್ ಮನ್ ಪ್ರೀತ್ ಸಿಂಗ್, ಕೊಡುಮಂಗಳೂರು ರಾಮೇಶ್ವರ ಸಹಕಾರ ಸಂಘದ ಅಧ್ಯಕ್ಷ ಕೆ.ಕೆ.ಹೇಮಂತ ಕುಮಾರ್, ಸಮಾಜ ಸೇವಕ ನಟೇಶ್‌ಗೌಡ, ಕಸಾಪ ಕಾರ್ಯದರ್ಶಿ ಟಿ.ವಿ.ಶೈಲಾ ಇತರರು ಹಾಜರಿದ್ದರು.

ಜವರಮ್ಮ ನಿಧನ



ಕುಶಾಲನಗರ, ಡಿ.29– ಹೆಬ್ಬಾಲೆ ಸಮೀಪದ ಚಾಮರಾಯನಕೋಟೆ ಗ್ರಾಮದ ನಿವಾಸಿ ಜವರಮ್ಮ (80) ಶುಕ್ರವಾರ ಸಂಜೆ ನಿಧನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಸ್ವಗ್ರಾಮ ಚಾಮರಾಯನಕೋಟೆಯಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಗದ ಕವಿ, ಯುಗದ ಕವಿ ಕುವೆಂಪು

ವಿಶ್ವಮಾನವ ದಿನಾಚರಣೆಯಲ್ಲಿ ಶಾಸಕ ಪುಟ್ಟರಂಗಶೆಟ್ಟಿ ಅಭಿಮತ



"ಕನ್ನಡಕ್ಕೆ ಮೊಟ್ಟ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಹೆಗ್ಗಳಿಕೆ ಕುವೆಂಪು ಅವರದು. ನವ್ಯ ಸಾಹಿತ್ಯದಲ್ಲಿ ಕಾವ್ಯ ರಚಿಸಿದ ಕುವೆಂಪು ಅವರು ನಮಗೆ ಸ್ಫೂರ್ತಿಯ ಚಿಲುಮೆಯಾಗಿದ್ದಾರೆ. ಕುವೆಂಪು ಸಾಹಿತ್ಯ ಎಂದೆಂದಿಗೂ ಅನಂತ, ಅನಂತವಾಗಿರಲಿದೆ. ಸಮಾನತೆಯಡಿ ವಿಶ್ವವನ್ನೇ ಒಂದು ಕುಟುಂಬವಾಗಿ ನೋಡಿದ ಕುವೆಂಪು ಚಿರಸ್ಮರಣೀಯ.

- ಶಿಲ್ಪಾನಾಗ್, ಜಿಲ್ಲಾಧಿಕಾರಿ.

ಚಾಮರಾಜನಗರ, ಡಿ.29– ಇಡೀ ಜಗತ್ತಿಗೆ ವಿಶ್ವ ಮಾನವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪು ಅವರು ಜಗದ ಕವಿ, ಯುಗದ ಕವಿ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವಮಾನವ ದಿನಾಚರಣೆ ಅಧ್ಯಕ್ಷತೆ ವಹಿಸಿ, ಕುವೆಂಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ರವಿ ಕಾಣದ್ದನ್ನು ಕವಿ ಕಂಡ ಎಂಬಂತೆ ಕುವೆಂಪು ರಚಿಸಿರುವ ಎಲ್ಲಾ ಪ್ರಕಾರಗಳ ಕಾವ್ಯಗಳಲ್ಲಿ ಮಾನವೀಯತೆಯ ಸಂದೇಶವಿದೆ. ಅವರ ಸಂದೇಶಗಳನ್ನು ನಾವೆಲ್ಲರೂ ಅರಿಯಬೇಕು. ಭಾರತ ಮಾತೆಯ ಮಗನಾಗಿ ಹುಟ್ಟಿ ಇಡೀ ಮನುಕುಲಕ್ಕೆ ವಿಶ್ವಮಾನವ ಸಂದೇಶ ಸಾರಿದ ಕುವೆಂಪು ಸ್ಮರಣೆ ಇಂದಿಗೂ ಪ್ರಸ್ತುತ ಎಂದರು.

ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿ, ಕನ್ನಡದ ಆದಿಕವಿ ಪಂಪನ 'ಮನುಷ್ಯ ಜಾತಿ ತಾನೊಂದೇ ವಲಂ' ತತ್ವದ ಆಧಾರದಲ್ಲಿ ಕುವೆಂಪು ವಿಶ್ವಮಾನವ ಸಂದೇಶ ನೀಡಿದರು. ಮನುಷ್ಯತ್ವ ನಮ್ಮೊಳಗಿದ್ದರೆ ಮಾತ್ರ ಎಲ್ಲರೂ ಮನುಷ್ಯರಾಗಲು ಸಾಧ್ಯ. ಪಂಪ ಹಾಗೂ ಕುವೆಂಪು ಮಾನವತೆಯ 2 ಮುಖಗಳಾಗಿದ್ದಾರೆ. ಕುವೆಂಪು ಅವರು ಬುದ್ಧ, ಬಸವ, ಅಂಬೇಡ್ಕರ್, ಮಹಾವೀರರ ಆದರ್ಶಗಳನ್ನು ಮೈಗೂಡಿಸಿಕೊಂಡು ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಕುವೆಂಪು ಅವರು ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಆಂಗ್ಲ ಭಾಷೆಯ ಸಾಕಷ್ಟು ಕವಿತೆಗಳನ್ನು ಮನನ ಮಾಡಿಕೊಂಡು ಇಂಗ್ಲಿಷ್‌ನಲ್ಲಿ ಸಾಹಿತ್ಯ ರಚನೆ ಆರಂಭಿಸಿದ್ದರು. ಆ ಸಂದರ್ಭ ಕುವೆಂಪು ಗುರುಗಳಾದ ಐರಿಸ್ ಕವಿ ಜೇಮ್ಸ್ ಕಸೀನ್ ಅವರು ತಾಯಿ ಭಾಷೆಗೆ ಅಗಾಧ ಶಕ್ತಿ ಇದೆ. ಮಾತೃಭಾಷೆ ಕನ್ನಡದಲ್ಲಿಯೇ ಕಾವ್ಯ ರಚಿಸುವಂತೆ ಸಲಹೆ ನೀಡಿದರು. ಅಂದಿನಿಂದ ಕುವೆಂಪು ಬರೆದ ಸಾಹಿತ್ಯವೆಲ್ಲಾ ಅಮೃತವೇ. ಜನರಲ್ಲಿದ್ದ ಮೌಢ್ಯ ಹೋಗಲಾಡಿಸಲು ಅಕ್ಷರಗಳ ಮೂಲಕ ಮಾನವೀಯ ಸಮಾಜ ಕಟ್ಟಿದ ಕುವೆಂಪು ವೈಚಾರಿಕಾ, ವೈಜ್ಞಾನಿಕ ಪ್ರಜ್ಞೆ ಜಾಗೃತಗೊಳಿಸಿದರು ಎಂದರು.

ಪ್ರತಿಯೊಬ್ಬರೂ ಮಗುವಿನ ರೂಪದಲ್ಲಿ ವಿಶ್ವಮಾನವರಾಗಿ ಹುಟ್ಟುತ್ತಾರೆ. ಬೆಳೆಯುತ್ತಾ ಅಲ್ಪ ಮಾನವರಾಗುತ್ತಾರೆ. ಅವರನ್ನು ನೈತಿಕತೆ ಮತ್ತು ಮಾದರಿ ವ್ಯಕ್ತಿತ್ವದ ಮೂಲಕ ಮತ್ತೆ ವಿಶ್ವಮಾನವತ್ವದೆಡೆಗೆ ಕೊಂಡೊಯ್ಯುವ ಅಗತ್ಯವಿದೆ. ವಿದ್ವತ್ತಿನ ಗುಪ್ತಗಾಮಿನಿಯಾಗಿದ್ದ ಕುವೆಂಪು ಅವರು ಪ್ರಕೃತಿ ಪ್ರೇಮಿಯೂ ಆಗಿದ್ದರು. ಮಹಾನ್ ಸ್ವಾಭಿಮಾನಿ ಕುವೆಂಪು ಅವರು ತಾತ್ವಿಕ ಹಾಗೂ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ರಚಿಸಿದ ಸಾಹಿತ್ಯ ಕೃತಿಗಳಲ್ಲಿ ಪ್ರಕೃತಿ ಆರಾಧನೆ ಕಾಣಬಹುದು. ಕುವೆಂಪು ಕವಿ ಮಾತ್ರವಲ್ಲದೆ ಸ್ವಾತಂತ್ರ್ಯ ಹೋರಾಟಗಾರರು ಹೌದು. ಹಲವಾರು ಹೋರಾಟ ಗೀತೆಗಳನ್ನು ರಚಿಸಿ ಜನರಲ್ಲಿ ಸ್ವಾತಂತ್ರ್ಯ ಕಿಚ್ಚು ತುಂಬಿದರು. ರೈತರನ್ನು ನೇಗಿಲ ಯೋಗಿಯಾಗಿ ಕಂಡು ಸರ್ವ ಜನಾಂಗದ ಶಾಂತಿಯ ತೋಟದಲ್ಲಿ ಸಾಹಿತ್ಯದ ಮೂಲಕ ಕೃಷಿ ಮಾಡಿದರು ಎಂದರು.

ಈ ವೇಳೆ ರಾಷ್ಟ್ರಕವಿ ಕುವೆಂಪು ಜಯಂತಿ ಅಂಗವಾಗಿ ಪ್ರೌಢಶಾಲಾ ಹಾಗೂ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಸ್ಮರಣಿಕೆ ಹಾಗೂ ಪ್ರಮಾಣಪತ್ರ ವಿತರಿಸಲಾಯಿತು.

ನಗರಸಭಾ ಸದಸ್ಯೆ ಹೆಚ್.ಎಸ್.ಮಮತ, ತಹಸೀಲ್ದಾರ್ ಬಸವರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಕನ್ನಡಪರ ಸಂಘಟನೆ ಮುಖಂಡರಾದ ಶ್ರೀನಿವಾಸಗೌಡ ಇತರರಿದ್ದರು.

ಬಿಳಿಗಿರಿರಂಗನಾಥಸ್ವಾಮಿಯ ಸಂಕ್ರಾಂತಿ ರಥೋತ್ಸವ ಪೂರ್ವಭಾವಿ

ಭಕ್ತರಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಸಿದ್ಧತೆ ಕೈಗೊಳ್ಳಿ



ಚಾಮರಾಜನಗರ, ಡಿ.29– ಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ ಬಿಳಿಗಿರಿರಂಗನ ಬೆಟ್ಟದಲ್ಲಿ ಜ.16ರಂದು ನಡೆಯುವ ಬಿಳಿಗಿರಿರಂಗನಾಥಸ್ವಾಮಿ ಸಂಕ್ರಾಂತಿ ರಥೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಎಲ್ಲಾ ಸೌಲಭ್ಯ ಕಲ್ಪಿಸಲು ಸಿದ್ಧತೆ ಕೈಗೊಳ್ಳುವಂತೆ ಶಾಸಕ ಎ.ಆರ್.ಕೃಷ್ಣಮೂರ್ತಿ ಅಧಿಕಾರಿಗಳಿಗೆ ಸೂಚಿಸಿದರು.

ಬಿಳಿಗಿರಿರಂಗನ ಬೆಟ್ಟದ ಲೋಕೋಪಯೋಗಿ ಇಲಾಖೆ ಪ್ರವಾಸಿ ಮಂದಿರದ ಸಭಾಂಗಣದಲ್ಲಿ ಬಿಳಿಗಿರಿರಂಗನಾಥ ಸ್ವಾಮಿಯ ಸಂಕ್ರಾಂತಿ ರಥೋತ್ಸವ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಥೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಮೂಲ ಸೌಕರ್ಯ ಕಲ್ಪಿಸಬೇಕು. ಕುಡಿಯುವ ನೀರು ಸಮರ್ಪಕವಾಗಿ ಪೂರೈಸಬೇಕಿದೆ. ಪ್ರಸ್ತುತ ಇರುವ ಕೊಳವೆ ಬಾವಿಗಳನ್ನು ದುರಸ್ತಿಪಡಿಸಬೇಕು. ಪೈಪ್‌ಲೈನ್ ಕಾರ್ಯ ಪೂರ್ಣಗೊಳಿಸಬೇಕು. ವಾಟರ್ ಟ್ಯಾಂಕರ್‌ಗಳ ಮೂಲಕವು ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಾಗಬೇಕೆಂದು ತಿಳಿಸಿದರು.

ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುವ ಹಿನ್ನೆಲೆಯಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆ ದುರಸ್ತಿಗೊಳಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಜಾತ್ರಾ ಕರ್ತವ್ಯಕ್ಕೆ ನಿಯೋಜನೆಗೊಳ್ಳುವ ಅಧಿಕಾರಿಗಳಿಗೆ ಪ್ರವಾಸಿ ಮಂದಿರದ ಕೊಠಡಿಗಳನ್ನು ಕಾಯ್ದಿರಿಸಬೇಕು ಎಂದರು.

ಭಕ್ತರ ಅನುಕೂಲಕ್ಕಾಗಿ ಹೆಚ್ಚಿನ ಸಾರಿಗೆ ಬಸ್‌ಗಳನ್ನು ನಿಯೋಜಿಸಬೇಕು. ಬಸ್‌ಗಳ ನಿಲುಗಡೆಗೆ ನಿಗದಿತ ಸ್ಥಳ ಗುರುತಿಸಬೇಕು. ಸಂಚಾರಕ್ಕೆ ಯಾವುದೇ ಅಡಚಣೆಯಾಗಬಾರದು. ಜಾತ್ರಾ ಸಂದರ್ಭ ನಿರಂತರ ವಿದ್ಯುತ್ ಪೂರೈಕೆ ಮಾಡಬೇಕು. ವೈದ್ಯಕೀಯ ಸಿಬ್ಬಂದಿ, ಆಂಬುಲೆನ್ಸ್, ಅಗ್ನಿಶಾಮಕ ವಾಹನಗಳು ಇರಬೇಕು. ವಿದ್ಯುತ್ ದೀಪಗಳ ವ್ಯವಸ್ಥೆ, ಚರಂಡಿ ಸ್ವಚ್ಛ, ಕ್ಷೇತ್ರದಲ್ಲಿ ನೈರ್ಮಲ್ಯ ಕಾಪಾಡಲು ಅಗತ್ಯ ವ್ಯವಸ್ಥೆ ಮಾಡಬೇಕು. ಜಾತ್ರಾ ರಥೋತ್ಸವ ಸುಗಮವಾಗಿ ನಡೆಯಲು ಪೂರಕವಾಗಿರುವ ಎಲ್ಲಾ ಸಿದ್ಧತೆ ಕೈಗೊಳ್ಳುವಂತೆ ತಿಳಿಸಿದರು.

ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿ, ಒಂದು ವಾರಕ್ಕೂ ಮುಂಚೆಯೇ ಎಲ್ಲಾ ಸಿದ್ಧತೆ ಪೂರ್ಣಗೊಳಿಸಲು ಅಧಿಕಾರಿಗಳು ನಿಗಾ ವಹಿಸಬೇಕು. ಶುದ್ಧ ಕುಡಿಯುವ ನೀರು, ಮೊಬೈಲ್ ಶೌಚಾಲಯ, ಸಾರಿಗೆ ವಾಹನಗಳ ನಿಯೋಜನೆ ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನು ಅಗತ್ಯಕ್ಕೆ ಅನುಗುಣವಾಗಿ ಪೂರೈಸುವಂತೆ ನಿರ್ದೇಶನ ನೀಡಿದರು.

ಈ ವೇಳೆ ಎಸ್ಪಿ ಪದ್ಮಿನಿ ಸಾಹು, ಎಸಿ ಮಹೇಶ್, ತಹಸೀಲ್ದಾರ್ ಜಯಪ್ರಕಾಶ್, ತಾಪಂ ಇಓ ಶ್ರೀನಿವಾಸ್, ದೇವಾಲಯದ ಪ್ರಧಾನ ಆಗಮಿಕ ನಾಗೇಂದ್ರ ಭಟ್, ಅರ್ಚಕ ರವಿಕುಮಾರ್, ಗ್ರಾಪಂ ಅಧ್ಯಕ್ಷ ಪ್ರದೀಪ್ ಕುಮಾರ್, ಉಪಾಧ್ಯಕ್ಷೆ ಕಮಲಮ್ಮ, ಸದಸ್ಯರಾದ ಸಾಕಮ್ಮ, ಮಾದಮ್ಮ, ರಂಗಮ್ಮ, ಬಸವಣ್ಣ, ಸಿರಿ ಮಹದೇವ, ಡಿವೈಎಸ್‌ಪಿ ಸೋಮಣ್ಣೇಗೌಡ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಚಿದಂಬರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿದ್ದರು.

ಲೋಕಸಭಾ ಚುನಾವಣೆ: 28 ಕ್ಷೇತ್ರಗಳಲ್ಲೂ ಬಿಜೆಪಿ ಗೆಲುವು

ಬಿಜೆಪಿ ನೂತನ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ವಿಶ್ವಾಸ



ಚಾಮರಾಜನಗರ, ಡಿ.29– ವಚನಭ್ರಷ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ಬಿಜೆಪಿ ನೂತನ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ವಾಗ್ದಾಳಿ ನಡೆಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣಾ ಪೂರ್ವದಲ್ಲಿ 5 ಗ್ಯಾರಂಟಿಗಳನ್ನು ಘೋಷಿಸಿ, ಮನೆ ಮನೆಗೆ ಗ್ಯಾರಂಟಿ ಕಾರ್ಡ್‌ಗಳನ್ನು ವಿತರಿಸಿ 130ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದರು. ಬಳಿಕ ಅಧಿಕಾರಕ್ಕೆ ಬಂದ 3 ತಿಂಗಳಿಗೆ ನುಡಿದಂತೆ ನಡೆದಿದ್ದೇವೆ ಎಂದು ಜಾಹೀರಾತು ಫಲಕಗಳಲ್ಲಿ ಹಾಕಿಸಿಕೊಂಡರು. ಆದರೆ 5 ಗ್ಯಾರಂಟಿಗಳನ್ನು ಸಮರ್ಪಕವಾಗಿ ಈಡೇರಿಸದೇ ವಚನಭ್ರಷ್ಟ ಮುಖ್ಯಮಂತ್ರಿಯಾಗಿದ್ದಾರೆ ಎಂದು ಹರಿಹಾಯ್ದರು.

ನನ್ನನ್ನು ರಾಜ್ಯ ಬಿಜೆಪಿ ಉಪಾಧ್ಯಕ್ಷನಾಗಿ ನೇಮಕ ಮಾಡಲು ರಾಷ್ಟ್ರದ, ರಾಜ್ಯದ ಎಲ್ಲಾ ಮುಖಂಡರು ಒಪ್ಪಿಗೆ ಸೂಚಿಸಿದ್ದಾರೆ. ಯಾವುದೇ ಹುದ್ದೆಗೆ ಆಯ್ಕೆ ಮಾಡಲು ಅಳೆದು ತೂಗಿ ಆಯ್ಕೆ ಮಾಡಲಾಗುತ್ತದೆ. ಈ ವೇಳೆ ಕೆಲವು ಅಸಮಾಧಾನ ಇದ್ದೆ ಇರುತ್ತದೆ. ಅವುಗಳು ಮುಂದಿನ ದಿನಗಳಲ್ಲಿ ಬಗೆಹರಿಯಲಿದೆ. ಹೀಗಾಗಿ ನಿಮ್ಮೆಲ್ಲರ ಬೆಂಬಲವೂ ಅಗತ್ಯ ಎಂದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳನ್ನು ಗೆಲ್ಲುವುದಾಗಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪಣ ತೊಟ್ಟಿದ್ದಾರೆ. ಹೀಗಾಗಿ ನಾವೆಲ್ಲರೂ ಸಂಘಟಿತರಾಗಿ ಲೋಕಸಭಾ ಚುನಾವಣೆಯನ್ನು ಸಮರ್ಥವಾಗಿ ಎದುರಿಸಿ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲೂ ಕಮಲ ಅರಳಿಸುವ ಸಂಕಲ್ಪ ಮಾಡೋಣ ಎಂದ ಅವರು, ಬಿಜೆಪಿ–ಜೆಡಿಎಸ್ ಪಕ್ಷಗಳು ಮೈತ್ರಿ ಮಾಡಿಕೊಂಡಿದ್ದು, ಎಲ್ಲಾ 28 ಕ್ಷೇತ್ರಗಳಲ್ಲೂ ಗೆಲುವು ಸಾಧಿಸಲಿದ್ದೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾರಾಯಣ ಪ್ರಸಾದ್, ಮಾಜಿ ಶಾಸಕರಾದ ಎಸ್.ಬಾಲರಾಜ್, ನಿರಂಜನ ಕುಮಾರ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಚಾಮುಲ್ ಅಧ್ಯಕ್ಷ ನಾಗೇಂದ್ರ, ಮಾಜಿ ಅಧ್ಯಕ್ಷ ಆರ್.ಸುಂದರ್, ಜಿಲ್ಲಾ ವಕ್ತಾರ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ನಾಗಶ್ರೀ ಪ್ರತಾಪ್, ಮಹದೇವಸ್ವಾಮಿ, ಮುಖಂಡರಾದ ನೂರೊಂದು ಶೆಟ್ಟಿ, ಡಾ.ಎ.ಆರ್.ಬಾಬು, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಪ್ರಕಾಶ್, ಎಸ್‌ಟಿ ಮೋರ್ಚಾ ಜಿಲ್ಲಾಧ್ಯಕ್ಷ ಜಯಸುಂದರ್, ನಗರ ಮಂಡಲ ಅಧ್ಯಕ್ಷ ರಾಜು, ಪ್ರಧಾನ ಕಾರ್ಯದರ್ಶಿ ಶಿವು ಇತರರಿದ್ದರು.

ಪ್ರತಿಯೊಬ್ಬರಿಗೂ ಗ್ರಾಹಕ ಹಕ್ಕುಗಳ ಜಾಗೃತಿ ಅಗತ್ಯ: ಡಿಸಿ



ಚಾಮರಾಜನಗರ, ಡಿ.29– ಇತ್ತೀಚಿನ ದಿನಗಳಲ್ಲಿ ಮಕ್ಕಳೇ ಹೆಚ್ಚು ಗ್ರಾಹಕರಾಗಿದ್ದು, ಅವಶ್ಯಕ ವಸ್ತುಗಳನ್ನು ಆನ್‌ಲೈನ್ ಹಾಗೂ ಆಫ್‌ಲೈನ್‌ನಲ್ಲಿ ಖರೀದಿಸುತ್ತಿದ್ದಾರೆ. ಹೀಗಾಗಿ ಮಕ್ಕಳು, ಪೋಷಕರು ಗ್ರಾಹಕರ ಕಾಯ್ದೆಗಳ ಬಗ್ಗೆ ಅರಿವು ಹೊಂದಿದಾಗ ಖರೀದಿಯಲ್ಲಿ ಮೋಸ ಹೋಗದಂತೆ ಎಚ್ಚರ ವಹಿಸಬಹುದು ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದರು.

ನಗರದ ಹಳೇ ಕೆಡಿಪಿ ಸಭಾಂಗಣದಲ್ಲಿ ಶುಕ್ರವಾರ ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಕಾನೂನು ಮಾಪನ ಶಾಸ್ತ್ರ ಇಲಾಖೆ ಹಾಗೂ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಗ್ರಾಹಕ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು. ಗ್ರಾಹಕರು ಸರಕು ಮತ್ತು ಸೇವೆಗಳಲ್ಲಿ ಮೋಸ ಹೋಗದಂತೆ ಜಾಗರೂಕರಾಗಬೇಕು. ವಸ್ತುಗಳಲ್ಲಿ ಯಾವುದೇ ಲೋಪದೋಷ ಕಂಡು ಬರದಂತೆ ಸೇವೆ ಪಡೆಯಬೇಕು. ಗ್ರಾಹಕರು ವಸ್ತುಗಳನ್ನು ಖರೀದಿಸುವಾಗ ವಸ್ತುಗಳ ಬೆಲೆ, ಗುಣಮಟ್ಟ ಹಾಗೂ ನಿರ್ದಿಷ್ಟ ಅವಧಿ ಎಲ್ಲವನ್ನು ಸರಿಯಾಗಿ ನೋಡಬೇಕು. ಗ್ರಾಹಕರ ಕಾನೂನುಗಳ ಬಗ್ಗೆ ಹೆಚ್ಚಿನ ಜಾಗೃತಿ ವಹಿಸಬೇಕು ಎಂದರು.

ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರ ಇಲಾಖೆ ಉಪನಿರ್ದೇಶಕ ಯೋಗಾನಂದ ಮಾತನಾಡಿ, ಪ್ರತಿಯೊಬ್ಬರೂ ಗ್ರಾಹಕರೆ. ರಾಷ್ಟ್ರೀಯ ಗ್ರಾಹಕರ ದಿನದ ಅಂಗವಾಗಿ ಎಲ್ಲರೂ ಗ್ರಾಹಕರ ಕಾನೂನಿನ ಬಗ್ಗೆ ತಿಳಿದುಕೊಳ್ಳಬೇಕು. ಗ್ರಾಹಕರ ಹಕ್ಕುಗಳ ರಕ್ಷಣೆ ಜವಾಬ್ದಾರಿ ಎಲ್ಲರ ಹೊಣೆಯಾಗಿದೆ. ಗ್ರಾಹಕರು ಪ್ರತಿಯೊಂದು ವಸ್ತುಗಳ ಬಗ್ಗೆ ಸರಿಯಾದ ಕಾಳಜಿ ವಹಿಸಬೇಕು. ಸರಕು ಮತ್ತು ಸೇವೆಗಳ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬೇಕು ಎಂದರು. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎಂ.ವಿ.ಭಾರತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಗ್ರಾಹಕರು ಸರಕು ಮತ್ತು ಸೇವೆಗಳಲ್ಲಿ ಮೋಸ ಹೋದಾಗ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಕೇಂದ್ರದಲ್ಲಿ ದಾವೆ ಹೂಡಬಹುದು. ಗ್ರಾಹಕರು ವಸ್ತುಗಳ ಕೊಂಡುಕೊಳ್ಳುವಾಗ ವಸ್ತುಗಳ ಪೂರ್ಣ ಮಾಹಿತಿ ತಿಳಿದಿರಬೇಕು. ಇ–ಕಾರ್ಮಸ್‌ನಡಿ ವ್ಯಾಪಾರ ವ್ಯವಹಾರ ನಡೆಸುವಾಗ ಷರತ್ತುಗಳ ಬಗ್ಗೆ ಸಂಪೂರ್ಣ ತಿಳಿದುಕೊಳ್ಳಬೇಕು ಎಂದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯ ಕೆ.ಎಸ್.ರಾಜು ಮಾತನಾಡಿದರು. ಪ್ರೊಬೆಷನರಿ ತಹಸೀಲ್ದಾರ್ ರಂಜಿತ್, ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದ ಸಂಯೋಜಕಿ ಶಿವರಾಜಮ್ಮ, ಕಾನೂನು ಮಾಪನ ಶಾಸ್ತ್ರ ಇಲಾಖೆ ಸಹಾಯಕ ನಿಯಂತ್ರಕ ಬಿ.ಎನ್.ರಾಜೀವ್ ಇತರರಿದ್ದರು.

ಕಾರ್ಯಕ್ರಮಕ್ಕೂ ಮುನ್ನಾ ಶಾಟ್‌ಫುಟ್‌ನಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಅಂಧ ವಿದ್ಯಾರ್ಥಿ ಪವನ್‌ರನ್ನು ಜಿಲ್ಲಾಧಿಕಾರಿ ಹಾಗೂ ಗಣ್ಯರು ಸನ್ಮಾನಿಸಿದರು.

ಸರ್ಕಾರಿ ಶಾಲೆಗಳ ಕುಡಿಯುವ ನೀರು, ಶೌಚಾಲಯ ನಿರ್ವಹಣೆಗೆ 43.52 ಕೋಟಿ ಬಿಡುಗಡೆ

ಮೈಸೂರು, ಡಿ.29(ಎಸ್‌ಪಿಎನ್)– 2023–24ನೇ ಸಾಲಿಗೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕುಡಿಯುವ ನೀರು ಮತ್ತು ಶೌಚಾಲಯಗಳ ವಾರ್ಷಿಕ ನಿರ್ವಹಣೆ ಹಾಗೂ ಶಾಲೆಯ ಇತರೆ ವೆಚ್ಚಕ್ಕಾಗಿ ರಾಜ್ಯ ಸರ್ಕಾರ 4352.47 ಲಕ್ಷ ರೂ.ಗಳನ್ನು ರಾಜ್ಯದ ಎಲ್ಲಾ ಡಿಡಿಪಿಐ ಹಾಗೂ ಬಿಇಓ ಖಾತೆಗಳಿಗೆ ಬಿಡುಗಡೆಗೊಳಿಸಿ ಶುಕ್ರವಾರ ಆದೇಶಿಸಿದೆ.

ಈ ಅನುದಾನವನ್ನು ಆದ್ಯತೆ ಮೇರೆಗೆ ಶೌಚಾಲಯ ನಿರ್ವಹಣೆಗೆ ಬಳಸಿಕೊಂಡು, ನೈರ್ಮಲ್ಯಕ್ಕೆ ಪ್ರಥಮ ಆದ್ಯತೆ ನೀಡಬೇಕು. ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ಸ್ವಚ್ಛತಾ ಕಾರ್ಯಕ್ಕೆ ವಿದ್ಯಾರ್ಥಿಗಳನ್ನು ಬಳಸಿಕೊಂಡಿರುವ ಕೆಲವು ಪ್ರಕರಣಗಳು ಬೆಳಕಿಗೆ ಬಂದಿದ್ದು, ಕಡ್ಡಾಯವಾಗಿ ವಿದ್ಯಾರ್ಥಿಗಳನ್ನು ಈ ಕಾರ್ಯಕ್ಕೆ ಬಳಸಬಾರದು ಎಂದು ಸೂಚಿಸಿದೆ. ಈ ಅನುದಾನವನ್ನು ಪ್ರೌಢಶಾಲೆಗಳಿಗೆ ಯು–ಮೋಡ್ (U-Mode) ನಲ್ಲಿ ಬಿಡುಗಡೆ ಮಾಡಲು ಸೂಚಿಸಿದೆ.

ಒಂದು ಯು ಡೈ ಸಂಖ್ಯೆಯಲ್ಲಿ ಎರಡು, ಮೂರು ಅಥವಾ 4 ಶಾಲೆಗಳು ಇರುವುದು ಕಂಡು ಬಂದಿರುತ್ತದೆ. ಅಂತಹ ಶಾಲೆಗಳನ್ನು ಒಂದು ಶಾಲೆ ಎಂದು ಪರಿಗಣಿಸಿ, ಮಕ್ಕಳ ದಾಖಲಾತಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡುವಂತೆ ಸೂಚಿಸಿದೆ. ಈ ಅನುದಾನವನ್ನು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಬಿಡುಗಡೆಗೊಳಿಸಿ, ಇದರ ಉಸ್ತುವಾರಿಯನ್ನು ಡಿಡಿಪಿಐ ಮತ್ತು ಬಿಇಓಗಳು ಉಸ್ತುವಾರಿ ವಹಿಸಿಕೊಂಡು ರಾಜ್ಯ ಎಲ್ಲಾ ಮುಖ್ಯಶಿಕ್ಷಕರಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆಯೂ ಸೂಚಿಸಿದೆ.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 1ರಿಂದ 50ರವರೆಗೆ ವಿದ್ಯಾರ್ಥಿಗಳಿಗೆ 20 ಸಾವಿರ, 51ರಿಂದ 100ರವರೆಗೆ 28 ಸಾವಿರ ರೂ., 101ರಿಂದ 500 ವಿದ್ಯಾರ್ಥಿಗಳಿಗೆ 33 ಸಾವಿರ, 501ರಿಂದ ಇರುವ ಶಾಲೆಗಳಿಗೆ 45 ಸಾವಿರ ರೂ.ಗಳನ್ನು ನಿಗಧಿಪಡಿಸಿ, ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಶುಕ್ರವಾರ ಆದೇಶಿಸಿದ್ದಾರೆ.

> ಪ್ರಸ್ತುತ ವರ್ಷದಿಂದ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡಲಾಗುವುದು. ಅದನ್ನು ಶೌಚಾಲಯದ ಶುಚಿತ್ವ ಹಾಗೂ ನಿರ್ವಹಣೆಗೆ ಬಳಸಬೇಕೆಂದು ಶೀಘ್ರ ಆದೇಶ ಹೊರಡಿಸಲಾಗುವುದು. ಮಕ್ಕಳು ಶಾಲೆಗಳಲ್ಲಿ ಶೌಚಾಲಯ ಶುಚಿಗೊಳಿಸುವುದನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಇದರ ನಿಯಂತ್ರಣಕ್ಕೆ ಶಾಲಾಭಿವೃದ್ಧಿ ಸಮಿತಿ ಮತ್ತು ಶಾಲೆ ಜಂಟಿಯಾಗಿ ಕಾರ್ಯನಿರ್ವಹಿಸಲು ಹೊಸ ಆದೇಶ ಹೊರಡಿಸಲಾಗುವುದು.
>
> -ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ.



ಇಂದು ಜಿಲ್ಲಾ ಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆ



ಮೈಸೂರು, ಡಿ.29(ಎಸ್‌ಪಿಎನ್)– ಜಿಲ್ಲಾ ಮಟ್ಟದ ಸೀನಿಯರ್ ಪವರ್ ಲಿಫ್ಟಿಂಗ್ ಸ್ಪರ್ಧೆಯು ಮೈಸೂರು ಜಿಲ್ಲಾ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಹಾಗೂ ಭೀಮಾ ಫಿಟ್‌ನೆಸ್ ನೇತೃತ್ವದಲ್ಲಿ ಡಿ.30ರಂದು ಬೆಳಗ್ಗೆ 8 ಗಂಟೆಗೆ ಮೈಸೂರು ಅಶೋಕಪುರಂನ 3ನೇ ಅಡ್ಡರಸ್ತೆ(ಅರಣ್ಯ ಭವನ ರಸ್ತೆ) ಕೆ.ಶಿವರಾಂ ಕ್ರೀಡಾಂಗಣದಲ್ಲಿ ನಡೆಯಲಿದೆ.

ಕಾರ್ಯಕ್ರಮವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಲಿದ್ದು, ಶಾಸಕರಾದ ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ ಹಾಗೂ ಚನ್ನಪಟ್ಟಣದ ಕೆಎಸ್‌ಪಿಟಿಎಸ್ ಪೊಲೀಸ್ ಉಪ ಅಧೀಕ್ಷಕ ಎಲ್.ಕೆ.ರಮೇಶ್ ಸೇರಿದಂತೆ ಇತರೆ ಗಣ್ಯರು ಭಾಗವಹಿಸಲಿದ್ದಾರೆ. ಸಂಜೆ 4 ಗಂಟೆಗೆ ಜಿಲ್ಲಾ ಪವರ್ ಲಿಫ್ಟಿಂಗ್‌ನಲ್ಲಿ ವಿಜೇತರಾದವರಿಗೆ ಸಂಸದ ವಿ.ಶ್ರೀನಿವಾಸ ಪ್ರಸಾದ್ ಬಹುಮಾನ ವಿತರಣೆ ಮಾಡಲಿದ್ದಾರೆ ಎಂದು ಮೈಸೂರು ಜಿಲ್ಲಾ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಅಧ್ಯಕ್ಷ ಯಲ್ಲಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಬೂರು ಡಾ.ವಿಷ್ಣು ಸ್ಮಾರಕ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಡಿ.29(ಜಿಎ)–ನಟ ಡಾ.ವಿಷ್ಣುವರ್ಧನ್ ಅವರ 14ನೇ ಪುಣ್ಯಸ್ಮರಣೆ ಅಂಗವಾಗಿ ರೋಟರಿ ಬೆಂಗಳೂರು ಜಿಲ್ಲೆ 3181, 3192 ಮತ್ತು ಮೈಸೂರು, ಡಾ.ವಿಷ್ಣುವರ್ಧನ್ ಪ್ರತಿಷ್ಠಾನ ಟ್ರಸ್ಟ್, ವಿಭಾ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಡಿ.30ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಎಚ್.ಡಿ. ಕೋಟೆ ಮುಖ್ಯರಸ್ತೆಯ ಉದ್ಬೂರು ಗೇಟ್‌ನಲ್ಲಿರುವ ಡಾ.ವಿಷ್ಣುವರ್ಧನ್ ಸ್ಮಾರಕ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ರೋಟರಿ ಜಿಲ್ಲೆ 3181ರ ಜಿಲ್ಲಾ ಪಾಲಕ ಎಚ್.ಆರ್.ಕೇಶವ್ ತಿಳಿಸಿದರು.

ನಗರದಲ್ಲಿ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಯೋಗ್ ಆಸ್ಪತ್ರೆ, ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ದಂತ ವೈದ್ಯ ಕಾಲೇಜು ಮತ್ತು ಆಸ್ಪತ್ರೆ, ರೆಡ್ ಕ್ರಾಸ್ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಶಿಬಿರ ನಡೆಯಲಿದೆ. ಅಂದು ರಕ್ತದಾನ ಶಿಬಿರ, ರಕ್ತದ ಒತ್ತಡ, ಮಧುಮೇಹ, ಕಣ್ಣಿನ ತಪಾಸಣೆ, ಕ್ಯಾನ್ಸರ್, ಹೃದಯ, ಗರ್ಭಿಣಿಯರ ತಪಾಸಣೆಯನ್ನು ನುರಿತ ವೈದ್ಯರು ಮಾಡುತ್ತಾರೆ ಎಂದು ಮಾಹಿತಿ ನೀಡಿದರು.

ಭಾರತ ರೆಡ್‌ಕ್ರಾಸ್ ಸಂಸ್ಥೆಯವರು ಶಿಬಿರದಲ್ಲಿ ಸಂಗ್ರಹವಾಗುವ ರಕ್ತವನ್ನು ಅಗತ್ಯವಿರುವ ಬಡ ರೋಗಿಗಳಿಗೆ ಉಚಿತವಾಗಿ ವಿತರಿಸುತ್ತಾರೆ. ಹಿರಿಯ ನಟಿ ಭಾರತಿ ವಿಷ್ಣುವರ್ಧನ್, ನಟ ಅನಿರುದ್ಧ್ ಸೇರಿದಂತೆ ಇತರೆ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈ ಶಿಬಿರದಲ್ಲಿ 2000ಕ್ಕೂ ಹೆಚ್ಚು ಅಭಿಮಾನಿಗಳು ಮತ್ತು ಸಾರ್ವಜನಿಕರು ಪಾಲ್ಗೊಂಡು ಆರೋಗ್ಯ ಶಿಬಿರದ ಪ್ರಯೋಜನ ಪಡೆಯಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರೋಟೆರಿಯನ್‌ಗಳಾದ ಮುರಳೀಧರ್, ಎನ್. ಸೆಲ್ವರಾಜ್, ಹರೀಶ್ ಉಪಸ್ಥಿತರಿದ್ದರು.

ಜನವರಿಯಲ್ಲಿ ರಾಜ್ಯ ಸರ್ಕಾರದಿಂದಲೇ ಉದ್ಯೋಗ ಮೇಳ



ಬೆಂಗಳೂರು: ಜನವರಿ ಕೊನೆಯ ವಾರದಲ್ಲಿ ಬೆಂಗಳೂರಿನಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲು ರಾಜ್ಯ ಸರ್ಕಾರ ಯೋಜಿಸಿದೆ. ಅದನ್ನು ಪರಿಣಾಮಕಾರಿಯಾಗಿ ಆಯೋಜಿಸಲು ಸಚಿವರ ತಂಡವನ್ನು ರಚಿಸಲಾಗುವುದು ಎಂದು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಹೇಳಿದ್ದಾರೆ.

ಈ ಸಂಬಂಧ ಹಿರಿಯ ಸಚಿವರು ಹಾಗೂ ಅಧಿಕಾರಿಗಳೊಂದಿಗೆ ಸಿಎಂ ಸಿದ್ದರಾಮಯ್ಯ ಇಂದು ಪೂರ್ವಭಾವಿ ಸಭೆ ನಡೆಸಿದರು. ಈ ವೇಳೆ ರಾಜ್ಯದ ಯುವಕರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಉದ್ಯೋಗ ನೀತಿಯ ಅಗತ್ಯವನ್ನು ಒತ್ತಿ ಹೇಳಿದ ಅವರು, ನೀತಿಯನ್ನು ರೂಪಿಸಲು ಸಿದ್ಧತೆಗಳನ್ನು ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

ಕೈಗಾರಿಕಾ ಸಚಿವ ಎಂ ಬಿ ಪಾಟೀಲ್, ಐಟಿ ಮತ್ತು ಬಿಟಿ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಕೌಶಲ್ಯಾಭಿವೃದ್ಧಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಯುವ ಸಬಲೀಕರಣ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ ನಾಗೇಂದ್ರ, ಕಾರ್ಮಿಕ ಸಚಿವ ಸಂತೋಷ್ ಲಾಡ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನೊಳಗೊಂಡ ಸಚಿವರ ತಂಡವನ್ನು ಸಿಎಂ ಸಿದ್ದರಾಮಯ್ಯ ರಚಿಸಿದರು.

ಸಚಿವರ ತಂಡವು ಉದ್ಯೋಗದಾತರೊಂದಿಗೆ ಸಭೆ ಮತ್ತು ಚರ್ಚೆಗಳನ್ನು ನಡೆಸಬೇಕು ಮತ್ತು ಉದ್ಯೋಗ ಮೇಳದಲ್ಲಿ ಹೆಚ್ಚಿನ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ಅವರು ಹೇಳಿದರು. ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ಉಲ್ಲೇಖಿಸಿದಂತೆ ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದು ಸಿದ್ದರಾಮಯ್ಯ, ಉದ್ಯೋಗಾಕಾಂಕ್ಷಿಗಳ ಕೌಶಲ್ಯದ ನಡುವಿನ ಅಂತರವನ್ನು ಕಡಿಮೆ ಮಾಡಲು ಕೈಗಾರಿಕೆಗಳೊಂದಿಗೆ ಚರ್ಚಿಸಿ ಕಾರ್ಯಕ್ರಮ ರೂಪಿಸಲು ಮತ್ತು ಕೈಗಾರಿಕೆಗಳ ಅಗತ್ಯತೆಗಳು ಪೂರೈಸಲು ಶಿಕ್ಷಣದ ಪಠ್ಯಕ್ರಮವನ್ನು ಮರುಹೊಂದಿಸಲು ಸಚಿವ ತಂಡಕ್ಕೆ ಸೂಚಿಸಿದರು.

ಒಂದನೇ ಪುಟದಿಂದ

ಪರಿಹಾರ ನೀಡುವಂತೆ ಕೋರ್ಟ್ ತೀರ್ಪು

ಪ್ರಿಯದರ್ಶಿನಿ ಪ್ರಚುರಣಾಲು ಪ್ರಕಾಶನದ ಸಂಪಾದಕಿ ವತ್ಸಲಾ ಅವರು 'ವಂಶವೃಕ್ಷಂ' ಅನುವಾದಿತ ಕೃತಿಯನ್ನು ಹೊಸದಾಗಿ ಪ್ರಕಟಿಸಿದ್ದಾರೆ ಎಂಬ ಮಾಹಿತಿ ಎಸ್.ಎಲ್. ಭೈರಪ್ಪನವರಿಗೆ 2021ರ ನವೆಂಬರ್‌ನಲ್ಲಿ ತಿಳಿಯಿತು. ಭೈರಪ್ಪನವರು ವಂಶವೃಕ್ಷ ಕಾದಂಬರಿಯ ತೆಲುಗು ಹಕ್ಕನ್ನು ಸಹರಂಗ ನಾಗಭೂಷಣ್ ಹೊರತುಪಡಿಸಿ ಬೇರೆ ಯಾರಿಗೂ ನೀಡಿರಲಿಲ್ಲ. ಆದರೆ ತಮ್ಮಿಂದ ಹಕ್ಕು ಪಡೆಯದ ವತ್ಸಲಾ ಅವರು ತೆಲುಗು ಅನುವಾದಿತ ವಂಶವೃಕ್ಷಂ ಕೃತಿಯ 1000 ಪ್ರತಿಯನ್ನು ಅನಧಿಕೃತವಾಗಿ ಮುದ್ರಿಸಿ, ಪುಸ್ತಕಕ್ಕೆ ರೂ. 360 ಬೆಲೆ ನಿಗದಿಪಡಿಸಿದ್ದರು.

ಈ ವಿಚಾರ ಬೆಳಿಯುತ್ತಿದ್ದಂತೆಯೇ ಎಸ್.ಎಲ್.ಭೈರಪ್ಪನವರು 2021ರ ನ.15ರಂದು ತನ್ನ ವಕೀಲರ ಮೂಲಕ ವತ್ಸಲಾ ಅವರಿಗೆ ನೋಟೀಸು ನೀಡಿ ಅನಧಿಕೃತವಾಗಿ ಪ್ರಕಟಿಸಿದ 'ವಂಶವೃಕ್ಷಂ' ಕಾದಂಬರಿಯ ಪ್ರತಿಗಳನ್ನು ಮಾರಾಟ ಮಾಡದಂತೆಯೂ, ಅನಧಿಕೃತವಾಗಿ ಮುದ್ರಿಸಿರುವ ಪ್ರತಿಗಳನ್ನು ತಮಗೆ ಒಪ್ಪಿಸಬೇಕೆಂದೂ, ಕಾಪಿ ರೈಟ್ ಕಾಯ್ದೆ ಉಲ್ಲಂಘಿಸಿರುವುದರಿಂದ ತಮಗೆ 5 ಲಕ್ಷ ರೂ. ನೀಡುವಂತೆಯೂ ನೋಟಿಸ್‌ನಲ್ಲಿ ತಾಕೀತು ಮಾಡಿದ್ದರು. ಭೈರಪ್ಪನವರ ನೋಟೀಸ್‌ಗೆ ವತ್ಸಲಾ ಅವರು ಸ್ಪಂದಿಸದ ಕಾರಣ ಎಸ್.ಎಲ್.ಭೈರಪ್ಪನವರು ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ಕಾಪಿ ರೈಟ್ ಕಾಯ್ದೆ ಉಲ್ಲಂಘನೆ ಸಂಬಂಧ ವತ್ಸಲಾ ಅವರು ತಮಗೆ 5.05 ಲಕ್ಷ ರೂ. ನೀಡಬೇಕೆಂದು ಪ್ರಕರಣ ಹೂಡಿದ್ದರು. ಈ ಪ್ರಕರಣದಲ್ಲಿ ಕೋರ್ಟ್ ಕಮಿಷನರ್ ಪಿ.ಜೆ.ರಾಘವೇಂದ್ರ ಅವರು ಎಸ್.ಎಲ್.ಭೈರಪ್ಪನವರ ಮನೆಗೆ ತೆರಳಿ ಅವರ ಸಾಕ್ಷ್ಯ ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ವರದಿ ನೀಡಿದ್ದರು.

ಪ್ರಕರಣದ ವಾದ-ಪ್ರತಿವಾದವನ್ನು ಆಲಿಸಿದ ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀಮತಿ ಪ್ರಭಾವತಿ ಎಂ ಹಿರೇಮಠ್ ಅವರು ಪ್ರಿಯದರ್ಶಿನಿ ಪ್ರಚುರಣಾಲು ಪ್ರಕಾಶನದ ವತ್ಸಲಾ ಅವರು 5.05 ಲಕ್ಷ ರೂ. ಹಾಗೂ ಮುದ್ರಿತ 'ವಂಶವೃಕ್ಷಂ' ಕಾದಂಬರಿಯ ಎಲ್ಲಾ ಪ್ರತಿಗಳನ್ನು ಭೈರಪ್ಪನವರಿಗೆ ನೀಡುವಂತೆಯೂ ಅಲ್ಲದೇ ಅನುವಾದಿತ ವಂಶವೃಕ್ಷಂ ಕೃತಿಯನ್ನು ಮತ್ತೆ ಮರುಮುದ್ರಿಸದಂತೆ ಹಾಗೂ ಮಾರಾಟ ಮಾಡದಂತೆಯೂ ತೀರ್ಪು ನೀಡಿದ್ದಾರೆ.ಎಸ್.ಎಲ್.ಭೈರಪ್ಪನವರ ಪರವಾಗಿ ಹಿರಿಯ ವಕೀಲ ಓ.ಶ್ಯಾಮ್ ಭಟ್ ವಕಾಲತ್ತು ವಹಿಸಿದ್ದರು.

ಮಾಸಿಕ ವೇತನದಲ್ಲಿ 5 ಸಾವಿರ ಹೆಚ್ಚಳ

ನೀಡಲಾಗುವುದು ಎಂದು ತಿಳಿಸಿದರು. ಹೆಚ್ಚು ಸೇವೆ ಸಲ್ಲಿಸಿದ ಅತಿಥಿ ಉಪನ್ಯಾಸಕರಿಗೆ ಗೌರವ ಧನ ಹೆಚ್ಚಳ ಮಾಡಲಾಗುವುದು, ಈ ಎಲ್ಲಾ ನಿರ್ಧಾರಗಳು 2,800 ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಉಪನ್ಯಾಸಕರಿಗೂ ಅನ್ವಯವಾಗುತ್ತದೆ.

ಸರ್ಕಾರದ ಈ ನಿರ್ಧಾರದಿಂದ ಬೊಕ್ಕಸಕ್ಕೆ ವಾರ್ಷಿಕ 55 ಕೋಟಿ ರೂ. ಹೊರೆ ಬೀಳಲಿದ್ದು, ಇಡುಗಂಟಿಗೆ 72 ಕೋಟಿ ರೂ. ವಿಮೆಗೆ 5 ಕೋಟಿ ರೂ. ಹೊರೆ ಬೀಳಲಿದೆ ಎಂದರು. ಮುಷ್ಕರ ನಿರತ ಉಪನ್ಯಾಸಕರು ತಮ್ಮ ಹೋರಾಟದಿಂದ ಹಿಂದೆ ಸರಿದು ಜನವರಿ 1ರಿಂದ ಸೇವೆಗೆ ಮರಳುವಂತೆ ಮನವಿ ಮಾಡಿಕೊಂಡರು.

ಸಂಪುಟ ದರ್ಜೆ ಸ್ಥಾನಮಾನ

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲ ಅವರು ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ಅವರ ಜೊತೆ ಚರ್ಚೆ ನಡೆಯುವ ವೇಳೆಯಲ್ಲೇ ರಾಯರರೆಡ್ಡಿ ಅವರನ್ನು ಕರೆದು ನಿಗಮ ಮಂಡಳಿ ತೆಗೆದುಕೊಳ್ಳಿ ಎಂದು ಒತ್ತಾಯಿಸಿದ್ದರು. ಆದರೆ, ರಾಯರೆಡ್ಡಿ ಕೊಡುವುದಾದರೆ ಮಂತ್ರಿ ಸ್ಥಾನ ನೀಡಿ. ಇಲ್ಲವಾದಲ್ಲಿ ಯಾವುದೇ ನಿಗಮ ಮಂಡಳಿ ಬೇಡ ಎಂದು ಕಡ್ಡಿ ಮುರಿದಂತೆ ಹೇಳಿದ್ದರು. ಇನ್ನು ಮತ್ತೋರ್ವ ಹಿರಿಯ ಶಾಸಕ ಬಿಆರ್ ಪಾಟೀಲ್ ಸಚಿವ ಸ್ಥಾನ ಸಿಗದಿದ್ದಕ್ಕೆ ಅಸಮಾಧಾನದಲ್ಲಿದ್ದರು. ಇದರ ಬೆನ್ನಲ್ಲೇ ಇವರ ಪತ್ರಗಳಿಗೆ, ಫೋನ್ ಕೆಲ ಸಚಿವರು ಸರಿಯಾಗಿ ಸ್ಪಂದಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ ಆಕ್ರೋಶಗೊಂಡು ಸಿಎಂಗೆ ಪ್ರತ ಬರೆದಿದ್ದರು. ಕೂಡಲೇ ಶಾಸಕಾಂಗ ಸಭೆ ಕರೆಯಬೇಕು, ಸಚಿವರಿಗೆ ತಿಳಿವಳಿಕೆ ಹೇಳಬೇಕೆಂದಿದ್ದರು. ಅದರಂತೆ ಸಿದ್ದರಾಮಯ್ಯ ಶಾಸಕಾಂಗ ಸಭೆ ಕರೆದು ಶಾಸಕರನ್ನು ಗಣನೆಗೆ ತೆಗೆದುಕೊಂಡು ಕೆಲಸ ನಿರ್ವಹಿಸುವಂತೆ ಸೂಚಿಸಿದ್ದರು. ಇದಾದ ನಂತರ ತಮ್ಮ ಕ್ಷೇತ್ರದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಬಹಿರಂಗವಾಗಿಯೇ ಅಸಮಾಧಾನ ಹೊರ ಹಾಕಿದ್ದರು. ಈ ಮೂವರು ಶಾಸಕರು ಸಿದ್ದರಾಮಯ್ಯನವರ ಬಣದಲ್ಲೇ ಗುರುತಿಸಿಕೊಂಡವರು. ಇದೀಗ ಸಿದ್ದರಾಂಯ್ಯನವರು ತಮ್ಮ ಆಪ್ತ ಶಾಸಕರಿಗೆ ಹೊಸ ಹುದ್ದೆ ಸೃಷ್ಟಿಸಿದ್ದಾರೆ.

ಸೆಮಿ ಕಂಡಕ್ಟರ್ ಘಟಕ ತೆಲಂಗಾಣ ಪಾಲು

ಹೋದರು. ಅಲ್ಲಿ ಸೆಮಿ ಕಂಡಕ್ಟರ್ ಘಟಕ ಸ್ಥಾಪಿಸಲು ಭೂಮಿ ಪೂಜೆ ಕೂಡ ನೆರವೇರಿಸಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಭೂಮಿ ನೀಡದ ಕಾರಣ ಮೈಸೂರಿನಲ್ಲಿ ಸ್ಥಾಪನೆಯಾಗಬೇಕಿದ್ದ ಉದ್ಯಮ ಬೇರೆ ರಾಜ್ಯದ ಪಾಲಾಯಿತು ಎಂದು ಪ್ರತಾಪ್ ಸಿಂಹ ಆರೋಪಿಸಿದರು.

ಸತ್ಯ ಜನರಿಗೆ ತಿಳಿದಿದೆ: ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಬಗ್ಗೆ ಪ್ರತಾಪ್ ಸಿಂಹ ಬುರುಡೆ ಬಿಡುತ್ತಿದ್ದಾರೆ ಎಂಬ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಟೀಕೆಗೆ ಕಿಡಿಕಾರಿದ ಪ್ರತಾಪ್ ಸಿಂಹ, ಎಕ್ಸ್‌ಪ್ರೆಸ್ ವೇ ಯೋಜನೆ ನರೇಂದ್ರ ಮೋದಿ ಅವರ ಕೊಡುಗೆಯಾಗಿದ್ದು, ಇದರ ಸತ್ಯ ಜನರಿಗೆ ತಿಳಿದಿದೆ. ಈ ವಿಚಾರವನ್ನು ಇವರಿಗೆ ಮನದಟ್ಟು ಮಾಡಿ ನಂಬಿಸಬೇಕಾದ ಅಗತ್ಯವಿಲ್ಲ ಎಂದು ಡಾ. ಮಹದೇವಪ್ಪಗೆ ತಿರುಗೇಟು ನೀಡಿದರು. ಇಷ್ಟೆಲ್ಲಾ ಮಾತನಾಡುವ ರಾಜ್ಯ ಕಾಂಗ್ರೆಸ್ ಸರ್ಕಾರ ಹೆಚ್.ಡಿ.ಕೋಟೆಯಿಂದ ಮಾನಂದವಾಡಿ ತನಕ ಹೆದ್ದಾರಿ ಮೇಲ್ದರ್ಜೆಗೇರಿಸಲು 900 ಕೋಟಿ ರೂಪಾಯಿ ನೀಡಲಿ ಎಂದು ಸವಾಲು ಹಾಕಿದರು.

ಮೇಲ್ದರ್ಜೆಗೇರಿಸುವ ಕಾಮಗಾರಿ ಆರಂಭ

ನಿರ್ಮಾಣ ಮಾಡಬೇಕು. ಈ ಸಂಬಂಧ ಸರ್ಕಾರದ ಮಟ್ಟದಲ್ಲಿ ತೀರ್ಮಾನವಾಗಿದೆ ಎಂದು ತಿಳಿಸಿದರು. ಹೆದ್ದಾರಿ ಮಾರ್ಗ ಬದಲಾವಣೆಗೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡ ನಂತರ ಡಿಪಿಆರ್ ಸಿದ್ಧಪಡಿಸಲಾಗುವುದು. ಒಟ್ಟಾರೆ ಮೈಸೂರು ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಶೀಘ್ರವೇ ಆರಂಭಿಸಲಾಗುವುದು ಎಂದು ಪ್ರತಾಪ್ ಸಿಂಹ ಭರವಸೆ ನೀಡಿದರು.

ಮೈಸೂರಿನ ಸಾತಗಳ್ಳಿಯ 19.20 ಎಕರೆಯಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಮಾಡಲು ತೀರ್ಮಾನಿಸಲಾಗಿತ್ತು. ಆದರೆ ಈ ಜಾಗದ ಪಕ್ಕದಲ್ಲಿ 5 ಎಕರೆ ಕೆರೆ ಬರಲಿದೆ. ಕೆರೆಯ ಒಂದಿಂಚು ಜಾಗ ಮುಟ್ಟುವಂತಿಲ್ಲ ಎಂಬ ರಾಷ್ಟ್ರೀಯ ಹಸಿರು ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಅಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ಮಾಡಲು ಆಗಲಿಲ್ಲ ಎಂದು ತಿಳಿಸಿದರು.

ಕ್ರಿಕೆಟ್ ಸ್ಟೇಡಿಯಂಗೆ ಜಾಗ: ಈ ಹಿನ್ನೆಲೆ ಹುಯಿಲಾಳು ಬಳಿ 26 ಎಕರೆ ಭೂಮಿ ಗುರುತಿಸಲಾಗಿದೆ. ಕ್ರಿಕೆಟ್ ತರಬೇತಿ ಕೇಂದ್ರ ಸೇರಿದಂತೆ ಕ್ರಿಕೆಟ್‌ಗೆ ಸಂಬಂಧಿಸಿದಂತೆ ಹಲವು ಕೇಂದ್ರಗಳನ್ನು ತೆರೆಯಬಹುದು. ವಾಹನಗಳ ನಿಲುಗಡೆಗೆ ವಿಶಾಲ ಜಾಗ ಕೂಡ ದೊರೆಯಲಿದೆ. ಕ್ರಿಕೆಟ್ ಸ್ಟೇಡಿಯಂಗೆ ಜಿಲ್ಲಾಡಳಿತದಿಂದ ಅನುಮೋದನೆ ದೊರೆತು, ಈಗ ಕಂದಾಯ ಕಾರ್ಯದರ್ಶಿ ಬಳಿ ಕಡತ ಕಳುಹಿಸಲಾಗಿದೆ. ಸಚಿವ ಸಂಪುಟದಿಂದ ಒಪ್ಪಿಗೆ ಪಡೆದ ನಂತರ ಭೂಸ್ವಾಧೀನ ಪ್ರಕ್ರಿಯೆ ಆರಂಭವಾಗಲಿದೆ. ಅಂತಿಮವಾಗಿ ಭೂಮಿಯನ್ನು ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಕಾಡೆಮಿಗೆ ಹಸ್ತಾಂತರ ಮಾಡಲಾಗುವುದು. ಅಕಾಡೆಮಿಯು 100 ಕೋಟಿ ವೆಚ್ಚದಲ್ಲಿ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಿಸಲಿದೆ ಎಂದು ಪ್ರತಾಪ್ ಸಿಂಹ ವಿವರಿಸಿದರು.

ಕಳೆದ 40 ವರ್ಷದ ಅವಧಿಯಲ್ಲಿ ಈ ಕ್ಷೇತ್ರ ಪ್ರತಿನಿಧಿಸಿದ ಯಾವ ಸಂಸದನು ನನ್ನಷ್ಟು ಅಭಿವೃದ್ಧಿ ಕೆಲಸ ಮಾಡಿಲ್ಲ. ನಾನು ಈ ಕ್ಷೇತ್ರದ ಅಭಿವೃದ್ಧಿಗೆ ಶಕ್ತಿ ಮೀರಿ ಪ್ರಯತ್ನಿಸಿದ್ದೇನೆ ಎಂದು ಪ್ರತಾಪ್ ಸಿಂಹ ಹೇಳಿದರು. ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಬಿಜೆಪಿ ಅಲ್ಪ ಸಂಖ್ಯಾತ ಮೋರ್ಚಾ ಅಧ್ಯಕ್ಷ ಡಾ.ಅನಿಲ್ ಥಾಮಸ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ವಿವಿಗೆ ಕುವೆಂಪು ಮಹತ್ವದ ಕೊಡುಗೆ

ಪ್ರೊ. ಎನ್.ಎಸ್.ತಾರಾನಾಥ್ ಅಭಿಮತ



ಮೈಸೂರು, ಡಿ.29(ಎಂಟಿವೈ)- ಆಧುನಿಕ ಕನ್ನಡ ಸಾಹಿತ್ಯದ ಸಾರ್ವಭೌಮ ಎನಿಸಿರುವ ಕುವೆಂಪು ಸಾಹಿತ್ಯದ ಎಲ್ಲಾ ಪ್ರಕಾರದಲ್ಲಿ ಕೃಷಿ ಮಾಡಿ ಪ್ರಸಿದ್ಧಿ ಹೊಂದಿದ್ದಾರೆ ಎಂದು ವಿದ್ವಾಂಸ ಪ್ರೊ.ಎನ್.ಎಸ್. ತಾರಾನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಲ್ಲಿ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮದಿನೋತ್ಸವದಲ್ಲಿ ಮಾತನಾಡಿದ ಅವರು, ಕುವೆಂಪು ಅವರ ಬೋಧನೆ, ಸಂಶೋಧನೆ, ಬರವಣಿಗೆಯಲ್ಲಿ ಕನ್ನಡತನ ತುಂಬಿಕೊಂಡಿದೆ. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕುವೆಂಪು ಅವರು ಕೃಷಿ ಮಾಡಿ ಕೀರ್ತಿ ಗಳಿಸಿದರು. ಕೃತಿ, ಬರಹಗಳಲ್ಲಿ ಅವರು ಹೇಳಿರುವ ಮೌಲ್ಯವನ್ನು ಅನುಷ್ಠಾನಕ್ಕೆ ತರಲು ಪಣ ತೊಡಬೇಕು. ಕುವೆಂಪು ಅವರು ತಮ್ಮ ಸಾಹಿತ್ಯದಲ್ಲಿ ಪಂಚ ಮಂತ್ರ, ಸಪ್ತ ವಾಕ್ಯಗಳನ್ನು ಪ್ರತಿಪಾದಿಸಿದರು. ಅನಿಕೇತನ ಪ್ರಜ್ಞೆ, ನಿರಂಕುಶಮತಿಗಳಾಗಿ, ಸರ್ವೋದಯ ಕಲ್ಪನೆ, ವಿಶ್ವಮಾನವ ಸಂದೇಶವನ್ನು ಎಲ್ಲ ಕಡೆಯೂ ಹರಡಬೇಕೆಂದು ಹೇಳುತ್ತಿದ್ದರು. ಇಟಲಿ ಪತ್ರಕರ್ತರೊಬ್ಬರು ಕುವೆಂಪು ಅವರನ್ನು ಸಂದರ್ಶನ ಮಾಡಿದ್ದ ವೇಳೆ 'ಕುವೆಂಪು ಅವರನ್ನು ನೋಡಿದ ಬಳಿಕ ಇನ್ನೇನು ನೋಡಬೇಕಿಲ್ಲ. ವಿಶ್ವಮಾನವ ಸಂದೇಶ ಓದಿದ ಮೇಲೆ ಇನ್ನೇನು ಓದಬೇಕಿಲ್ಲ' ಎಂದಿದ್ದರು. ವಿಶ್ವಮಾನವ ಸಂದೇಶಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಬೇಕು ಎಂದರು.

ಪ್ರಸಾರಾಂಗದೊಂದಿಗೆ ಕುವೆಂಪು ಅವರು ವಿಶೇಷ ನಂಟು ಇಟ್ಟುಕೊಂಡಿದ್ದರು. ಜ್ಞಾನಗಂಗೆಯನ್ನು ಸಾಮಾನ್ಯ ಜನರ ಬಾಗಿಲಿಗೆ ತೆಗೆದುಕೊಂಡು ಹೋದರು. ಉತ್ತರ ಪ್ರದೇಶದ ರಾಜ್ಯಪಾಲರಾಗಿದ್ದ ವಿ.ವಿ.ಗಿರಿಯವರು ಪ್ರಸಾರಾಂಗದ ಕಾರ್ಯಚಟುವಟಿಕೆಗಳನ್ನು ಮೆಚ್ಚಿ ತಾನು ಕುಲಾಧಿಪತಿಯಾಗಿರುವ ಆರು ವಿವಿಗಳಲ್ಲಿ ಪ್ರಸಾರಾಂಗ ಸ್ಥಾಪಿಸುವುದಾಗಿ ನುಡಿದು ಮೆಚ್ಚುಗೆ ವ್ಯಕ್ತಪಡಿಸಿದರು. ಹಾಗಾಗಿ ಕುವೆಂಪು ಅವರಿಗೆ ಪ್ರಸಾರಾಂಗ ಜೀವನದ ಧ್ಯೇಯವಾಗಿತ್ತು ಎಂದು ತಿಳಿಸಿದರು.

ಮೈಸೂರು ವಿವಿಗೆ ಕುವೆಂಪು ಕೊಡುಗೆ ಅನನ್ಯ ಮತ್ತು ಅಪಾರವಾದದ್ದು. ವಿದ್ಯಾರ್ಥಿ ಜೀವನದ ನೆನಪು, ಪ್ರಸಾರಾಂಗ ಆರಂಭ, ಮಾನಸಗಂಗೋತ್ರಿಯ ಉದ್ಘಾಟನಾ ಭಾಷಣ, ಮೈಸೂರು ವಿವಿ ಬೆಳ್ಳಿ ಮಹೋತ್ಸವದಲ್ಲಿ ಬರೆದ ಕವನ, ಸರಸ್ವತಿ ಕವನಗಳನ್ನು ಸಂಗ್ರಹಿಸಿ ಪ್ರಸಾರಾಂಗ ಪ್ರಕಟಿಸಬೇಕು. ಉಪಮೆ ರೂಪಕಗಳಲ್ಲಿ ಮಾತಾಡುವ ಕಲೆ ಕುವೆಂಪು ಅವರಿಗೆ ಸಿದ್ಧಿಸಿತ್ತು. ಅದನ್ನು ಹಾ.ಮಾ.ನಾಯಕರು, ಪ್ರಭುಶಂಕರ, ಟಿ.ವಿ. ವೆಂಕಟಚಾಲಶಾಸ್ತ್ರಿ ಸ್ಮರಿಸಿಕೊಂಡಿದ್ದಾರೆ. ಉದಾ: ಮಧ್ಯವಾರ್ಷಿಕ ಪರೀಕ್ಷೆಯಲ್ಲಿ ಕಾವ್ಯ ಮೀಮಾಂಸೆ ಪ್ರಶ್ನೆಗಳಿಗೆ ಉತ್ತರಿಸಿ ಛಂದಸ್ಸಿನ ಪ್ರಶ್ನೆಗಳಿಗೆ ಉತ್ತರಿಸದ ಹಾ.ಮಾ. ನಾಯಕರಿಗೆ ನೀವೇನು ಒಪ್ಪೊತ್ತಿನ ವಿದ್ಯಾರ್ಥಿಯೋ ಎಂದು ಕುವೆಂಪು ಟಿಪ್ಪಣಿ ಬರೆಯುತ್ತಾರೆ. ಬೋಧನೆಯ ಒಳಗೆ ರಸವನ್ನು ಇಡುವ ಕಲೆ ಕುವೆಂಪು ಅವರಲ್ಲಿ ವೃದ್ಧಿಸಿತ್ತು ಎಂದು ಸ್ಮರಿಸಿದರು.

ಪ್ರಸಾರಾಂಗದ ನಿರ್ದೇಶಕ ಡಾ.ನಂಜಯ್ಯ ಹೊಂಗನೂರು ಪ್ರಾಸ್ತಾವಿಕವಾಗಿ ಮಾತನಾಡಿ, ಮೈಸೂರು ವಿವಿ ಎಂಬ ಕಲ್ಪವೃಕ್ಷಕ್ಕೆ ಪ್ರಸಾರಾಂಗ ಎಂಬ ಕಾಮಧೇನು ಕಟ್ಟಿ, ವೈವಿಧ್ಯಮಯವಾಗಿ ಬೆಳೆಸಿದ ಕೀರ್ತಿ ಕುವೆಂಪು ಅವರಿಗೆ ಸಲ್ಲುತ್ತದೆ. ಕುವೆಂಪು ಅವರು ಪ್ರಕೃತಿ, ಸಂಸ್ಕೃತಿ ಮತ್ತು ಸೃಜನಶೀಲತೆಗಳ ಅನುಸಂಧಾನದೊಂದಿಗೆ ಸಾಹಿತ್ಯದ ಬಹುತ್ವ ಧ್ಯಾನಿಸಿದವರು. ಒಂದು ಶತಮಾನದವರೆಗೆ ಕನ್ನಡ ಸಾಹಿತ್ಯ ಪರಂಪರೆಯನ್ನು ಕಟ್ಟಿ ಬೆಳೆಸಿದ ಹಾಗೂ ಬೆಳಗಿಸಿದ ಅಕ್ಷರ ಸೂರ್ಯ ಎಂದು ಹೇಳಿದರು.

ಇದಕ್ಕೂ ಮುನ್ನ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಉದ್ಘಾಟಿಸಿ ಮಾತನಾಡಿ, ವಿಶ್ವಮಾನವ ಸಂದೇಶವನ್ನು ಸಾರಿದ ಕುವೆಂಪು ಅವರು ಸದಾ ಸ್ಮರಣೀಯರಾಗಿದ್ದಾರೆ. ಅವರ ಆದರ್ಶ, ತತ್ವ-ಸಿದ್ಧಾಂತವನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಲೇಖಕ ಪ್ರೊ.ಸಿ. ನಾಗಣ್ಣ ಅವರನ್ನು ಸನ್ಮಾನಿಸಲಾಯಿತು. ಗಾಯಕ ಅಮು ರಾಮಚಂದ್ರ ತಂಡದಿಂದ ಕುವೆಂಪು ಗೀತ ಗಾಯನ, ಜಾನಪದ ಕಲಾವಿದ ಸುಂದರೇಶ್ ತಂಡದಿಂದ ವೀರಗಾಸೆ ಮತ್ತು ಪೂಜಾ ಕುಣಿತ ಕಾರ್ಯಕ್ರಮ ನಡೆಯಿತು.

ಶಾಂತಿಯುತ ಕನ್ನಡ ಪರ ಹೋರಾಟಕ್ಕೆ ರೈತ ಸಂಘ ಬೆಂಬಲ



ಮೈಸೂರು, ಡಿ.29(ಜಿಎ)-ರಾಜ್ಯ ಸರ್ಕಾರದ ನಾಮಫಲಕ ಕಾಯ್ದೆ ತಿದ್ದುಪಡಿಯನ್ನು ರಾಜ್ಯ ರೈತ ಸಂಘ ಸ್ವಾಗತಿಸುತ್ತದೆ. ಈ ನಿಟ್ಟಿನಲ್ಲಿ ಯಾವುದೇ ಕನ್ನಡ ಪರ ಹೋರಾಟಕ್ಕೂ ಬೆಂಬಲ ನೀಡಲಾಗುವುದು. ಆದರೆ ಅದು ಶಾಂತಿಯುತವಾಗಿರಬೇಕು ಎಂದು ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿರುವ ಎಲ್ಲಾ ಅಂಗಡಿ, ಆಸ್ಪತ್ರೆ, ಹೋಟೆಲ್, ವ್ಯಾಪಾರಿ ಸಂಸ್ಥೆಗಳ ನಾಮಫಲಕಗಳಲ್ಲಿ ಶೇ. 60ರಷ್ಟು ಕನ್ನಡ ಭಾಷೆ ಇರ ಬೇಕು ಎಂಬ ನೀತಿಯನ್ನು ಜಾರಿಗೆ ತರಲು, ಇದರ ಅನುಷ್ಠಾನಕ್ಕೆ ಕನ್ನಡ ಭಾಷೆ ಸಮಗ್ರ ಅಭಿವೃದ್ಧಿ ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ ಹೊರಡಿಸಲಾಗುವುದು ಎಂದು ರಾಜ್ಯದ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ತಿಳಿಸಿರುವುದು ಸಂತಸ ತಂದಿದೆ. ಆದರೆ ಇದು ಕೇವಲ ದಂಡ ವಿಧಿಸುವಂತಹ ತಿದ್ದುಪಡಿ ಆಗಿದ್ದರೆ ಸಾಲದು, ಕನ್ನಡ ಭಾಷೆಗೆ ಆದ್ಯತೆ ನೀಡದ ಯಾವುದೇ ಕಾರ್ಪೋರೇಟ್ ಕಂಪನಿಗಳಾಗಲಿ, ಇತರ ವ್ಯಾಪಾರ ವಹಿವಾಟಿನ ಸಂಸ್ಥೆಗಳ ಪರವಾನಿಗೆಯನ್ನು ರದ್ದು ಮಾಡುವಂತಹ ಕಟ್ಟುನಿಟ್ಟಿನ ಷರತ್ತುಗಳನ್ನು ವಿಧಿಸುವಂತಹ ಗಟ್ಟಿಯಾದ ಅಧಿಸೂಚನೆಯನ್ನು ಹೊರಡಿಸಬೇಕು ಎಂದು ಒತ್ತಾಯಿಸಿದರು.


ರಾಜ್ಯದ ಉಚ್ಚ ನ್ಯಾಯಾಲಯದಲ್ಲೂ ಕನ್ನಡ ಭಾಷೆಯಲ್ಲೇ ತೀರ್ಪುಗಳು ಬರಲು ಸರಕಾರ ಎಲ್ಲಾ ಕ್ರಮಗಳನ್ನು ಅನುಸರಿಸಬೇಕು. ಈ ಸಂಬಂಧ ಹೋರಾಟ ಮಾಡುವ ಯಾವುದೇ ಕನ್ನಡಪರ ಚಳುವಳಿಗೆ ಸಂಘದ ಸಂಪೂರ್ಣ ಬೆಂಬಲ ಇದೆ. ಆದರೆ ಅಂತಹ ಹೋರಾಟಗಳು ಶಾಂತಿ ಮತ್ತು ಅಹಿಂಸಾತ್ಮಕವಾಗಿ ಇರಬೇಕು. ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಆಸ್ತಿಗಳಿಗೆ ಹಾನಿಯನ್ನು ಉಂಟು ಮಾಡುವಂತಾಗಿರಬಾರದು ಎಂದು ಸ್ಪಷ್ಟಪಡಿಸಿದರು.

ರೈತ ಸಮುದಾಯವನ್ನು ಅತ್ಯಂತ ಕೀಳಾಗಿ ಬಿಂಬಿಸಿ ಅವಹೇಳನ ಮಾಡಿರುವ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಅವರ ಹೇಳಿಕೆ ಬಗ್ಗೆ ಕರ್ನಾಟಕ ರಾಜ್ಯ ರೈತ ಸಂಘ ಈಗಾಗಲೇ ರಾಜ್ಯಾದ್ಯಂತ ಪ್ರತಿಭಟನೆ ಮಾಡುತ್ತಿದೆ. ಕೂಡಲೇ ಶಿವಾನಂದ ಪಾಟೀಲ್ ರೈತ ಕುಲದ ಕ್ಷಮೆಯನ್ನು ಕೋರಿ ಮುಂದೆಂದೂ ಇಂತಹ ಅವಹೇಳನಕಾರಿ ಹೇಳಿಕೆಯನ್ನು ನೀಡುವುದಿಲ್ಲವೆಂದು ಸಾರ್ವಜನಿಕವಾಗಿ ಘೋಷಿಸಬೇಕು ಎಂದು ಆಗ್ರಹಿಸಿದರು.

ಫೆಬ್ರವರಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ 2024-25ನೇ ಸಾಲಿನ ಬಜೆಟ್ ಅನ್ನು ಮಂಡನೆ ಮಾಡಲಿದ್ದು, ಅದರಲ್ಲಿ ರೈತಪರ ಯೋಜನೆಗಳಿಗೆ ಪ್ರಥಮ ಆದ್ಯತೆ ನೀಡಬೇಕು. ಈ ಸಂಬಂಧ ರೈತ ಮತ್ತು ಗ್ರಾಮೀಣ ಪರ ಎಂತಹ ಯೋಜನೆಗಳು ಬೇಕೆಂಬುದನ್ನು ಸಂಘವು ಸದ್ಯದಲ್ಲೇ ಸಾರ್ವಜನಿಕವಾಗಿ ಬಿಡುಗಡೆ ಮಾಡಿ, ಸರಕಾರಕ್ಕೆ ಸಲ್ಲಿಸಲಿದೆ. ಈ ಸಂಬಂಧ ಸಂಘದ ಪದಾಧಿಕಾರಿಗಳೂ ಸೇರಿದಂತೆ ಕೃಷಿ, ನೀರಾವರಿ, ಗ್ರಾಮೀಣಾಭಿವೃದ್ಧಿ, ಉದ್ಯೋಗ ಸೃಷ್ಟಿ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ವ್ಯಕ್ತಿಗಳು ಒಳಗೊಂಡಂತೆ ಈ ಬಗ್ಗೆ ರೂಪುರೇಷೆಗಳನ್ನು ತಯಾರಿಸುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಹೊಸಕೋಟೆ ಬಸವರಾಜು, ಪ್ರಸನ್ನ ಎನ್. ಗೌಡ, ಚಂದ್ರಶೇಖರ್, ರಾಘವೇಂದ್ರ, ಪಿ. ಮರಂಕಯ್ಯ ಹಾಜರಿದ್ದರು.

ನಾಳೆ ಕ್ಯಾಲೆಂಡರ್ ಬಿಡುಗಡೆ



ಮೈಸೂರು, ಡಿ.29(ಜಿಎ)- 'ಲಾ ಫಾರ್ ಆಲ್' ಕನ್ನಡ ಕಾನೂನು ಮಾಸ ಪತ್ರಿಕೆಯ ಐದನೇ ಆವೃತ್ತಿ ಹಾಗೂ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭವನ್ನು ಡಿ.31 ರಂದು ಮಧ್ಯಾಹ್ನ 3ಕ್ಕೆ ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ಹಿರಿಯ ವಕೀಲ, ಪತ್ರಿಕೆಯ ಪ್ರಧಾನ ಸಂಪಾದಕ ಕೆ.ಬಿ.ಸುರೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದೇ ಸಂದರ್ಭದಲ್ಲಿ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ವಕೀಲ ವೃತ್ತಿಯಲ್ಲಿ 50 ವರ್ಷಗಳ ಮೇಲ್ಪಟ್ಟು ಸೇವೆ ಸಲ್ಲಿಸುತ್ತಿರುವ ಹಿರಿಯ ಸಾಧಕ ವಕೀಲರುಗಳಿಗೆ ಸನ್ಮಾನ ಮತ್ತು ಗುರುವಂದನಾ ಕಾರ್ಯಕ್ರಮ ನಡೆಯಲಿದೆ. ಉಚ್ಚ ನ್ಯಾಯಾಲಯದ ಹಿರಿಯ ವಕೀಲರಾದ ಎಚ್.ಎಸ್.ಚಂದ್ರಮೌಳಿ ಅಧ್ಯಕ್ಷತೆ ವಹಿಸುವರು. ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್, ಮಾಜಿ ಸಚಿವ ಜೆ.ಸಿ. ಮಾಧುಸ್ವಾಮಿ, ನಿವೃತ್ತ ಪೊಲೀಸ್ ಅಧಿಕಾರಿ ಶಂಕರ್ ಮಹದೇವ ಬಿದರಿ, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಎಚ್.ಎಸ್. ಪ್ರಭಾವತಿ ಹಿರೇಮಠ, ಹಿರಿಯ ವಕೀಲರಾದ ಕೆ.ಆರ್. ಶಿವಶಂಕರ್, ಸಿ.ಎಂ. ಜಗದೀಶ್ ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಕೆ.ಆರ್. ಶಿವಶಂಕರ್, ಎ.ಬಿ. ಭರತೇಶ್, ಅಲ್ತಾಫ್ ಇಬ್ರಾಹಿಂ, ದುರ್ಗಾ ಪ್ರಸಾದ್ ಉಪಸ್ಥಿತರಿದ್ದರು.

ಪ್ರವಾಸಿಗರ ಕಾರಿನ ಗ್ಲಾಸ್ ಒಡೆದು ಲ್ಯಾಪ್‌ಟಾಪ್, ಐಫೋನ್ ಕಳವು

ಮೈಸೂರು, ಡಿ. 29- ಪ್ರವಾಸಿಗರ ಕಾರಿನ ಗ್ಲಾಸ್ ಒಡೆದು ಲ್ಯಾಪ್‌ಟಾಪ್ ಹಾಗೂ ಐಫೋನ್ ಕಳವು ಮಾಡಿರುವ ಘಟನೆ ಮೈಸೂರಿನ ಎಂಜಿ ರಸ್ತೆಯಲ್ಲಿ ನಡೆದಿದೆ.

ಬೆಂಗಳೂರಿನ ಹೆಬ್ಬಾಳ್ ನಿವಾಸಿಯಾಗಿರುವ ಅಮೇಜಾನ್ ಕಂಪನಿ ಉದ್ಯೋಗಿ ರತ್ನಪ್ರಕಾಶ್ ಪಿಳ್ಳೈ(32), ಲ್ಯಾಪ್‌ಟಾಪ್ ಹಾಗೂ ಐಫೋನ್ ಕಳೆದುಕೊಂಡವರಾಗಿದ್ದು, ಕುಟುಂಬ ಸಮೇತ ಊಟಿ ಪ್ರವಾಸಕ್ಕೆ ತೆರಳಿದ್ದ ಇವರು, ಹಿಂತಿರುಗುವಾಗ ಡಿಸೆಂಬರ್ 27ರಂದು ಸಂಜೆ 5.30ರ ಸುಮಾರಿನಲ್ಲಿ ಎಂಜಿ ರಸ್ತೆಯಲ್ಲಿರುವ ಸಿಪಾಯಿ ಗ್ರಾಂಡ್ ಹೋಟೆಲ್‌ನಲ್ಲಿ ಊಟ ಮಾಡುವ ಸಲುವಾಗಿ ಕಾರನ್ನು ಇದೇ ರಸ್ತೆಯಲ್ಲಿರುವ ಎಂ.ಪಿ. ನಾಗರಾಜರ ತೋಟದ ಮುಂಭಾಗ ಪಾರ್ಕ್ ಮಾಡಿದ್ದಾರೆ. 6.45ಕ್ಕೆ ಹಿಂತಿರುಗಿದಾಗ ಇವರ ಕಾರಿನ ಹಿಂದಿನ ಗ್ಲಾಸ್‌ಗಳನ್ನು ಒಡೆದು ಹಾಕಿ 2 ಲ್ಯಾಪ್‌ಟಾಪ್, ಐಫೋನ್ ಮತ್ತು ಹೆಡ್‌ಫೋನ್ ಕಳವು ಮಾಡಿದ್ದಾರೆ. ಈ ಸಂಬಂಧ ಕೆ.ಆರ್. ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಂ.ಎಂ.ಸುಗುಣರಿಗೆ 'ರಂಗರತ್ನ' ಪ್ರಶಸ್ತಿ ಪ್ರದಾನ



ಮೈಸೂರು, ಡಿ.29(ಜಿಎ)-ರಂಗಭೂಮಿ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆ ಗುರುತಿಸಿ ಹಿರಿಯ ರಂಗಕರ್ಮಿ ನಿರಂತರ ಪ್ರತಿಷ್ಠಾನದ ಎಂ.ಎಂ. ಸುಗುಣ ಅವರಿಗೆ ಹಿರಿಯ ರಂಗಕರ್ಮಿ ಡಾ.ನ.ರತ್ನ ಹೆಸರಿನಲ್ಲಿ ಸ್ಥಾಪಿಸಿರುವ ರಂಗರತ್ನ ಪ್ರಶಸ್ತಿಯನ್ನು ಗಣ್ಯರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರದಾನ ಮಾಡಿದರು.

ಈ ವೇಳೆ ಅಭಿಯಂತರರಾದ ಎನ್.ಎಸ್. ಆನಂದ್ ಮಾತನಾಡಿ, ರಂಗರತ್ನ ಸಂಸ್ಥೆಯು ಡಾ.ನ. ರತ್ನ ಅವರ ಹೆಸರು ಕನ್ನಡ ರಂಗಭೂಮಿಯಲ್ಲಿ ಅಜರಾಮರವಾಗಿ ಉಳಿಯಲೆಂದು ಈ ಪ್ರಶಸ್ತಿ ಆರಂಭಿಸಿದೆ. ಸುಗುಣ ಅವರದ್ದು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ವಿಶಿಷ್ಟ ಹೆಸರಾಗಿದೆ. ಅವರು ರಂಗಭೂಮಿ, ಚಲನಚಿತ್ರ, ಕಿರುತೆರೆ, ನೃತ್ಯ ಸಂಯೋಜನೆ, ಸಂಘಟನೆಗಳಲ್ಲಿ ಕ್ರಿಯಾಶೀಲರಾಗಿದ್ದಾರೆ ಎಂದರು.

ಬಳಿಕ, ಹಿರಿಯ ರಂಗಕರ್ಮಿ ಡಾ.ನ. ರತ್ನ ಮಾತನಾಡಿ, ಉದಯೋನ್ಮುಖರಿಗಾಗಿ ಈ ಪ್ರಶಸ್ತಿ ಇದೆ. ಆದರೆ ಸುಗುಣ ಅವರು ಸುಮಾರು 30 ವರ್ಷಗಳಿಂದ ಸಕ್ರಿಯರಾಗಿದ್ದರೂ, ಉದಯೋನ್ಮುಖರೆಂದೇ ಪರಿಗಣಿಸಿ, ಅವರಿಂದ ಹೆಚ್ಚಿನ ಕೆಲಸ ನಿರೀಕ್ಷಿಸಿ ಈಗ ಪ್ರಶಸ್ತಿ ಕೊಡಮಾಡಲಾಗಿದೆ ಎಂದು ತಿಳಿಸಿದರು.

ಪ್ರಶಸ್ತಿ ಸ್ವೀಕರಿಸಿದ ಸುಗುಣ ಮಾತನಾಡಿ, ತಮಗೆ ಪ್ರಶಸ್ತಿ ಎಂದರೆ ಮುಜುಗರವಾಗುತ್ತದೆ. ಆದರೆ ಡಾ.ನ. ರತ್ನ ಅವರ ಪ್ರಭಾವದಿಂದ ಬೆಳೆದವರು ದೇಶ ವಿದೇಶಗಳಲ್ಲಿ ಹೆಸರು ಮಾಡಿದ್ದಾರೆ. ಹೀಗಾಗಿ ಈ ಪ್ರಶಸ್ತಿ ಸ್ವೀಕರಿಸುವುದು ತಮಗೆ ಸಂತಸ ಮತ್ತು ಹೆಮ್ಮೆ ತಂದಿದೆ ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ತರ್ನೀವ್, ಕವಿತಾ ರತ್ನ ಮತ್ತಿತರರು ಉಪಸ್ಥಿತರಿದ್ದರು.

ಯೋಗ ತರಗತಿ

ಮೈಸೂರು, ಡಿ. 29- ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಜ. 1 ರಿಂದ ಪ್ರತಿದಿನ ಬೆಳಗ್ಗೆ 6.30 ರಿಂದ 7.30 ರವರೆಗೆ ಯೋಗ ತರಬೇತಿ, ತೀವ್ರ ತಲೆನೋವು, ಮೈಗ್ರೇನ್ ತಲೆನೋವು ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9916483919, 9632000697 ಸಂಪರ್ಕಿಸಬಹುದು.

ಪಿಟೀಲು ವಿದ್ವಾಂಸ ಎಸ್. ಮಹದೇವಪ್ಪ ಸ್ಮರಣಾರ್ಥ ಬಾನ್ಸುರಿ ವಾದನ

ಮೈಸೂರು, ಡಿ. 29- ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಖ್ಯಾತ ಸಂಗೀತ ಪಿಟೀಲು ವಿದ್ವಾಂಸರಾದ ಎಸ್. ಮಹದೇವಪ್ಪ ಸ್ಮರಣಾರ್ಥ ಜ. 1 ರಂದು ಸಂಜೆ 6 ಗಂಟೆಗೆ ಸರಸ್ವತಿಪುರಂನ ಮಹಿಳೆಯರ ಕಾಲೇಜಿನ ಸಭಾಂಗಣದಲ್ಲಿ ಬಾನ್ಸುರಿ ವಾದಕ ಪಂಡಿತ್ ರೋಣು ಮಜುಂದಾರ್ ಅವರಿಂದ ಬಾನ್ಸುರಿವಾದನ ಏರ್ಪಡಿಸಲಾಗಿದೆ.

ಮೈಸೂರಿನ ಕೀರ್ತಿಯನ್ನು ಎತ್ತಿ ಹಿಡಿದ ವಯೋಲಿನ್ ಮಾಂತ್ರಿಕರೆಂದೇ ಹೆಸರಾದ ಮೈಸೂರು ನಾಗರಾಜ್ ಹಾಗೂ ಡಾ. ಮೈಸೂರು ಮಂಜುನಾಥ್ ಇನ್ನಿತರ ಶಿಷ್ಯರನ್ನು ತಯಾರು ಮಾಡಿದ ಕೀರ್ತಿ ವಿದ್ವಾನ್ ಮಹದೇವಪ್ಪ ಅವರಿಗೆ ಸಲ್ಲುತ್ತದೆ.

ಜ್ವಲಂತ ಸಮಸ್ಯೆಗಳ ವಿರುದ್ಧ ಜಾಗೃತಿ ಅಭಿಯಾನ



ಮೈಸೂರು,ಡಿ.29(ಎಂಟಿವೈ)- ಶಿಕ್ಷಣದ ವ್ಯಾಪಾರೀಕರಣ, ನಿರುದ್ಯೋಗ ಸೇರಿದಂತೆ ದೇಶದಲ್ಲಿ ಜನರು ಎದುರಿಸುತ್ತಿರುವ ಜಲ್ವಂತ ಸಮಸ್ಯೆಗಳ ವಿರುದ್ಧ ಜನಜಾಗೃತಿ ಮೂಡಿಸಲು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಸಹಿ ಸಂಗ್ರಹ ಅಭಿಯಾನ ನಡೆಸಿದರು.

ಮೈಸೂರಿನ ಚಿಕ್ಕಗಡಿಯಾರ ವೃತ್ತದಲ್ಲಿ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಆಯೋಜಿಸಿದ್ದ ಸಹಿ ಸಂಗ್ರಹ ಅಭಿಯಾನಕ್ಕೆ ಪಕ್ಷದ ಜಿಲ್ಲಾ ಕಾರ್ಯದರ್ಶಿ ಬಿ.ರವಿ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಶಿಕ್ಷಣದ ವ್ಯಾಪಾರೀಕರಣ, ಕಾಡುತ್ತಿರುವ ನಿರುದ್ಯೋಗ ಸಮಸ್ಯೆ, ಬೆಲೆಏರಿಕೆ, ರೈತ, ಕಾರ್ಮಿಕ ವಿರೋಧಿ ಸೇರಿದಂತೆ ಇನ್ನಿತರ ಜನ ವಿರೋಧಿ ನೀತಿಗಳ ವಿರುದ್ಧ ಜನರೇ ಹೋರಾಟಕ್ಕೆ ಮುಂದಾಗಬೇಕು. ಶಿಕ್ಷಣ, ಆರೋಗ್ಯ ರಂಗಗಳು ಖಾಸಗೀಕರಣಗೊಂಡು ಜನರ ಕೈಗೆ ಎಟುಕದಂತಾಗಿದೆ. ವಿದ್ಯಾವಂತರಾಗಿದ್ದರೂ ಉದ್ಯೋಗ ಸಿಗದೇ ಯುವಕರು ಅತಂತ್ರ ಸ್ಥಿತಿಯಲ್ಲಿದ್ದಾರೆ. ದಿನನಿತ್ಯ ಏರುತ್ತಿರುವ ಅಗತ್ಯ ವಸ್ತುಗಳ ಬೆಲೆಯು ಜನಸಾಮಾನ್ಯರ ಬದುಕನ್ನು ದುರ್ಬರಗೊಳಿಸಿದೆ. ಇನ್ನೊಂದೆಡೆ ರೈತರ ಬದುಕು ಕೂಡ ಸಂಕಷ್ಟಮಯವಾಗಿದೆ. ಕೃಷಿ ಬೆಳೆಗಳಿಗೆ ಬೆಂಬಲ ಬೆಲೆಯ ಭರವಸೆ ನೀಡಿದ್ದ ಕೇಂದ್ರ ಸರ್ಕಾರ ಎರಡು ವರ್ಷಗಳು ಕಳೆದರೂ ಯಾವುದೇ ಕ್ರಮಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲಿ ಜನರ ನಿರೀಕ್ಷೆಗೆ ತಕ್ಕಂತೆ ಆಡಳಿತ ನಡೆಸುತ್ತಿಲ್ಲ. ಜನರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಯಾವುದೇ ಸರ್ಕಾರಗಳು ಕ್ರಮ ಕೈಗೊಳ್ಳುತ್ತಿಲ್ಲ. ಇದಕ್ಕೆ ಜನ ಹೋರಾಟವೇ ಏಕೈಕ ಪರಿಹಾರ ಎಂದರು.

ಎಸ್‌ಯುಸಿಐ ಆಗ್ರಹಗಳು: ಬೆಲೆ ಏರಿಕೆಯನ್ನು ತಡೆಗಟ್ಟಬೇಕು. ಅಗತ್ಯ ವಸ್ತುಗಳ ಖರೀದಿ ಮತ್ತು ಮಾರಾಟ ವ್ಯವಸ್ಥೆಯನ್ನು ಸರ್ಕಾರ ನಿರ್ವಹಿಸಬೇಕು. ಜನವಿರೋಧಿ ರಾಷ್ಟ್ರೀಯ ಶಿಕ್ಷಣ ನೀತಿ- 2020 ಅನ್ನು ತಕ್ಷಣವೇ ಹಿಂಪಡೆಯಬೇಕು. ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣ ಮತ್ತು ಕೇಸರೀಕರಣವನ್ನು ನಿಲ್ಲಿಸಬೇಕು. ಎಲ್ಲರಿಗೂ ಖಾಯಂ ಉದ್ಯೋಗ ಒದಗಿಸಬೇಕು. ಉದ್ಯೋಗ ನೀಡುವವರೆಗೂ ನಿರುದ್ಯೋಗ ಭತ್ಯೆ ನೀಡ ಬೇಕು. ಸರ್ಕಾರ ಎಲ್ಲರಿಗೂ ಉಚಿತ ಆರೋಗ್ಯ ಸೇವೆ ನೀಡಬೇಕು. ಆರೋಗ್ಯ ವಲಯದ ಖಾಸಗೀಕರಣವನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಏಕಸ್ವಾಮ್ಯ ಬಂಡವಾಳಗಾರರ ಪರವಾದ, ಜನವಿರೋಧಿಯಾದ ವಿದ್ಯುತ್ ಕಾಯ್ದೆ-2022 ಅನ್ನು ರದ್ದುಗೊಳಿಸಬೇಕು. ಸ್ಮಾರ್ಟ್ ಮೀಟರ್ ಅಳವಡಿಕೆಯನ್ನು ನಿಲ್ಲಿಸಬೇಕು. ಅರಣ್ಯ ಸಂರಕ್ಷಣಾ ಕಾಯಿದೆ-2022 ರದ್ದು ಮಾಡಬೇಕು ಮತ್ತು ಅರಣ್ಯಗಳನ್ನು ಉಳಿಸಲು, ಬುಡಕಟ್ಟು ಜನರು ಮತ್ತು ಅರಣ್ಯವಾಸಿಗಳ ಹಕ್ಕುಗಳ ರಕ್ಷಣೆಗಾಗಿ ಅರಣ್ಯ ಹಕ್ಕು ಕಾಯಿದೆ- 2006 ಅನ್ನು ಜಾರಿಗೊಳಿಸಬೇಕು. ಮಣ್ಣಿನ ಸವೆತವನ್ನು ತಡೆಗಟ್ಟಲು, ಪರಿಸರವನ್ನು ರಕ್ಷಿಸಲು ಕ್ರಮ ಕೈಗೊಳ್ಳಬೇಕು. ಜಾಗತಿಕ ತಾಪಮಾನದ ಕುರಿತು ನಿಗಾ ಇಡಬೇಕು. ಎಲ್ಲಾ ಕರಾಳ ಕಾಯ್ದೆಗಳನ್ನು ರದ್ದು ಮಾಡುವ ಮೂಲಕ ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳನ್ನು ರಕ್ಷಿಸಬೇಕು. ಮಹಿಳೆಯರ, ದಲಿತರ ಮತ್ತು ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಗಳನ್ನು ತಡೆಯಬೇಕು.

ಎಲ್ಲಾ ವಲಯಗಳ ಕಾರ್ಮಿಕರಿಗೆ ಜೀವನ ಯೋಗ್ಯ ವೇತನ ನೀಡುವ ಪದ್ಧತಿಯನ್ನು ಜಾರಿಗೊಳಿಸಬೇಕು. ಅಗತ್ಯ ಕಾನೂನು ಜಾರಿಗೊಳಿಸಿ ರೈತರು ಬೆಳೆಯುವ ಎಲ್ಲಾ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಬೇಕು. ಎಲ್ಲಾ ಕೃಷಿ ಉತ್ಪನ್ನಗಳ ಬೆಲೆಯನ್ನು ಕಾನೂನು ಬದ್ಧಗೊಳಿಸಬೇಕು. ಧರ್ಮ ಮತ್ತು ಮತ ಖಾಸಗಿ ನಂಬಿಕೆ ಮತ್ತು ವೈಯಕ್ತಿಕ ಆಯ್ಕೆಯ ವಿಷಯವಾಗಿ ಉಳಿಯುವುದನ್ನು ಖಾತ್ರಿಪಡಿಸಬೇಕು ಎಂದು ಒತ್ತಾಯಿಸಿದರು.

ಅಭಿಯಾನದಲ್ಲಿ ಎಸ್‌ಯುಸಿಐ (ಸಿ) ಪಕ್ಷದ ಜಿಲ್ಲಾ ಸೆಕ್ರೆಟೇರಿಯೇಟ್ ಸದಸ್ಯರು, ಎಂ.ಉಮಾದೇವಿ, ಚಂದ್ರಶೇಖರ್ ಮೇಟಿ, ಜಿಲ್ಲಾ ಸಮಿತಿ ಸದಸ್ಯರು ಪಿ.ಎಸ್ ಸಂಧ್ಯಾ, ವಿ.ಯಶೋಧರ್, ಹರೀಶ್ ಹಾಗೂ ಪಕ್ಷದ ಸದಸ್ಯರು ಹಾಗೂ ಬೆಂಬಲಿಗರು ಪಾಲ್ಗೊಂಡಿದ್ದರು.

ನಾನು ಲಂಚ ಮುಟ್ಟಲ್ಲ, ನೀವೂ ಲಂಚ ಕೊಡಬೇಡಿ!

ಹೆಗ್ಗಂದೂರು ಗ್ರಾಮಸ್ಥರ ಅಹವಾಲು ಸ್ವೀಕರಿಸಿ ಮನವಿ ಮಾಡಿದ ಶಾಸಕ ಜಿ.ಡಿ.ಹರೀಶ್‌ಗೌಡ ಕಿವಿಮಾತು

ಹುಣಸೂರು, ಡಿ.29– ನಾನು ಒಂದು ರೂಪಾಯಿ ಲಂಚ ಸ್ವೀಕರಿಸುವುದಿಲ್ಲ. ಜನರು ಕೂಡ ಅಧಿಕಾರಿಗಳಿಗೆ ಮತ್ತು ಸರ್ಕಾರಿ ನೌಕರರಿಗೆ ಒಂದು ರೂಪಾಯಿ ಲಂಚ ನೀಡಬಾರದು ಎಂದು ತಿಳಿಸಿದ ಶಾಸಕ ಜಿ.ಡಿ. ಹರೀಶ್‌ಗೌಡ ಇನ್ನು ಮುಂದೆ ಜನರ ಭೇಟಿ ನಿರಂತರವಾಗಿರುತ್ತದೆ. ನಿಮ್ಮ ಮನೆ ಬಾಗಿಲಿಗೆ ಬಂದು ಸರ್ಕಾರದ ಸವಲತ್ತುಗಳನ್ನು ತಲುಪಿಸುವ ಕೆಲಸ ಮಾಡುವೆ ಎಂದರು.

ತಾಲೂಕಿನ ಹೆಗ್ಗಂದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜನರ ಸಮಸ್ಯೆ ಆಲಿಸಿ ಅವರು ಮಾತನಾಡಿದರು.

ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ಬಳಿಕ ತಾಲೂಕಿನ ಎಲ್ಲ ಹಳ್ಳಿಗಳಿಗೆ ಅಧಿಕಾರಿಗಳೊಂದಿಗೆ ಬೇಟಿ ನೀಡುತ್ತಿದ್ದೇನೆ. ಗ್ರಾಮದ ಮನೆ–ಮನೆಗೂ ಭೇಟಿ ನೀಡಿ ಮತದಾರರಿಗೆ ಕೃತಜ್ಞತೆ ಸಲ್ಲಿಸುವುದರ ಜೊತೆಗೆ ಸಮಸ್ಯೆಗಳನ್ನು ಆಲಿಸುತ್ತಿವೆ ಎಂದ ಅವರು ಚುನಾವಣೆಯ ಫಲಿತಾಂಶದ ನಂತರ ಇಡೀ ಕ್ಷೇತ್ರದ ಪ್ರತಿ ಮನೆಗೆ ಭೇಟಿ ನೀಡಿ ಕಷ್ಟ–ಸುಖ ವಿಚಾರಿಸುತ್ತೇನೆ ಎಂದು ಭರವಸೆ ನೀಡಿದ್ದು, ಅದರಂತೆ ನಡೆದುಕೊಳ್ಳುತ್ತಿರುವೆ ಎಂದು ಹೇಳಿದರು.

ಇನ್ನು ಮುಂದೆ ಮತದಾರರ ಭೇಟಿ ನಿರಂತರವಾಗಿ ಇರುತ್ತದೆ. ತಾಲೂಕಿನಲ್ಲಿ ಅಧಿಕಾರಿಗಳಿಂದ ಜನಸಾಮಾನ್ಯರಿಗೆ ಯಾವುದೇ ರೀತಿಯ ತೊಂದರೆ ಆಗದಂತೆ ನೋಡಿ ಕೊಳ್ಳುತ್ತೇನೆ. ನಾನು ಒಂದು ರೂಪಾಯಿ ಲಂಚ ಸ್ವೀಕರಿಸುವುದಿಲ್ಲ. ಅಧಿಕಾರಿಗಳಿಗೆ ಜನರೂ ಸಹ ಒಂದು ರೂಪಾಯಿ ಲಂಚ ನೀಡಬೇಡಿ. ಒಂದು ವೇಳೆ ಯಾರಾದರೂ ನಿಮ್ಮನ್ನು ಲಂಚಕ್ಕಾಗಿ ಪೀಡಿಸಿದರೆ ನನ್ನ ಗಮನಕ್ಕೆ ತನ್ನಿ ಎಂದರು.



ಈ ವೇಳೆ ಜನ ಪಿಂಚಣಿ ಸಮಸ್ಯೆ, ಮನೆ, ನಿವೇಶನ ಸಮಸ್ಯೆ, ವಿದ್ಯುತ್ ಲೈನ್, ಶಾಲಾ ಕೊಠಡಿಗಳ ದುರಸ್ತಿ, ಖಾತೆ ಬದಲಾವಣೆ, ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಅನುದಾನ ಸೇರಿ ಹಲವಾರು ಸಮಸ್ಯೆಗಳನ್ನು ಗ್ರಾಮಸ್ಥರು ಶಾಸಕರ ಗಮನಕ್ಕೆ ತಂದರು. ನಿಗದಿತ ಸಮಯದಲ್ಲಿ ಪರಿಹಾರ ಕಲ್ಪಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

ಆರೋಗ್ಯ ಹೇಗಿದೆ?

ಗ್ರಾಮಕ್ಕೆ ಆಗಮಿಸಿದ ಶಾಸಕ ಜಿ.ಡಿ.ಹರೀಶ್‌ಗೌಡ ಸತತ 3 ಗಂಟೆಗಳ ಕಾಲ ಸುತ್ತಾಡಿ ಪ್ರತಿ ಮನೆ ಬಳಿ ತೆರಳಿ ಹಿರಿಯರಿಗೆ ನಮಸ್ಕಾರ ಮಾಡಿ ಯೋಗಕ್ಷೇಮ ವಿಚಾರಿಸಿದರು. ಆರೋಗ್ಯ ಹೇಗಿದೆ? ರೇಷನ್ ಕಾರ್ಡ್ ಇದೆಯೆ? ಪಿಂಚಣಿ ಸರಿಯಾಗಿ ಬರುತ್ತಾ? ಮಕ್ಕಳು ಏನು ಓದುತ್ತಿದ್ದಾರೆ. ನೀರು ಸರಿಯಾಗಿ ಬರುತ್ತಾ? ಸಮಸ್ಯೆ ಏನಾದರೂ ಇದೆಯಾ? ನನ್ನಿಂದ ಏನಾದರೂ ಸಹಾಯ ಬೇಕಾ? ಹೀಗೆ ಜನರ ಬಳಿ ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಿ ಅವರ ಸಂಕಷ್ಟ ಅರಿಯುವ ಪ್ರಯತ್ನ ನಡೆಸಿದರು. ಒಂದು ಹಂತದಲ್ಲಿ ಗ್ರಾಮಸ್ಥರ ಸಮಸ್ಯೆಗಳಿಗೆ ಸ್ಥಳದಲ್ಲಿಯೆ ಪರಿಹಾರ ಕಲ್ಪಿಸುವ ಪ್ರಯತ್ನ ಮಾಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ರವಿ ವಡ್ಡಂಬಾಳು, ಎಇಇ ನರಸಿಂಹಯ್ಯ, ಗ್ರಾಪಂ ಸದಸ್ಯರಾದ ರಾಜೇಗೌಡ, ಹೊಸಕೋಟೆ ಸೋಮಯ್ಯ, ಪಿಡಿಒ ಪ್ರತಿಭಾ, ಮಾಜಿ ಗ್ರಾಪಂ ಅಧ್ಯಕ್ಷ ರಾಮಕೃಷ್ಣ, ಹೆಗ್ಗಂದೂರು ಶಿವಕುಮಾರ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಶ್ರೀನಿವಾಸ್, ಎಪಿಎಂಸಿ ಮಾಜಿ ಅಧ್ಯಕ್ಷ, ಜಿಪಂ ಎಇ ನಿರ್ಮಲ ಶುಬಾಷ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಅನಿಮಲ್ (ಹಿಂ)	2 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ) 3 ಪ್ರದರ್ಶನಗಳು ಸಲಾರ್ (ಹಿಂ)	1 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಲಾರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	**ಸಲಾರ್– 1 (ತೆ)**: ಬೆ.9.15ಕ್ಕೆ, ಮ.3.50ಕ್ಕೆ, ರಾ.10.20ಕ್ಕೆ, **ಡಂಕಿ (ಹಿಂ)**: ಮ.12.50ಕ್ಕೆ, ರಾ.7.14ಕ್ಕೆ.
ಸ್ಕ್ರೀನ್ 2	**ಸಲಾರ್–1 (ಕ)**: ಬೆ.9ಕ್ಕೆ, ಸಂ.6.50ಕ್ಕೆ, **ಅನಿಮಲ್ (ಹಿಂ)**: ಮ.12.20ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ)**: ಸಂ.4.05ಕ್ಕೆ, **ನೆರು (ಮ)**: ರಾ.10.15ಕ್ಕೆ,
ಸ್ಕ್ರೀನ್ 3	**ಸಲಾರ್–1 (ತೆ)**: ಬೆ.7ಕ್ಕೆ, **ಡಂಕಿ (ಹಿಂ)**: ಬೆ.10.30ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ)**: ಮ.1.45ಕ್ಕೆ, ಸಂ.4.50ಕ್ಕೆ, ರಾ.7.15ಕ್ಕೆ, **ಸಲಾರ್ (ಕ)**: ರಾ.9.55ಕ್ಕೆ.
ಸ್ಕ್ರೀನ್ 4	**ಸಲಾರ್–1(ತೆ)**: ಬೆ.7.15ಕ್ಕೆ, ಮ.12.30ಕ್ಕೆ, ರಾ.7ಕ್ಕೆ, **ಡಂಕಿ (ಹಿಂ)**: ಮ.3.55ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	**ಡಂಕಿ (ಹಿಂ)**: ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಸಲಾರ್ –1 (ತೆ)**: ಬೆ.8.10ಕ್ಕೆ, ಬೆ.11.45ಕ್ಕೆ, ಮ.3.20ಕ್ಕೆ, ಸಂ.6.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	**ಡಂಕಿ (ಹಿಂ)**: ಬೆ.11.30ಕ್ಕೆ, ಸಂ.6.25ಕ್ಕೆ, **ಸಲಾರ್–1 (ಹಿಂ)**: ಮ.2.50ಕ್ಕೆ, **ಸಲಾರ್ –1 (ಕ)**: ರಾ.9.45ಕ್ಕೆ.
ಸ್ಕ್ರೀನ್ 4	**ಸಲಾರ್–1 (ತೆ)**: ಬೆ.8.40ಕ್ಕೆ, **ಸಲಾರ್–1 (ಕ)**: ಮ.12.15ಕ್ಕೆ, ಸಂ.6.35ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ)**: ಮ.3.50ಕ್ಕೆ, ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	**ಪಾರ್ಕಿಂಗ್ (ಕ)**: ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ)**: ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ)**: ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮ ಕಥೆ (ಕ)**: ಸಂ.6.35ಕ್ಕೆ, **ಅನ್ನಪೂರ್ಣಿ (ತ)**: ರಾ.9.15ಕ್ಕೆ
ಸ್ಕ್ರೀನ್ 2	**ಅನಿಮಲ್ (ಹಿಂ)**: ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ)**: ಮ.1.45ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ)**: ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ)**: ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ)**: ಬೆ.10.45ಕ್ಕೆ, **ಅನಿಮಲ್ (ಹಿಂ)**: ಮ.2.40ಕ್ಕೆ, **ನೆಪೋಲಿಯನ್ (ಇಂ)**: ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ)**: ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, **ಡಂಕಿ (ಹಿಂ)**: ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ನೆರು (ಮ)**: ರಾ.10.10ಕ್ಕೆ, **ಸಲಾರ್ –1 (ಮ)**: ಸಂ.6.35ಕ್ಕೆ, **ಸಲಾರ್–1 (ಹಿಂ)**: ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, **ಸಲಾರ್–1 (ಕ)**: ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, **ಸಲಾರ್– 1(ತೆ)**: ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಜ.31, ಮಾಂಗಲ್ಯ ಭಾಗ್ಯ ಸಾಮೂಹಿಕ ವಿವಾಹ

ನಂಜನಗೂಡು: ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ಜನವರಿ 31 ರಂದು 'ಮಾಂಗಲ್ಯ ಭಾಗ್ಯ' ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅರ್ಹರು ನೋಂದಣಿ ಮಾಡಿಕೊಂಡು ಸಾಮೂಹಿಕ ವಿವಾಹದ ಸದುಪಯೋಗ ಪಡೆದುಕೊಳ್ಳಬಹುದು ಎಂದು ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ತಿಳಿಸಿದರು.

ಮಾಂಗಲ್ಯ ಭಾಗ್ಯ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜನೆ ಕುರಿತು ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲಾಡಳಿತ ವತಿಯಿಂದ ಮಾಂಗಲ್ಯ ಭಾಗ್ಯ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಆಯೋಜಿಸಿದ್ದು, ಸಾಮೂಹಿಕ ವಿವಾಹಕ್ಕೆ ಅರ್ಜಿಗಳನ್ನು ಸಲ್ಲಿಸಲು ಜನವರಿ 13 ಅಂತಿಮ ದಿನಾಂಕವಾಗಿರುತ್ತದೆ. ಅರ್ಜಿಗಳನ್ನು ತಾಲೂಕು ಕಚೇರಿಗಳಲ್ಲಿ, ಜಿಲ್ಲೆಯ ಎ ಗ್ರೇಡ್ ಹಾಗೂ ಬಿ ಗ್ರೇಡ್ ದೇವಸ್ಥಾನಗಳಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಲ್ಲಿಸಬಹುದು. ನಂತರ ಅರ್ಜಿಗಳನ್ನು ಅಧಿಕಾರಿಗಳು ಪರಿಶೀಲನೆ ನಡೆಸಬೇಕು ಎಂದರು.

ವಿವಾಹಕ್ಕೆ ನೋಂದಣಿ ಮಾಡಿಕೊಳ್ಳುವ ವಧು–ವರರ ಜನ್ಮ ದಿನಾಂಕವನ್ನು ಪರಿಶೀಲನೆ ನಡೆಸಬೇಕು. ಹೆಣ್ಣಿಗೆ 18 ವರ್ಷ ಗಂಡಿಗೆ 21 ವರ್ಷ ತುಂಬಿರಬೇಕು. ವಯಸ್ಸಿನ ದೃಢೀಕರಣಕ್ಕೆ ಜನನ ಪ್ರಮಾಣ ಪತ್ರ ಅಥವಾ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಪರಿಶೀಲಿಸಬೇಕು. ವಧು–ವರರು ಅನಕ್ಷರಸ್ಥರು ಇದ್ದರೆ ವಯಸ್ಸಿನ ದೃಢೀಕರಣಕ್ಕಾಗಿ ತಾಲೂಕು ವೈದ್ಯಾಧಿಕಾರಿಗಳಿಂದ ಪಡೆದ ವಯಸ್ಸಿನ ದೃಢೀಕರಣ ಪತ್ರ ನೀಡಬೇಕು. ಸಾಮೂಹಿಕ ವಿವಾಹ ಆದ ನಂತರ ವಿವಾಹವನ್ನು ನೋಂದಣಿ ಮಾಡಿಸಬೇಕು. ನ್ಯಾಯಾಲಯದಲ್ಲಿ ಯಾವುದೇ ಪ್ರಕರಣಗಳು ಇಲ್ಲ ಹಾಗೂ ಕ್ರಿಮಿನಲ್ ಪ್ರಕರಣಗಳು ಇಲ್ಲ ಎಂಬ ಕುರಿತು ಲಿಖಿತ ಹೇಳಿಕೆ ಪಡೆಯಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ವಿವಾಹಕ್ಕೆ ಅಗತ್ಯ ವಸ್ತುಗಳನ್ನು ಖರೀದಿಸಲು ವರನಿಗೆ 5 ಸಾವಿರ, ವಧುವಿಗೆ 10 ಸಾವಿರ ಹಾಗೂ ಚಿನ್ನದ ತಾಳಿ, ಎರಡು ಚಿನ್ನದ ಗುಂಡು ಖರೀದಿಸಲು 40 ಸಾವಿರ ಸೇರಿದಂತೆ ಒಂದು ಜೋಡಿಗೆ ಒಟ್ಟು 55 ಸಾವಿರ ಪ್ರೋತ್ಸಾಹ ಧನ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ತಾಲೂಕು ಮಟ್ಟದಲ್ಲಿ ಜಾಹೀರಾತು ಫಲಕಗಳ ಮೂಲಕ, ವಿವಿಧ ದೇವಸ್ಥಾನಗಳಲ್ಲಿ ಫ್ಲೆಕ್ಸ್‌ಗಳ ಮೂಲಕ ಹಾಗೂ ಕರಪತ್ರಗಳ ಮೂಲಕ ಅಗತ್ಯ ಪ್ರಚಾರ ನೀಡಬೇಕು ಎಂದರು. ಸಭೆಯಲ್ಲಿ ಮುಜರಾಯಿ ಇಲಾಖೆಯ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ತಿ.ನರಸೀಪುರದಲ್ಲಿ ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ

ಕನ್ನಡಕ್ಕೆ ವಿಶ್ವ ಮನ್ನಣೆ ತಂದು ಕೊಟ್ಟವರು ಕುವೆಂಪು



ತಿ.ನರಸೀಪುರ: ತಮ್ಮದೇ ಆದ ಪ್ರಭುತ್ವ ಸಾಹಿತ್ಯದ ಮೂಲಕ ಕನ್ನಡಕ್ಕೆ ವಿಶ್ವ ಮನ್ನಣೆಯನ್ನು ರಾಷ್ಟ್ರಕವಿ ಕುವೆಂಪುರವರು ತಂದು ಕೊಟ್ಟಿದ್ದಾರೆ ಎಂದು ತಾಲೂಕಿನ ಬನ್ನೂರು ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ವೈ.ಎಸ್. ರಾಮಸ್ವಾಮಿ ಹೇಳಿದರು.

ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಖಾಸಗಿ ಬಸ್ ಏಜೆಂಟರ ಸಂಘದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕುವೆಂಪು ಕನ್ನಡ ನಾಡು ನುಡಿಯ ಮಹಾಭಾಗ್ಯವಾಗಿದ್ದಾರೆ, ಕನ್ನಡಕ್ಕೆ ಮೊಟ್ಟ ಮೊದಲಿಗೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು,

ದಲಿತ ಹಾಗೂ ಬಂಡಾಯ ಚಳವಳಿಗಳಿಗೂ ಇವರು ಸ್ಪೂರ್ತಿಯಾಗಿದ್ದಾರೆ. ಅನೇಕ ಕವನಗಳು ಚಲನಚಿತ್ರ ಗೀತೆಗಳಾಗಿಯೂ ಕೂಡ ಬೆಳ್ಳಿತೆರೆಯಲ್ಲಿ ರಾರಾಜಿಸಿವೆ, ಕುವೆಂಪುರವರು ಮಂತ್ರ ಮಾಂಗಲ್ಯ ಎಂಬ ಸರಳ ವಿವಾಹ ಪದ್ಧತಿಯನ್ನು ರೂಢಿಗೆ ತಂದ ಶ್ರೇಷ್ಠರು. ಈ ಹಾದಿಯಲ್ಲಿ ಅನೇಕ ಜೋಡಿಗಳು ಸಾಗಿದ್ದಾರೆ, ಜ್ಞಾನಪೀಠ ಪ್ರಶಸ್ತಿ ಜೊತೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಕೂಡ ಪಡೆದ ಕನ್ನಡಿಗರಲ್ಲಿ ಮೊದಲಿಗರಾಗಿದ್ದಾರೆ ಎಂದು ಬಣ್ಣಿಸಿದರು.

ಕುವೆಂಪುರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಸಿಹಿ ಹಂಚಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಕಾರ್ಯಕ್ರಮದಲ್ಲಿ ಖಾಸಗಿ ಬಸ್ ಏಜೆಂಟರ ಸಂಘದ ಗೌರವಾಧ್ಯಕ್ಷ ಹೋಟೆಲ್ ರಾಜಣ್ಣ, ಅಧ್ಯಕ್ಷ ಶ್ರೀನಿವಾಸ್, ಕಾರ್ಯದರ್ಶಿ ರಾಜಣ್ಣ, ಉಪಾಧ್ಯಕ್ಷ ಕೆ.ಕುಮಾರ್, ಖಜಾಂಚಿ ನಾಗಲಿಂಗು, ಹಿರಿಯ ಮುಖಂಡ ಪಿ.ಸ್ವಾಮಿನಾಥ್ ಗೌಡ.ಎಪಿಎಂಸಿ ಮಾಜಿ ಅಧ್ಯಕ್ಷ ಕಗ್ಗಲಿಪುರ ರಾಜಣ್ಣ, ಬಸ್ ಮಾಲೀಕರಾದ ಜೆ ರಮೇಶ್, ಸಂಘದ ನಿರ್ದೇಶಕರುಗಳಾದ ಮಾಧು, ಪಿ.ನಾಗರಾಜು, ಜಯರಾಮು. ಸುಬ್ರಹ್ಮಣ್ಯ, ಶಂಕರ, ಮಂಜುನಾಥ್, ಗಿರಿಶ್, ಸೂರಿ, ಮಹದೇವಣ್ಣ, ಸಿದ್ದು, ಚೇತನ್, ರವಿ, ಅಶೋಕ್, ಹನುಮಂತು, ಸಿದ್ದರಾಜು,ಮಹೇಶ್, ಲೋಕೇಶ್, ಡಿಕೆ ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಚೇತು, ಬಿಜೆಪಿ ಹಿರಿಯ ಮುಖಂಡ ತೋಟದಪ್ಪ ಬಸವರಾಜು, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಷಣ್ಮುಖ ಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ. ವೆಂಕಟೇಶ, ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜ್ ಗೌಡ, ಹೋಟೆಲ್ ವಿನಯ್, ಮುಖಂಡರುಗಳಾದ ತಿರುಮಕೂಡಲು ರಾಮ, ಲಕ್ಷ್ಮಣ, ಮತ್ತಿತರರು ಇದ್ದಾರೆ.

ಅಧಿಕಾರಗಳು ದುರುಪಯೋಗವಾದಂತೆ ಮಾನವ ಹಕ್ಕುಗಳ ಮಿಷನ್ ಕಾರ್ಯನಿರ್ವಹಣೆ



ಹೆಚ್.ಡಿ. ಕೋಟೆ, ಡಿ.29– ಅಧಿಕಾರಗಳು ದುರುಪಯೋಗವಾದಂತೆ ಅದನ್ನು ಕಾಪಾಡಲು ಮಾನವ ಹಕ್ಕುಗಳ ಮಿಷನ್ ಕಾರ್ಯನಿರ್ವಹಿಸುತ್ತದೆ ಎಂದು ವಕೀಲೆ ಸುಜಾತ ಬಿ.ವಸ್ತ್ರದ್ ತಿಳಿಸಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್ ಮೈರಾಡ ಮೈಕ್ಯಾಪ್ಸ್ ಸಭಾಂಗಣದಲ್ಲಿ ಮಾನವ ಹಕ್ಕುಗಳ ಮಿಷನ್‌ನ ತಾಲೂಕು ಪದಾಧಿಕಾರಿಗಳ ಪದಗ್ರಹಣ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ಶೇ.70ರಷ್ಟು ಮಾನವ ಹಕ್ಕುಗಳು ಪೊಲೀಸ್ ಠಾಣೆಯಲ್ಲಿ ಉಲ್ಲಂಘನೆಯಾಗುತ್ತಿವೆ. ಠಾಣೆಯಲ್ಲಿ ಬೇಡಿ ಹಾಕಬಾರದು ಎಂದಿದ್ದರೂ ಆರೋಪಿಗೆ ಬೇಡಿ ಹಾಕುವುದು ಸೇರಿದಂತೆ ಹತ್ತು ಹಲವು ಹಕ್ಕುಗಳು ಉಲ್ಲಂಘನೆಯಾಗುತ್ತಿವೆ ಎಂದು ತಿಳಿಸಿದರು.

ನಮ್ಮ ಮೇಲೆ ಕಾನೂನು ಉಲ್ಲಂಘನೆ ಆಗುತ್ತಿದೆ ಎಂದಾಗ ಆಗ ನಾವು ಹೋರಾಟವನ್ನು ಮಾಡಬೇಕು, ನಮ್ಮ ಸ್ವಾತಂತ್ರಕ್ಕೆ ಧಕ್ಕೆಯಾಗುವುದನ್ನು ನಾವು ಎಂದಿಗೂ ಸಹ ಸಹಿಸಿಕೊಳ್ಳಬಾರದು ಎಂದ ಅವರು, ಮಾನವನಾಗಿ ಹುಟ್ಟಿದ ಮೇಲೆ ಆತ ಜೀವನದಲ್ಲಿ ಬದುಕಬೇಕಾದರೆ ಮಾನವ ಹಕ್ಕುಗಳ ಅಗತ್ಯವಿದ್ದು ಯಾವುದೇ ಕಾರಣಕ್ಕೂ ಧಕ್ಕೆಯಾಗದ ರೀತಿ ನೋಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾನವನ ಹಕ್ಕುಗಳ ಮಿಷನ್ ಅಧ್ಯಕ್ಷ ಮಹಾಮದ್ ಖಾನ್ ಷೇರ್, ಮಾನವ ಹಕ್ಕುಗಳ ಮಿಷನ್ ಮೈಸೂರು ಜಿಲ್ಲಾಧ್ಯಕ್ಷ ಶಿವು ಜನ್ಯ, ಬೆಂಗಳೂರು ನಗರಾಧ್ಯಕ್ಷ ಸಯ್ಯದ್ ಸಮೀರ್, ನಾರಾಯಣ್, ಪ್ರಧಾನ ಕಾರ್ಯದರ್ಶಿ ಚಂದ್ರಹಾಸ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬೀಚನಹಳ್ಳಿ ಮಂಜು, ಜಂಟಿ ಕಾರ್ಯದರ್ಶಿ ಫರ್ಹಾನ್, ಜಿಲ್ಲಾ ಉಪಾಧ್ಯಕ್ಷ ನಾಗರಾಜ್, ಜಿಲ್ಲಾ ಕಾರ್ಯದರ್ಶಿ ರಂಜಿತ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರವಿ, ಸರಗೂರು ಅಧ್ಯಕ್ಷ ಶ್ರೀನಿವಾಸ್, ಹೆಚ್.ಡಿ. ಕೋಟೆ ತಾಲೂಕು ಅಧ್ಯಕ್ಷ ಎಂ.ಬಿ. ರವೀಂದ್ರ, ಕುಮಾರಸ್ವಾಮಿ, ಬಸವರಾಜು, ನಾಗರಾಜು, ರವಿ, ರವೀಂದ್ರ ಶ್ರೀನಿವಾಸ್, ಮರಿಸ್ವಾಮಿ, ಚಿನ್ನಣ್ಣ, ಪ್ರಭಾಕರ್, ಸೋಮಣ್ಣ, ಮರಿಲಿಂಗಯ್ಯ, ನಾಗಣ್ಣ, ಮಹದೇವ ಕುಮಾರ್, ಇಂದ್ರ ಕುಮಾರ್, ರವಿಕುಮಾರ್, ಮಹೇಶ, ಸಿದ್ದರಾಜು, ನೀಲಕಂಠ, ಮಾದೇವ ನಾಯಕ, ಶಿವಣ್ಣ, ವಿಷಕಂಠ, ನಾಗರಾಜು ಶಿವರಾಜು ಮುಂತಾದವರು ಹಾಜರಿದ್ದರು.

ಬೈಲಕುಪ್ಪದಲ್ಲಿ ನಕಲಿ ಕ್ರೈಂ ಪೊಲೀಸ್ ಬಂಧನ

ಬೈಲಕುಪ್ಪೆ: ಕ್ರೈಂ ಬ್ರಾಂಚ್ ಪೊಲೀಸ್ ಎಂದು ಹೇಳಿಕೊಂಡು ಸಾರ್ವಜನಿಕರನ್ನು ವಂಚಿಸುತ್ತಿದ್ದ ನಕಲಿ ಕ್ರೈಂ ಬ್ರಾಂಚ್ ಪೊಲೀಸ್ ಪೇದೆಯನ್ನು ಬೈಲುಕುಪ್ಪೆ ಪೊಲೀಸರು ಬಂಧಿಸಿದ್ದಾರೆ. ಕೆಆರ್.ನಗರ ತಾಲೂಕಿನ ಮದುವನಹಳ್ಳಿ ನಿವಾಸಿ ದಿವ್ಯರಾಜ್ ಬಂಧಿತ ಆರೋಪಿ.

ದಿವ್ಯರಾಜ್ ಕೊಪ್ಪ ಗ್ರಾಮದಲ್ಲಿರುವ ಆಯುರ್ವೇದಿಕ್ ಸ್ಪಾದ ಮಾಲೀಕ ಪುಷ್ಪ ಲವಕುಮಾರ್ ಅವರಿಗೆ ತಾನು ಕ್ರೈಂ ಬ್ರಾಂಚ್ ಪೊಲೀಸ್ ಪೇದೆ ಎಂದು ಹೇಳಿಕೊಂಡು ಹಣಕ್ಕೆ ಬೇಡಿಕೆ ಇಟ್ಟಿದ್ದ. ಇದರಿಂದ ಅನುಮಾನಗೊಂಡ ಪುಷ್ಪ ಲವಕುಮಾರ್ ಬೈಲಕುಪ್ಪ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿ ದಿವ್ಯರಾಜ್‌ನನ್ನು ಬಂಧಿಸಿ ವಿಚಾರಣೆ ವೇಳೆ ದಿವ್ಯರಾಜ್ ನಕಲಿ ಕ್ರೈಂ ಪೊಲೀಸ್ ಎಂದು ಒಪ್ಪಿಕೊಂಡಿದ್ದಾನೆ. ಕಾರ್ಯಾಚರಣೆಯಲ್ಲಿ ಪಿಎಸ್‌ಐ ಅಜಯ್ ಕುಮಾರ್, ಸಿಬ್ಬಂದಿಗಳಾದ ಶಿವಣ್ಣ, ಕುಮಾರಸ್ವಾಮಿ, ತ್ರಿನೇಶ್ ರಾಕೇಶ್ ಸುರೇಶ್ ಮಹಿಳಾ ಸಿಬ್ಬಂದಿ ಅನಿತಾ ಭಾಗವಹಿಸಿದ್ದರು.




ಪ್ರತಾಪಸಿಂಹ ಸಿಎಂ ಕ್ಷಮೆ ಕೇಳಬೇಕು

ಹುಣಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಗ್ಗೆ ಸಂಸದ ಪ್ರತಾಪಸಿಂಹ ಅವರು ನೀಡಿರುವ ಅವಹೇಳನಕಾರಿ ಹೇಳಿಕೆಯನ್ನು ತಾಲೂಕು ಕುರುಬ ಅಭಿವೃದ್ಧಿ ಸಮಿತಿಯು ಖಂಡಿಸಿದ್ದು ಕೂಡಲೆ ಸಂಸದರು ಕ್ಷಮೆ ಯಾಚಿಸಬೇಕು ಹಾಗೂ ಪೊಲೀಸರು ಬಂಧಿಸಬೇಕೆಂದು ಆಗ್ರಹಿಸಿದೆ.

ಹುಣಸೂರು ನಗರದ ಕನಕ ಭವನಲ್ಲಿ ಶುಕ್ರವಾರ ನಡೆದ ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ಡಿ.ಕೆ.ಕುನ್ನೇಗೌಡ ಹುಣಸೂರಿನಲ್ಲಿ ನಡೆದ ಹನುಮ ಜಯಂತಿ ಕಾರ್ಯಕ್ರಮದಲ್ಲಿ ಪ್ರತಾಪಸಿಂಹ ಅವರು ಸಿದ್ದರಾಮಯ್ಯನವರ ಬಗ್ಗೆ ನೀಡಿರುವ ಅವಹೇಳನಕಾರಿ ಹೇಳಿಕೆ ಬಗ್ಗೆ ಪ್ರತಾಪಸಿಂಹರವರು ಕೂಡಲೆ ಕ್ಷಮೆಯಾಚಿಸಬೇಕು.

ಮೈಸೂರು ಜಿಲ್ಲಾ ಕುರುಬರ ಸಂಘದ ಉಪಾಧ್ಯಕ್ಷ ಶಿರೇನಹಳ್ಳಿ ಬಸವರಾಜೇಗೌಡ ಮಾತನಾಡಿದರು. ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ಪ್ರಧಾನ ಕಾರ್ಯದರ್ಶಿ ವಾಸೇಗೌಡ, ಉಪಾಧ್ಯಕ್ಷ ಮಹದೇವ್, ಮಂಡ್ಯ ಮಹೇಶ್, ಮುಖಂಡರಾದ ಕಲ್ಕುಣಿಕೆ ರಮೇಶ್, ಡೈರಿ ಈಶ್ವರ್, ಚಂದ್ರೇಗೌಡ, ಗಣಪತಿ, ಶಿವಣ್ಣೇಗೌಡ, ಸ್ವಾಮಿಗೌಡ, ಕುಪ್ಪಸ್ವಾಮಿ, ಪ್ರಭಾಕರ ಹೆಗ್ಗಡೆ, ಕಲ್ಕುಣಿಕೆ ರಾಘು, ಕಾಯಿ ಶೇಖರ್, ನಾಗರಾಜ್, ಹೈರಿಗೆ ಮಂಜು, ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಚಂದ್ರೇಗೌಡ, ಮೈಸೂರು ಜಿಲ್ಲಾ ಉಸ್ತುವಾರಿ ಹಾಗೂ ಜಾಗೃತಿ ಸಮಿತಿ ಸದಸ್ಯ ಎನ್.ಕೆ. ಮಹದೇವ್, ಚಿಕ್ಕಣ್ಣೇಗೌಡ ಖಂಡಿಸಿದರು.

ಕೋಟೆಯಲ್ಲಿ ವೈಭವದ ಏಕಾದಶಿ



ಹೆಗ್ಗಡದೇವನಕೋಟೆ: ಮಹಾವಿಷ್ಣು ತನ್ನ ಯೋಗ ನಿದ್ರೆಯಿಂದ ವಾಸ್ತವ ತೆಯ ಜಾಗ್ರತಾವಸ್ಥೆಗೆ ಮರಳಿ ಬರುವ ಪುಣ್ಯ ದಿನವೇ ವೈಕುಂಠ ಏಕಾದಶಿ. ಏಕಾದಶಿ ಪ್ರಯುಕ್ತ ಸ್ಥಳೀಯ ಶ್ರೀ ಲಕ್ಷ್ಮಿ ವರದರಾಜಸ್ವಾಮಿ ದೇವಸ್ಥಾನದಲ್ಲಿ ಶ್ರೀ ಲಕ್ಷ್ಮಿ ವರದರಾಜ ಸ್ವಾಮಿಯ ರೂಪದಲ್ಲಿ ಮಹಾವಿಷ್ಣುವಿನ ವೈಕುಂಠ ದರ್ಶನದೊಂದಿಗೆ ವಿಶೇಷ ಪೂಜೆ ನಡೆಯಿತು.

ಮುಂಜಾನೆ 4 ಗಂಟೆಯಿಂದಲೇ ಸಹಸ್ರಾರು ಮಂದಿ ಭಕ್ತರು ಶ್ರೀ ಲಕ್ಷ್ಮಿ ವರದರಾಜಸ್ವಾಮಿ ರೂಪದಲ್ಲಿರುವ ಮಹಾ ವಿಷ್ಣು ಹಾಗೂ ಶ್ರೀ ವೆಂಕಟೇಶ್ವರನ ರೂಪವನ್ನು ಕಣ್ತುಂಬಿಕೊಂಡರು. ಶ್ರೀ ಲಕ್ಷ್ಮಿ ವರದರಾಜ ಸ್ವಾಮಿ ವಿಗ್ರಹಕ್ಕೆ ಹೆಚ್.ಡಿ.ಕೋಟೆ ನಿವಾಸಿಗಳಾದ ಪಂಡಿತರ ಮನೆತನದ ಕೆ.ಎಲ್.ಬಂಗಾರಸ್ವಾಮಿ, ಹೆಚ್.ಬಿ.ಸುದರ್ಶನ್, ಹೆಚ್.ಎಸ್.ಸತ್ಯನಾರಾಯಣ, ಶ್ರೀಮತಿ ಹಂಸ, ಆದಿತ್ಯ ಹಾಗೂ ಅದ್ವೈತ್ ಅವರ ಹರಕೆಯಿಂದ ಲಕ್ಷಾಂತರ ರೂ. ಮೌಲ್ಯದ ರಜತ ವಕ್ಷಸ್ಥಳ ಧಾರಣೆಯನ್ನು ಮಾಡಿಸಿ ಶ್ರೀ ಲಕ್ಷ್ಮಿ ವರದರಾಜ ಸ್ವಾಮಿಗೆ ಸಮರ್ಪಿಸಿದರು ಎಂದು ದೇವಸ್ಥಾನ ಮಂಡಳಿಯ ಮುಖ್ಯ ಆಗಮಿಕರಾದ ತಿರುಮಲಾಚಾರ್ ತಿಳಿಸಿದ್ದಾರೆ. ಇದೆ ವೇಳೆ ಪಂಡಿತರ ಮನೆತನದ ಶ್ರೀಮತಿ ಹೆಚ್. ಬಿ.ಜಯಪ್ರಕಾಶ್, ಶ್ರೀಮತಿ ಅಮೃತ, ಕೃಷ್ಣಪ್ರಸಾದ್, ಶ್ರೀಧರ ಪಾಲ್ಗೊಂಡಿದ್ದರು. ದೇವಸ್ಥಾನದ ಆಡಳಿತ ಮಂಡಳಿಯ ಧರ್ಮದರ್ಶಿಗಳಾದ ಬಿ.ಎಸ್. ರಂಗಯ್ಯಂಗಾರ್, ಅರ್ಚಕರಾದ ಶ್ರೀಧರ್, ಸುಧಾಕರ್, ಮೇಲ್ವಿಚಾರಕರಾದ ಹೆಚ್.ಆರ್. ವೆಂಕಟೇಶ ಪ್ರಸಾದ್, ದೇವರಾಜ್ ಜಯಂತ್ ಶ್ರೀ ಕಾಂತ್ ಪ್ರಮೋದ್ ಸುಧಾಕರ್, ಮಂಡಳಿಯ ಸಿಬ್ಬಂದಿವರ್ಗ ಪಾಲ್ಗೊಂಡಿದ್ದರು.

ಸಿಎಂ ಜೊತೆ ಚರ್ಚಿಸಿ ಹುಚ್ಚಗಣಿ ದೇವಸ್ಥಾನ ನಿರ್ಮಾಣ

ಜನ ಸಂಪರ್ಕ ಸಭೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಭರವಸೆ



ಮಲ್ಕುಂಡಿ, ನಂಜನಗೂಡು, ಡಿ.29– ತಾಲೂಕಿನ ಹುಚ್ಚಗಣಿ ಗ್ರಾಮದಲ್ಲಿ ಕೆಡವಲಾಗಿದ್ದ ಹುಚ್ಚಗಣಿ ಮಹದೇವಮ್ಮ ದೇವಾಲಯದ ಮರು ನಿರ್ಮಾಣಕ್ಕೆ ಮುಖ್ಯಮಂತ್ರಿಗಳ ಗಮನ ಸೆಳೆದು ಅನುದಾನ ಮಂಜೂರಾತಿ ಮಾಡಿಸಿ ಸುಸಜ್ಜಿತ ದೇವಾಲಯ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಭರವಸೆ ನೀಡಿದ್ದಾರೆ.

ತಾಲೂಕಿನ ಹರದನಹಳ್ಳಿ ಗ್ರಾಪಂ ವ್ಯಾಪ್ತಿಗೆ ಬರುವ ಹರದನಹಳ್ಳಿ, ಹುಚ್ಚಗಣಿ, ಬಸಾಪುರ, ಕಾಟೂರು ಗ್ರಾಮಗಳಲ್ಲಿ ಜನಸಂಪರ್ಕ ಸಭೆ ನಡೆಸಿ ಸಾರ್ವಜನಿಕರ ಸಮಸ್ಯೆಯನ್ನು ಆಲಿಸಿ ಮಾತನಾಡಿದರು. ಹುಚ್ಚಗಣಿ ಮಹದೇವಮ್ಮ ದೇವಾಲಯ ಕೆಡವಿರುವುದು ಒಂದು ದುರ್ಘಟನೆ. ಇದು ನಡೆಯಬಾರದಿತ್ತು. ಆದರೆ ಆ ದೇವಾಲಯವನ್ನು ಮರು ನಿರ್ಮಿಸಿಕೊಡುವಂತೆ ಗ್ರಾಮಸ್ಥರು ಬೇಡಿಕೆ ಇಟ್ಟಿದ್ದಾರೆ ನಾನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನವೊಲಿಸಿ ಅನುದಾನ ಬಿಡುಗಡೆಗೊಳಿಸಿ ಸುಸಜ್ಜಿತ ದೇವಾಲಯ ನಿರ್ಮಾಣಕ್ಕೆ ಕ್ರಮವಹಿಸುತ್ತೇನೆ ಎಂದರು.

ಮೂಲಸೌಕರ್ಯಕ್ಕೆ ಆದ್ಯತೆ: ಗ್ರಾಪ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿ ಹೆಚ್ಚಾಗಿ ಸಿಸಿಇ ರಸ್ತೆ, ಚರಂಡಿ ನಿರ್ಮಿಸಿ ಕೊಡುವಂತೆ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ನೀಡುವಂತೆ ಬೇಡಿಕೆ ಇಟ್ಟಿದ್ದೀರಿ. ನೀವು ಮತ ನೀಡಿ ನಮ್ಮನ್ನು ಆರಿಸಿ ಕಳುಹಿಸಿದ್ದೀರಿ. ನಿಮ್ಮೆಲ್ಲರ ಋಣ ನಮ್ಮ ಮೇಲಿದ್ದು, ಮೂಲಸೌಕರ್ಯ ಒದಗಿಸುವುದು ನಮ್ಮ ಸರ್ಕಾರದ ಕರ್ತವ್ಯ ಆದ್ದರಿಂದ ಮೂಲ ಸೌಕರ್ಯದ ಬಗ್ಗೆ ಗ್ರಾಮಸ್ಥರು ಚಿಂತಿಸಬೇಕಿಲ್ಲ ಮುಂದಿನ ವರ್ಷದಲ್ಲಿ ಹೆಚ್ಚಿನ ಅನುದಾನ ತಂದು ಅಗತ್ಯ ಸೌಕರ್ಯವನ್ನು ಒದಗಿಸಲಾಗುವುದು ಎಂದರು.

ಹೆಚ್ಚಾಗಿ ನಮಗೆ ಆಶ್ರಯ ಮನೆ ಮಂಜೂರು ಮಾಡಿಕೊಡುವಂತೆ ಮನವಿ ಮಾಡಿದ್ದಾರೆ. ಈ ಮನೆ ಮಂಜೂರು ಸಮಸ್ಯೆ ಬರೀ ಒಂದೇ ಗ್ರಾಮದ ಸಮಸ್ಯೆಯಾಗಿಲ್ಲ, ಇಡೀ ವಿಧಾನಸಭೆ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲೂ ಸಹ ಮನೆ ಮಂಜೂರಾತಿಗೆ ಹೆಚ್ಚಾಗಿ ಬೇಡಿಕೆ ಇದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ದೊಡ್ಡ ಕೌಲಂದೆ ಗ್ರಾಮದ ಪೊಲೀಸ್ ಠಾಣೆ ಉದ್ಘಾಟನೆಗೆ ಬಂದಿದ್ದ ವೇಳೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದೇನೆ. ಅವರು ಮಂಜೂರು ಮಾಡುವ ಭರವಸೆ ನೀಡಿದ್ದಾರೆ. ಮುಂಬರುವ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯ ಮನೆಗಳನ್ನು ಮಂಜೂರಾಗುವ ನಿರೀಕ್ಷೆಯಿದೆ. ಯಾರಿಗೆ ಸೂರು ಇಲ್ಲ ಅವರಿಗೆ ಅವರಿಗೆ ಸೂರು ಕಲ್ಪಿಸಲು ಕ್ರಮವಹಿಸುತ್ತೇನೆ ಎಂದರು.

ಸ್ವಚ್ಛತೆಗೆ ಆದ್ಯತೆ ನೀಡಿ : ಕೊರೋನಾ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಎಲ್ಲೆಡೆ ಸ್ವಚ್ಛತೆ ಕಾಪಾಡುವುದು ಪಿಡಿಓ ಜವಾಬ್ದಾರಿ ಆದರೆ ಹಲವು ಗ್ರಾಮಗಳಲ್ಲಿ ಚರಂಡಿ ಸ್ವಚ್ಛತೆ ಮಾಡದಿರುವ ಬಗ್ಗೆ ದೂರು ಕೇಳಿ ಬಂದಿದ್ದು, ಈ ಕೂಡಲೇ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಚರಂಡಿ ಸ್ವಚ್ಛತೆಗೆ ಆದ್ಯತೆ ನೀಡದಿದ್ದಲ್ಲಿ ನಿಮ್ಮ ಮೇಲೆ ಶಿಸ್ತು ಕ್ರಮಕೈಗೊಳ್ಳಲಾಗುವುದು ಎಂದು ಖಡಕ್ ಸೂಚನೆ ನೀಡಿದ ಅವರು ಕೋವಿಡ್ ತಡೆಗಟ್ಟಲು ಸಾರ್ವಜನಿಕರೂ ಸಹ ಸ್ವಚ್ಛತೆ ಕಾಪಾಡಿ ಆರೋಗ್ಯದ ಕಡೆ ಗಮನಹರಿಸಬೇಕು ಎಂದರು.

ಮತ್ತೆ ಸಮಸ್ಯೆ ಮರುಕಳಿಸದಂತೆ ಅಧಿಕಾರಿಗಳು ಕ್ರಮವಹಿಸಿ: ನಾವು ಒಮ್ಮೆ ಜನಸಂಪರ್ಕ ಸಭೆ ನಡೆಸಿ ದೂರು ಕೇಳಿ ಬಂದಲ್ಲಿ ಮತ್ತೆ ಅದೇ ದೂರುಗಳ ಬಾರದಂತೆ ಅಧಿಕಾರಿಗಳು ಕ್ರಮವಹಿಸಬೇಕು ಎಂದು ಸೂಚಿಸಿದ ಅವರು ತಾಲೂಕು ಮಟ್ಟದ ಅಧಿಕಾರಿಗಳು ಸಾರ್ವಜನಿಕರಿಗೆ ಉತ್ತಮ ರೀತಿಯಲ್ಲಿ ಸ್ಪಂದಿಸದಿದ್ದಲ್ಲಿ ನೀವು ನನ್ನನ್ನು ನೇರವಾಗಿ ಅಥವಾ ದೂರವಾಣಿ ಮೂಲಕ ಸಂಪರ್ಕ ಮಾಡಿ ನಾವು ಅಂತಹವರ ಮೇಲೆ ಕ್ರಮವಹಿಸಲು ಮುಂದಾಗುತ್ತೇನೆ ಎಂದು ಭರವಸೆ ನೀಡಿದರು.

ಇದೇ ಸಂಧರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ವಿಧಾನಸಭಾ ಉಸ್ತುವಾರಿ ಸೋಮೇಶ್, ಮಡಕೆಹುಂಡಿ ಶಿವಣ್ಣ, ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

ಹಿರಿಯೂರು ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ತಿ.ನರಸೀಪುರ: ತಾಲೂಕಿನ ಹಿರಿಯೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಗುರುಸ್ವಾಮಿ, ಉಪಾಧ್ಯಕ್ಷ ನಾಗಪ್ಪ ಆಯ್ಕೆಯಾದರು.

ಗ್ರಾಮದ ಡೈರಿ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಬಯಸಿ ಗುರುಸ್ವಾಮಿ ಹಾಗೂ ವೀರಪ್ಪ ಸ್ವಾಮಿ ನಾಮಪತ್ರ ಸಲ್ಲಿಸಿದರು. ನಂತರ ನಡೆದ ಚುನಾವಣೆಯಲ್ಲಿ ಗುರುಸ್ವಾಮಿ 7 ಮತ ಪಡೆದು ಜಯಶೀಲರಾದರು ವೀರಪ್ಪ ಸ್ವಾಮಿ 6 ಮತ ಪಡೆದು ಪರಾಭವಗೊಂಡರು. ಉಪಾಧ್ಯಕ್ಷರಾಗಿ ನಾಗಪ್ಪ ಒಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿ ರಮೇಶ್ ಘೋಷಿಸಿದರು

ಡೈರಿ ಕಾರ್ಯದರ್ಶಿ ಶಿವಕುಮಾರ್, ನಿರ್ದೇಶಕರಾದ ಬಸವರಾಜು. ಮಹದೇವಸ್ವಾಮಿ. ಗುರುಸ್ವಾಮಿ. ಮಹದೇವಸ್ವಾಮಿ, ಎಂಗೋವಿಂದಪ್ಪ, ಮೀನಾಕ್ಷಮ್ಮ, ಕೆಂಪಮ್ಮ, ಮಹಾದೇವಶೆಟ್ಟಿ, ಎಚ್.ಎಂ.ನಾಗರಾಜು, ಸಿದ್ದಮ್ಮ, ಗ್ರಾಮಸ್ಥರು ಹಾಜರಿದ್ದರು.

ಮೈಸೂರಿನಲ್ಲಿ ವಿಕಸಿತ ಭಾರತ ಸಂಕಲ್ಪ ಯಾತ್ರೆಗೆ ಸಂಸದ ಪ್ರತಾಪ್ ಸಿಂಹ ಚಾಲನೆ



ಮೈಸೂರು, ಡಿ.29(ಬಿಎಲ್‌ಯು)– ಕೇಂದ್ರ ಸರ್ಕಾರದ ಯೋಜನೆಗಳ ಸವಲತ್ತು ಪಡೆಯಲು ಸ್ಥಳದಲ್ಲೇ ನೋಂದಣಿ ಮಾಡಿಕೊಳ್ಳುವ ವಿಕಸಿತ ಸಂಕಲ್ಪ ಯಾತ್ರೆಯು ಮೈಸೂರಿನಲ್ಲಿ ಇಂದು ಆರಂಭವಾಯಿತು.

ಶಾರದಾದೇವಿನಗರದಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಮೈಸೂರು–ಕೊಡಗು ಲೋಕಸಭಾ ಸದಸ್ಯ ಪ್ರತಾಪ್ ಸಿಂಹ ರಥಯಾತ್ರೆಗೆ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಉಜ್ವಲ ಯೋಜನೆಯ ಅರ್ಹ ಫಲಾನುಭವಿಗಳಿಗೆ ಉಚಿತ ಗ್ಯಾಸ್ ಸೇರಿದಂತೆ ಇತರೆ ಯೋಜನೆಯ ಸವಲತ್ತುಗಳನ್ನು ಪ್ರತಾಪ್ ಸಿಂಹ ಸಾಂಕೇತಿಕವಾಗಿ ವಿತರಣೆ ಮಾಡಿದರು.

ಈ ವೇಳೆ ಮಾತನಾಡಿದ ಪ್ರತಾಪ್ ಸಿಂಹ, ಮೈಸೂರು ಹಾಗೂ ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಜನವರಿ 24 ರವರೆಗೆ ಈ ಯಾತ್ರೆ ಸಂಚರಿಸಲಿದೆ. ಮೈಸೂರು ಜಿಲ್ಲೆಯ 254 ಗ್ರಾಮ ಪಂಚಾಯಿತಿ ಹಾಗೂ ಕೊಡಗು ಜಿಲ್ಲೆಯ 104 ಗ್ರಾಮ ಪಂಚಾಯಿತಿಗಳಲ್ಲಿ ರಥಯಾತ್ರೆ ಸಂಚರಿಸಲಿದೆ. ಜೊತೆಗೆ ಮೈಸೂರು ನಗರದ 65 ವಾರ್ಡ್‌ಗಳಲ್ಲಿ ಕೂಡ ರಥಯಾತ್ರೆ ಸಾಗಲಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಸರ್ಕಾರದಲ್ಲಿ ಚಾಲನೆಗೊಂಡಿರುವ ಯೋಜನೆಗಳ ಸವಲತ್ತು ಪಡೆಯಲು ರಥಯಾತ್ರೆಯಲ್ಲಿ ಸ್ಥಳದಲ್ಲೇ ನೋಂದಣಿ ಮಾಡಿಕೊಳ್ಳಬಹುದು. ಈ ಉಪಯೋಗವನ್ನು ಮೈಸೂರು ಹಾಗೂ ಕೊಡಗು ಜನರು ಪಡೆಯಬಹುದು ಎಂದು ಹೇಳಿದರು.

ಪಿ.ಎಂ ಸ್ವನಿಧಿ, ಆಯುಷ್ಮಾನ್ ಭಾರತ್, ಅಮೃತ್ ಯೋಜನೆ, ಜಲ ಜೀವನ್ ಮಿಷನ್, ಸೌಭಾಗ್ಯ ಯೋಜನೆ ಸೇರಿದಂತೆ ಇತರೆ ಯೋಜನೆಯ ಸವಲತ್ತು ಪಡೆಯಲು ಫಲಾನುಭವಿಗಳು ಸ್ಥಳದಲ್ಲೇ ನೋಂದಣಿ ಮಾಡಿಕೊಳ್ಳಬಹುದು ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರದ ಜನಪರ ಯೋಜನೆಗಳು ಶ್ರೀ ಸಾಮಾನ್ಯನಿಗೆ ಅನುಕೂಲವಾಗಲಿದೆ. ಇದರಿಂದ ಜನರ ಆರ್ಥಿಕ ಜೀವನ ಸುಧಾರಿಸಲಿದೆ. ಇದರಿಂದ ಸಹಾಯಕ್ಕಾಗಿ ಯಾವ ರಾಜಕಾರಣಿ ಕೈಯೊಡ್ಡುವ ಪರಿಸ್ಥಿತಿ ಬರುವುದಿಲ್ಲ ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು. ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಮತಕ್ಕಾಗಿ ನರೇಂದ್ರ ಮೋದಿ ಅವರು ಈ ಯಾತ್ರೆ ಆರಂಭಿಸಿಲ್ಲ. ಜನಪರ ಕಲ್ಯಾಣಕ್ಕಾಗಿ ಇದನ್ನು ಮಾಡಿದ್ದಾರೆ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು


'ಸೀತಾರಣ್ಯ ಪ್ರವೇಶ' ನಾಟಕ ಪ್ರದರ್ಶನ

● ನಾಟಕಗಳು ಹೃದಯ ಸ್ಪರ್ಶಿಯಾಗಿರಬೇಕು ● ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಅಭಿಮತ

ಮೈಸೂರು, ಡಿ.29(ಎಸ್‌ಪಿಎನ್)– ನಾಟಕದ ಕಥಾವಸ್ತು, ಆಶಯ, ರಚನೆಯ ಕಾಲ ಯಾವುದೇ ಇರಲಿ, ಪ್ರದರ್ಶನಗೊಂಡ ನಾಟಕಗಳು ನೋಡುಗರ ಹೃದಯಕ್ಕೆ ತಾಕುವಂತಿರಬೇಕು. ಮನಸ್ಸಿಗೆ ಮುದ ನೀಡುವಂತಿರಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹಾಗೂ ರಂಗಯಾನ ಟ್ರಸ್ಟ್ ಸಹಯೋಗದೊಂದಿಗೆ ನಡೆದ 'ಸೀತಾರಣ್ಯ ಪ್ರವೇಶ' ನಾಟಕ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಸಕ್ಕರಿ ಬಾಳಾಚಾರ್ಯ (ಶಾಂತಕವಿ) ರಚಿತ 'ಸೀತಾರಣ್ಯ ಪ್ರವೇಶ' ನಾಟಕವನ್ನು ಸಾಲಿಯಾನ್ ಉಮೇಶ್ ನಾರಾಯಣ ನಿರ್ದೇಶಿಸಿದ್ದು, ಹೆಚ್. ನಟರಾಜು ಮತ್ತು ಅರ್ಚನಾ ಹೆಗ್ಡೆ ಸಂಗೀತ ನೀಡಿದ್ದಾರೆ. ಅಂತೆಯೇ ಹಲವು ವರ್ಷದ ಹಿಂದೆಯೇ ಕನ್ನಡ ರಂಗಭೂಮಿಯನ್ನು ಹುಟ್ಟು ಹಾಕಿ, ಮರಾಠಿ ನಾಟಕಗಳಿಗಿಂತ ಕನ್ನಡ ರಂಗಭೂಮಿ ಶ್ರೇಷ್ಠ ಎಂಬುದನ್ನು ತೋರಿಸಿಕೊಟ್ಟ ಕೀರ್ತಿ ಶಾಂತಕವಿಗಳಿಗೆ ಸಲ್ಲುತ್ತದೆ ಎಂದರು.



ಪ್ರಸ್ತುತ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಪೌರಾಣಿಕ ನಾಟಕಗಳು ಮಾತ್ರ ಪ್ರದರ್ಶನಗೊಳ್ಳುತ್ತಿವೆ. ಇದರ ಜೊತೆಗೆ ಸಾಮಾಜಿಕ ನಾಟಕಗಳ ಪ್ರದರ್ಶನಕ್ಕೂ ಒತ್ತು ನೀಡಬೇಕು. ಈ ಮೂಲಕ ಕಲೆಯನ್ನು ಉಳಿಸಿ, ಬೆಳೆಸಬೇಕು. ಶಾಂತಕವಿ ರಚಿತ ನಾಟಕ ಪ್ರದರ್ಶನವಾದ ದಿನವನ್ನು ಇಂದಿಗೂ ಆಧುನಿಕ ಕನ್ನಡ ನಾಟಕ ದಿನವಾಗಿ ಆಚರಿಸಲಾಗುತ್ತಿದೆ. ಶಾಂತಕವಿ ಅವರು, 27 ನಾಟಕಗಳನ್ನು ರಚಿಸಿದ್ದು, ಇವರನ್ನು ಆಧುನಿಕ ನಾಟಕಗಳ ಪಿತಾಮಹ ಎಂದು ಕರೆಯುವುದುಂಟು. ಇವರ ಮೊದಲ ನಾಟಕ ಉಷಾಕಿರಣ, ಎರಡನೆ ನಾಟಕ 'ಸೀತಾರಣ್ಯ ಪ್ರವೇಶ'. ಈ ನಾಟಕ ಧಾರವಾಡ ಹಾಗೂ ಮೈಸೂರಿನಲ್ಲಿ ಪ್ರದರ್ಶನ ಆಗುರುತ್ತಿರುವುದು ಸಂತೋಷದ ಸಂಗತಿ ಎಂದರು.

ಶಾಂತಕವಿಯ ನಾಟಕಗಳು ಪ್ರಸ್ತುತ ಸಾಂಸ್ಕೃತಿಕ ಕ್ಷೇತ್ರದ ತಲ್ಲಣಗಳ ಕುರಿತು ಬೆಳಕು ಚೆಲ್ಲಿದೆ. ಹಿಂದಿನ ಕಾಲದಲ್ಲಿ ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಸಂಪನ್ನವಾಗಿದ್ದ ರಂಗಭೂಮಿ, ಇದೀಗ ಆಧುನಿಕತೆಯ ಭರಾಟೆಯಲ್ಲಿ ವೈಭವ ಕಳೆದುಕೊಂಡ ಬಗೆಯನ್ನು ಕಲಾವಿದರು ಮನೋಜ್ಞವಾಗಿ ಅಭಿನಯಿಸಿ, ತೋರಿಸಿದ್ದಾರೆ ಎಂದರು.

ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಹಿರಿಯ ರಂಗಕರ್ಮಿ ಇಂದಿರಾ ನಾಯರ್, ಎನ್.ಎಸ್. ಗೋಪಿನಾಥ್, ಧಾರವಾಡ ರಂಗಾಯಣದ ಮಾಜಿ ನಿರ್ದೇಶಕ ಡಾ. ಪ್ರಕಾಶ್ ಗರುಡ, ಶಾಂತಕವಿ ಟ್ರಸ್ಟ್ ಕಾರ್ಯದರ್ಶಿ ಎಸ್.ಡಿ.ಹನುಮೇಶ, ರಂಗ ನಿರ್ದೇಶಕ ಸಾಲಿಯಾನ್ ಉಮೇಶ್‌ನಾರಾಯಣ್, ಕಲಾವಿದೆ ಕಾರುಣ್ಯ ಸೇರಿದಂತೆ ಇತರೆ ಕಲಾವಿದರಿದ್ದರು.

ಹಸಿರು ನಮ್ಮ ಉಸಿರು

ರಾಜ್ಯದಲ್ಲಿ 173 ಮಂದಿಗೆ ಕೊರೊನಾ; ಇಬ್ಬರ ಸಾವು

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 173 ಮಂದಿಗೆ ಕೊರೊನಾ ಪತ್ತೆಯಾಗಿದ್ದು, ಬೆಂಗಳೂರಿನಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ.

ಈ ಬಗ್ಗೆ ರಾಜ್ಯ ಆರೋಗ್ಯ ಇಲಾಖೆ ಮಾಹಿತಿ ನೀಡಿದ್ದು, ರಾಜ್ಯದಲ್ಲಿನ ಸಕ್ರಿಯ ಪ್ರಕರಣಗಳ ಸಂಖ್ಯೆ 702ಕ್ಕೆ ಏರಿದೆ. ಈ ಪೈಕಿ 649 ಜನರು ಮನೆಯಲ್ಲಿ ಪ್ರತ್ಯೇಕವಾಗಿರುತ್ತಾರೆ ಮತ್ತು ಉಳಿದ 53 ಸೋಂಕಿತರು ಆಸ್ಪತ್ರೆಗೆ ದಾಖಲಾಗಿದ್ದಾರೆ ರಾಜ್ಯದಲ್ಲಿ ಸೋಂಕಿಗೆ ಬಲಿಯಾದವರ ಸಂಖ್ಯೆ 10ಕ್ಕೇರಿದೆ. ಮೈಸೂರಲ್ಲಿ 16 ಮಂದಿ, ಮಂಡ್ಯದಲ್ಲಿ 6, ಕೊಡಗಿನಲ್ಲಿ ಒಬ್ಬರು, ಚಾಮರಾಜನಗರದಲ್ಲಿ ನಾಲ್ವರು ಹಾಗೂ ಹಾಸನದಲ್ಲಿ 9 ಮಂದಿಗೆ ಇಂದು ಸೋಂಕು ಪತ್ತೆಯಾಗಿದೆ.

ರಿಟರ್ನಿಂಗ್ ಆಫೀಸರ್, ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿ., ಸಹಕಾರ ಸಂಕೀರ್ಣ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು ರವರ ಕಾರ್ಯಾಲಯ.

" ಪತ್ರಿಕಾ ಪ್ರಕಟಣೆ "

ರಿಟರ್ನಿಂಗ್ ಆಫೀಸರ್, ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿ., ಸಹಕಾರ ಸಂಕೀರ್ಣ, ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು ಈ ಬ್ಯಾಂಕಿನ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಚುನಾವಣೆ ನಡೆಸಲು ದಿನಾಂಕ: 14-01-2024 ರ ಭಾನುವಾರ ಬೆಳಗ್ಗೆ 09-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ ಹಾರ್ಡ್ವಿಕ್ ಹೈಸ್ಕೂಲ್, ಜೆ.ಎಲ್.ಬಿ ರಸ್ತೆ, ಮೈಸೂರು ಇಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಗೆ ಸ್ಪರ್ಧಿಸಲು ನಾಮಪತ್ರಗಳನ್ನು ದಿನಾಂಕ: 30-12-2023 ರಿಂದ 06-01-2024 ರವರೆಗೆ ಬೆಳಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 2-00 ಗಂಟೆಯವರೆಗೆ ಬ್ಯಾಂಕಿನ ಕಛೇರಿಯಲ್ಲಿ ಸ್ವೀಕರಿಸಲಾಗುವುದು. ಚುನಾವಣಾ ವೇಳಾಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರುಗಳಿಗೂ ರವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಸಂಘದ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಹಾಗೂ ರಿಟರ್ನಿಂಗ್ ಅಧಿಕಾರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಸ್ಥಳ : ಮೈಸೂರು,
ದಿನಾಂಕ: 28-12-2023.

ಸಹಿ/– (ಜಿ.ಆರ್.ರಘು) ರಿಟರ್ನಿಂಗ್ ಅಧಿಕಾರಿ, ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ ನಿ., ಸಹಕಾರ ಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು.

ರಿಟರ್ನಿಂಗ್ ಆಫೀಸರ್, ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು ರವರ ಕಾರ್ಯಾಲಯ

ನಂ. 361/1 ಸಿ.ಹೆಚ್–15, ಡಿ.ಸುಬ್ಬಯ್ಯ ರಸ್ತೆ, ಚಾಮರಾಜಮೊಹಲ್ಲಾ, ಮೈಸೂರು–570024

" ಪತ್ರಿಕಾ ಪ್ರಕಟಣೆ "

ದೂರವಾಣಿ ಸಂಖ್ಯೆ : 0821-2422127

ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ.. ಮೈಸೂರು ಈ ಸಂಘದ ಆಡಳಿತ ಮಂಡಳಿಗೆ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಚುನಾವಣೆ ನಡೆಸಲು ದಿನಾಂಕ 14-01-2024ರ ಭಾನುವಾರ ಬೆಳಗ್ಗೆ 9-00 ಗಂಟೆಯಿಂದ ಸಂಜೆ 04-00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ನಡೆಸಲು ನಿಗಧಿಪಡಿಸಲಾಗಿರುತ್ತದೆ. ಚುನಾವಣೆಗೆ ಸ್ಪರ್ಧಿಸಲು ನಾಮಪತ್ರಗಳನ್ನು ದಿನಾಂಕ: 31-12-2023 ರಿಂದ 06-01-2024ರವರೆಗೆ ಬೆಳಗ್ಗೆ 11:00 ಗಂಟೆಯಿಂದ ಮಧ್ಯಾಹ್ನ 2-00 ಗಂಟೆಯವರೆಗೆ ಸಂಘದ ಕಛೇರಿಯಲ್ಲಿ ಸ್ವೀಕರಿಸಲಾಗುವುದು.

ತಿದ್ದುಪಡಿ ಪ್ರಕಟಣೆ

ಸಂಘದ ಎಲ್ಲಾ ಅರ್ಹ ಮತದಾರರಿಗೆ ದಿನಾಂಕ 27/12/2023 ರಂದು ಅಂಚೆ ಮೂಲಕ ಚುನಾವಣಾ ವೇಳಾಪಟ್ಟಿಯನ್ನು ರವಾನಿಸಲಾಗಿದ್ದು, ಸದರಿ ವೇಳಾಪಟ್ಟಿಯ ಕ್ರ. ಸಂ. 03 ಹಾಗೂ 04 ರಲ್ಲಿ ದಿನಾಂಕ 07/12/2023 ಎಂದು ತಪ್ಪಾಗಿ ಮುದ್ರಿತವಾಗಿರುವುದನ್ನು ದಿನಾಂಕ 07/01/2024 ಎಂದು ಓದಿಕೊಳ್ಳಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಘದ ಕಾರ್ಯದರ್ಶಿ ಹಾಗೂ ರಿಟರ್ನಿಂಗ್ ಅಧಿಕಾರಿಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಸ್ಥಳ :– ಮೈಸೂರು
ದಿನಾಂಕ:– 29/12/2023

ಸಹಿ/–
(ಹೆಚ್.ಕೆ.ಸತೀಶ್)
ರಿಟರ್ನಿಂಗ್ ಅಧಿಕಾರಿ,
ದಿ ಸಿಟಿಜನ್ಸ್ ಹೌಸ್ ಮಾರ್ಟ್‌ಗೇಜ್ ಮತ್ತು ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು

ಚಾಮರಾಜನಗರ–ರಾಮಸಮುದ್ರ
ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ
ಗುರುರಾಘವೇಂದ್ರ ಚಿತ್ರಮಂದಿರಕ್ಕೆ ಹೋಗುವ ರಸ್ತೆ, ಎಸ್.ಪಿ.ಆಫೀಸ್ ಹಿಂಭಾಗ, ಚೆನ್ನಿಪುರದಮೋಳೆ, ಚಾಮರಾಜನಗರ–571313
e-mail: udachngr@gmail.com ದೂರವಾಣಿ ಮತ್ತು ಫ್ಯಾಕ್ಸ್ ಸಂ:08226-223166, +918226-295066

ಸಂಖ್ಯೆ: ಚಾರಾನಅಪ್ರಾ/ತಾಂತ್ರಿಕ//50:50/ಸಾ.ಪ್ರ/2023-24 ದಿನಾಂಕ: 27-12-2023

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಚಾಮರಾಜನಗರದ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಸರ್ಕಾರದ ಪತ್ರ ಸಂಖ್ಯೆ: ನ.ಅ.ಇ:251/ಬೆಂರೂಪ್ರಾ 2022 (ಇ), ಬೆಂಗಳೂರು ದಿನಾಂಕ:30-06-2023 ರಂತೆ ಸಾರ್ವಜನಿಕರಿಗೆ/ಮಧ್ಯಮ ವರ್ಗದವರಿಗೆ ಅನುಕೂಲವಾಗುವ ರೀತಿಯಲ್ಲಿ ಸುಸಜ್ಜಿತವಾದ/ಯೋಜನಾ ಬದ್ಧವಾದ ನಿವೇಶನಗಳನ್ನು ವಿತರಿಸುವ ಸಲುವಾಗಿ ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ರೈತರ ಸಹಭಾಗಿತ್ವದಲ್ಲಿ 50:50 ಅನುಪಾತದಲ್ಲಿ ಬಡಾವಣೆಗಳನ್ನು ನಿರ್ಮಿಸಲು ಯೋಜನೆಯನ್ನು ಸಿದ್ಧಪಡಿಸಿ ಸರಕಾರದ ಅನುಮೋದನೆಗೆ ಸಲ್ಲಿಸುವಂತೆ ಸೂಚಿಸಿರುತ್ತಾರೆ. ಈ ಸಂಬಂಧ ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಗ್ರಾಮಗಳಲ್ಲಿ ಕಾಯ್ದಿರಿಸಲಾದ ಜಮೀನುಗಳಲ್ಲಿ ಸಾರ್ವಜನಿಕರಿಗೆ/ಮಧ್ಯಮ ವರ್ಗದವರಿಗೆ ಅನುಕೂಲವಾಗುವ ರೀತಿಯಲ್ಲಿ ಸುಸಜ್ಜಿತವಾದ/ಯೋಜನಾ ಬದ್ಧವಾದ ನಿವೇಶನಗಳನ್ನು ವಿತರಿಸಲು ಪ್ರಾಧಿಕಾರದ ವತಿಯಿಂದ ಭೂ ಮಾಲೀಕರು/ರೈತರ ಸಹಭಾಗಿತ್ವದ 50:50 ರ ಅನುಪಾತದಲ್ಲಿ ಬಡಾವಣೆಗಳನ್ನು ನಿರ್ಮಿಸಲು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಅವಕಾಶಗಳ ಯೋಜನೆಯನ್ನು ಸಿದ್ಧಪಡಿಸಿ ಸರಕಾರದ ಅನುಮೋದನೆಗೆ ಪ್ರಸ್ತಾವನೆಯನ್ನು ಶೀಘ್ರವಾಗಿ ಸಲ್ಲಿಸಲಾಗುವುದು ಈ ಸಂಬಂಧ ಭೂ ಮಾಲೀಕರು/ರೈತರ ಸಹಭಾಗಿತ್ವದಲ್ಲಿ ತಮ್ಮ ಜಮೀನುಗಳನ್ನು ಪ್ರಾಧಿಕಾರಕ್ಕೆ 50:50 ರ ಅನುಪಾತದಲ್ಲಿ ವಸತಿ ಯೋಜನೆ ಅಭಿವೃದ್ಧಿಪಡಿಸಲು ಆಸಕ್ತಿ ಇದ್ದವರು ತಮ್ಮ ಜಮೀನಿನ ಪಹಣಿ ಜಮೀನಿನ ಮಾಲೀಕತ್ವದ ದಾಖಲೆಗಳು ಮತ್ತು ಇನ್ನಿತರ ಅವಶ್ಯಕ ದಾಖಲಾತಿಗಳನ್ನು ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ತಿಳಿಸಲಾಗಿದೆ.

ಚಾಮರಾಜನಗರ–ರಾಮಸಮುದ್ರ ಸ್ಥಳೀಯ ಯೋಜನಾ ಪ್ರದೇಶದಲ್ಲಿನ ಮಹಾಯೋಜನೆಯ ಪ್ರಕಾರ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಪಟ್ಟಿ.

ಕ್ರ.ಸಂ	ತಾಲ್ಲೂಕು	ಗ್ರಾಮದ ಹೆಸರು	ಷರಾ
1	ಚಾಮರಾಜನಗರ	ಚಾಮರಾಜನಗರ	ನಗರಸಭೆ ವ್ಯಾಪ್ತಿ & ಕಂದಾಯ ಗ್ರಾಮ
2	ಚಾಮರಾಜನಗರ	ಚಾಮರಾಜನಗರ(ಗ್ರಾಮಾಂತರ) ಚನ್ನಿಪುರದಮೋಳೆ	ನಗರಸಭೆ ವ್ಯಾಪ್ತಿ & ಕಂದಾಯ ಗ್ರಾಮ
3	ಚಾಮರಾಜನಗರ	ರಾಮಸಮುದ್ರ	ನಗರಸಭೆ ವ್ಯಾಪ್ತಿ & ಕಂದಾಯ ಗ್ರಾಮ
4	ಚಾಮರಾಜನಗರ	ಕರಿನಂಜನಪುರ	ನಗರಸಭೆ ವ್ಯಾಪ್ತಿ & ಕಂದಾಯ ಗ್ರಾಮ
5	ಚಾಮರಾಜನಗರ	ಸೋಮವಾರಪೇಟೆ	ನಗರಸಭೆ ವ್ಯಾಪ್ತಿ & ಕಂದಾಯ ಗ್ರಾಮ
6	ಚಾಮರಾಜನಗರ	ಗಾಳಿಪುರ	ನಗರಸಭೆ ವ್ಯಾಪ್ತಿ & ಕಂದಾಯ ಗ್ರಾಮ
7	ಚಾಮರಾಜನಗರ	ಮೂಡ್ಲುಪುರ	ನಗರಸಭೆ ವ್ಯಾಪ್ತಿ & ಕಂದಾಯ ಗ್ರಾಮ
8	ಚಾಮರಾಜನಗರ	ಮಲ್ಲಯ್ಯನಪುರ	ಪೂರ್ಣ ಕಂದಾಯ ಗ್ರಾಮ
9	ಚಾಮರಾಜನಗರ	ಉತ್ತುವಳ್ಳಿ	ಪೂರ್ಣ ಕಂದಾಯ ಗ್ರಾಮ
10	ಚಾಮರಾಜನಗರ	ಕಾಡಹಳ್ಳಿ	ಪೂರ್ಣ ಕಂದಾಯ ಗ್ರಾಮ
11	ಚಾಮರಾಜನಗರ	ಮಸಗಾಪುರ	ಪೂರ್ಣ ಕಂದಾಯ ಗ್ರಾಮ
12	ಚಾಮರಾಜನಗರ	ಮನಗನಹಳ್ಳಿ	ಪೂರ್ಣ ಕಂದಾಯ ಗ್ರಾಮ
13	ಚಾಮರಾಜನಗರ	ಮುನಚನಹಳ್ಳಿ	ಪೂರ್ಣ ಕಂದಾಯ ಗ್ರಾಮ
14	ಚಾಮರಾಜನಗರ	ಬೂದಿತಿಟ್ಟು	ಪೂರ್ಣ ಕಂದಾಯ ಗ್ರಾಮ
15	ಚಾಮರಾಜನಗರ	ಮರಿಯಾಲ	ಪೂರ್ಣ ಕಂದಾಯ ಗ್ರಾಮ
16	ಚಾಮರಾಜನಗರ	ಗಂಗವಾಡಿ	ಪೂರ್ಣ ಕಂದಾಯ ಗ್ರಾಮ
17	ಚಾಮರಾಜನಗರ	ಮಾದಾಪುರ	ಪೂರ್ಣ ಕಂದಾಯ ಗ್ರಾಮ
18	ಚಾಮರಾಜನಗರ	ದೊಡ್ಡಮೋಳೆ	ಪೂರ್ಣ ಕಂದಾಯ ಗ್ರಾಮ
19	ಚಾಮರಾಜನಗರ	ಕೋಡಿಮೋಳೆ	ಪೂರ್ಣ ಕಂದಾಯ ಗ್ರಾಮ
20	ಚಾಮರಾಜನಗರ	ಹರದನಹಳ್ಳಿ	ಪೂರ್ಣ ಕಂದಾಯ ಗ್ರಾಮ
21	ಚಾಮರಾಜನಗರ	ಬಂಡಿಗೆರೆ	ಪೂರ್ಣ ಕಂದಾಯ ಗ್ರಾಮ
22	ಚಾಮರಾಜನಗರ	ಯಡಪುರ	ಪೂರ್ಣ ಕಂದಾಯ ಗ್ರಾಮ
23	ಚಾಮರಾಜನಗರ	ಶಿವಪುರ	ಪೂರ್ಣ ಕಂದಾಯ ಗ್ರಾಮ
24	ಚಾಮರಾಜನಗರ	ಚಂದಕವಾಡಿ	ಪೂರ್ಣ ಕಂದಾಯ ಗ್ರಾಮ
25	ಚಾಮರಾಜನಗರ	ಕೂಡ್ಲೂರು	ಪೂರ್ಣ ಕಂದಾಯ ಗ್ರಾಮ
26	ಚಾಮರಾಜನಗರ	ಬಸವನಪುರ	ಪೂರ್ಣ ಕಂದಾಯ ಗ್ರಾಮ
27	ಚಾಮರಾಜನಗರ	ಹಂಡ್ರಕಳ್ಳಿ	ಪೂರ್ಣ ಕಂದಾಯ ಗ್ರಾಮ

ಸಹಿ/– ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ
ಸಹಿ/– ಆಯುಕ್ತರು(ಪ್ರ) ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ
ಸಂ:ವಾಸಾಸಂಇ:ಚಾನಗರ:306:2023-24